SVAPNA VASAVADATTA NATAKA

॥ ಶ್ರೀಃ ॥

ಸ್ವಪ್ನವಾಸವದತ್ತ ನಾಟಕ

❋

ಗ್ರಂಥಕರ್ತರು:

ದೇವಶಿಖಾಮಣಿ ಅಳಸಿಂಗರಾಚಾರ್ಯರು

❋

ಪ್ರಕಾಶಕರು:

ಕ ರ್ಣಾ ಟ ಕ ಡಿ ಪೋ

ತಿರುವಲ್ಲಿಕ್ಕೇಣಿ, ಮದರಾಸು

1952

[ಬೆಲೆ ೧ ರೂ.

SVAPNA VASAVADATTA NATAKA

॥ ಶ್ರೀಃ ॥

ಸ್ವಪ್ನ ವಾಸವದತ್ತ ನಾಟಕ

ಗ್ರಂಥಕರ್ತರು :

ದೇವಶಿಖಾಮಣಿ ಅಳಸಿಂಗರಾಚಾರ್ಯರು

ಪ್ರಕಾಶಕರು :

ಕರ್ಣಾಟಕ ಡೆಪೋ

ತಿರುವಲ್ಲಿಕ್ಕೇಣಿ, ಮದರಾಸು

1952

[ಬೆಲೆ ೧ ರೂ.

ವಿಜ್ಞಾಪನೆ

ಬ್ರಹ್ಮಶ್ರೀ ಅಲಸಿಂಗರಾಚಾರ್ಯರಿಂದ ರಚಿತವಾದ ಸ್ವಪ್ನವಾಸವದತ್ತದ ಈ ಕನ್ನಡ ಭಾಷಾಂತರವು "ಪ್ರಬುದ್ಧ ಕರ್ಣಾಟಕ"ದ ಆರನೆಯ ಸಂಪುಟದಲ್ಲಿ ಪ್ರಕಾಶಿತವಾದ ಮೇಲೆ, ಅದನ್ನು ಗ್ರಂಥರೂಪವಾಗಿ ಪ್ರಕಟಿಸಬೇಕೆಂದು ಕರ್ಣಾಟಕ ಸಂಘವು ಸಂಕಲ್ಪಿಸಿತು. ಆಗ ಭಾಸನ ಕಾಲ ಕರ್ತೃತ್ವಾದಿ ವಿಚಾರಕವಾದ ಚರ್ಚೆಯು ವಿಶೇಷವಾಗಿ ನಡೆಯುತ್ತಿದ್ದು, ಅದರಲ್ಲಿ ನಾನು ಆಸಕ್ತಿಯನ್ನಿಟ್ಟುಕೊಂಡಿದ್ದುದರಿಂದ, ಈ ನಾಟಕಕ್ಕೆ ಉಪೋದ್ಘಾತವನ್ನು ಬರೆದು ಅದರಲ್ಲಿ ಕವಿಕಾವ್ಯ ವಿಚಾರಗಳನ್ನು ತಿಳಿಸುತ್ತೇನೆಂದು ಒಪ್ಪಿಕೊಂಡೆನು. ಹೀಗೆ ಒಪ್ಪಿಕೊಂಡು ಸುಮಾರು ೫ ವರ್ಷವಾಯಿತು. ಆದರೂ ನಾನು ಉಪೋದ್ಘಾತವನ್ನು ಬರೆಯದೆ, ಪುಸ್ತಕವೂ ಹೊರಕ್ಕೆ ಬಂದಂತಾಗದೆ ಅನೇಕರಿಗೆ ಅಸಮಾಧಾನವಾಯಿತು. ಇಂದಿನವರೆಗೂ ಭಾಸನ ವಿಚಾರದಲ್ಲಿ ಚರ್ಚೆ ನಡಿಯುತ್ತಲೇ ಇದ್ದು, ಸರ್ವಸಮ್ಮತವಾದ ಸಿದ್ಧಾಂತವಾವುದೂ ಆಗದೆ ನನಗೂ ಸಪ್ರಮಾಣವಾದ ಯಾವ ನಿಶ್ಚಯವೂ ಉಂಟಾಗದಿದ್ದುದ್ದೇ ಇಷ್ಟು ತಡಕ್ಕೆ ಕಾರಣ. ಈ ವಿಳಂಬಕ್ಕೆ ಕಾರಣಭೂತನಾದುದಕ್ಕಾಗಿ ಗ್ರಂಥಕರ್ತರ ಮತ್ತು ಪ್ರಕಾಶಕರ ಕ್ಷಮೆಯನ್ನು ಬೇಡುತ್ತೇನೆ.

ಸಂಸ್ಕೃತ, ಇಂಗ್ಲೀಷ್, ಫ್ರೆಂಚು, ಜರ್ಮನ್ ಮುಂತಾದ ಭಾಷೆಗಳಲ್ಲಿ ಭಾಸನ ವಿಚಾರ ಬಹು ಬೆಳೆದುಹೋಗಿದೆ. ಇದನ್ನು ತೀರ್ಮಾನಿಸುವುದಕ್ಕೆ ನಮ್ಮ ದೇಶದ ಮತ್ತು ಹೊರದೇಶದ ಸಂಸ್ಕೃತ ವಿದ್ವಾಂಸರನೇಕರು, ತಮ್ಮ ಬುದ್ಧಿ ಪಾಂಡಿತ್ಯಗಳನ್ನೆಲ್ಲಾ ಉಪಯೋಗಿಸಿದ್ದಾರೆ. ಅವರ ಲೇಖನಗಳನ್ನೆಲ್ಲಾ ಒಟ್ಟುಗೂಡಿಸಿದರೆ, ಅವೇ ದೊಡ್ಡದೊಡ್ಡ ಹಲವು ಪುಸ್ತಕಗಳಾಗುತ್ತವೆ. ಅದರಲ್ಲಿರುವ ಮುಖ್ಯ ಮುಖ್ಯ ಮತಗಳನ್ನೂ, ಆ ಮತಗಳಿಗೆ ಸಾಧಕ ಬಾಧಕಗಳಾಗಿ ಅವರು ಕೊಡುವ ಅಂಶಗಳನ್ನೂ, ಅವುಗಳ ಮೇಲೆ ಇತರರು ಹೇಳುವ ಖಂಡನ ಮಂಡನಗಳನ್ನೂ ಸೂಕ್ಷ್ಮವಾಗಿ ತಿಳಿಸೋಣವೆಂದು ಹೋಗಿ

ಆದೇ ಒಂದು ಗ್ರಂಥದಂತಾಯಿತು. ಇದು ಆಧುನಿಕ ಸಂಶೋಧನ ಕ್ರಮವನ್ನು ತಿಳಿಸುವುದಾದರೂ, ಅಷ್ಟು ವಿಸ್ತಾರವಾದ ಉಪೋದ್ಘಾತವು ಸಾಮಾನ್ಯ ಸಾಹಿತ್ಯ ಪಾಠಕರಿಗೆ ಅನವಶ್ಯವೂ, ಶುಷ್ಕವೂ ಆಗುವುದೆಂದು ಹೆದರಿ ಅದನ್ನು ಸ್ವತಂತ್ರವಾಗಿ ಪ್ರಕಟಿಸಬೇಕೆಂದಿದ್ದೇನೆ. ಆದುದರಿಂದ ಮುಂದೆ ಭಾಸಕವಿಯ ಸಮಾಚಾರವನ್ನು ಬಹು ಸೂಕ್ಷ್ಮವಾಗಿ ಕೊಟ್ಟಿದೆ; ಅದರಲ್ಲಿಯೂ ಆಕರ ಗಳನ್ನೂ, ಪ್ರಮಾಣಗಳನ್ನೂ, ಟಿಪ್ಪಣಿಗಳನ್ನೂ ಕೂಡ ಬೇಕಾದ ಎಡೆ ಗಳಲ್ಲೆಲ್ಲಾ ಕೊಟ್ಟಿಲ್ಲ. ಮತಭೇದಗಳು, ಚರ್ಚಾಸ್ವರೂಪಗಳು, ವಿಷಯ ವಿವರಣೆಗಳು — ಇವೆಲ್ಲಾ ಬೇಕಾದವರು, ಮೇಲೆ ಹೇಳಿದ ವಿಸ್ತಾರವಾದ ಲೇಖನವನ್ನು ನೋಡಬೇಕೆಂದು ಪ್ರಾರ್ಥಿಸುತ್ತೇನೆ.

ಬೆಂಗಳೂರು.
ಶುಕ್ಲ ಸಂವತ್ಸರ, ೧೯೩೯.

ಎ. ಆರ್. ಕೃಷ್ಣಶಾಸ್ತ್ರಿ.

ಭಾಸ ಕವಿ

ಈಗ ಹತ್ತೊಂಬತ್ತು ವರ್ಷಗಳ ಕೆಳಗೆ (೧೯೧೦) ಮ|| ಟ. ಗಣಪತಿ ಶಾಸ್ತ್ರಿಗಳು ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ ಗ್ರಂಥಶೇಖರಕ್ಕಾಗಿ ಸಂಚಾರಮಾಡುತ್ತಿದ್ದಾಗ, ೧. ಸ್ವಪ್ನನಾಟಕ, ೨. ಪ್ರತಿಜ್ಞಾನಾಟಕ, ೩. ಪಂಚರಾತ್ರ, ೪. ಚಾರುದತ್ತ, ೫. ದೂತಘಟೋತ್ಕಟ, ೬. ಅವಿಮಾರಕ, ೭. ಬಾಲಚರಿತ, ೮. ಮಧ್ಯಮ ವ್ಯಾಯೋಗ, ೯. ಕರ್ಣಭಾರ, ೧೦. ಊರುಭಂಗ, ೧೧. ಅಭಿಷೇಕ ನಾಟಕ, ೧೨. ಪ್ರತಿಮಾ ನಾಟಕ, ೧೩. ದೂತವಾಕ್ಯ—ವೆಂಬ ಹದಿಮೂರು ಸಂಸ್ಕೃತ ನಾಟಕಗಳು ದೊರೆತುವು, ಇವು ಭಾಸಕವಿ ಕೃತವೆಂದು ಮ|| ಗಣಪತಿಶಾಸ್ತ್ರಿಗಳು ತಮ್ಮ ಅಭಿಪ್ರಾಯವನ್ನು ಕೊಟ್ಟರು. ಅವುಗಳ ಕರ್ತೃವು ಭಾಸನೆಂದು ಈ ಗ್ರಂಥಗಳಲ್ಲಿಯೇ ಉಕ್ತವಾಗಿಬಿಟ್ಟಿದ್ದರೆ, ಯಾರೂ ಅದಕ್ಕೆ ಬದಲು ಹೇಳುವ ಹಾಗಿರಲಿಲ್ಲ. ಆದರೆ ಅದೇ ಇಲ್ಲವಾಗಿ ವಾದಕ್ಕೊಂದು ಮೂಲವಾಯಿತು.

ಕಾಳಿದಾಸನಿಗಿಂತ ಹಿಂದೆ ಭಾಸನೆಂಬ ಪ್ರಾಚೀನ ನಾಟಕಕರ್ತನಿದ್ದನೆಂದೂ, ಅವನು ಅನೇಕ ರೂಪಕಗಳನ್ನು ಬರೆದಿದ್ದನೆಂದೂ, ಅವುಗಳಲ್ಲಿ "ಸ್ವಪ್ನವಾಸವದತ್ತ" ವೇ ಶ್ರೇಷ್ಠವಾಗಿತ್ತೆಂದೂ † ಕಾಳಿದಾಸ ರಾಜಶೇಖರಾದಿಗಳ ‡ ವಾಕ್ಯದಿಂದ ತಿಳಿದುಬರುತ್ತದೆ. ಆದರೆ ಈ ನಾಟಕಗಳು ಸಿಕ್ಕುವವರೆಗೆ ಕಾವ್ಯಸಂಗ್ರಹಾದಿಗಳಲ್ಲಿ ಭಾಸನದೆಂದು ಉಕ್ತವಾಗಿರುವ ಅಲ್ಲೊಂದು ಇಲ್ಲೊಂದು ಶ್ಲೋಕ ಹೊರತು ಅವನ ಹೆಸರಿನಲ್ಲಿ ಯಾವುದೊಂದು ಗ್ರಂಥವೂ ದೊರೆತಿರಲಿಲ್ಲ.

---

† ಮಾಲವಿಕಾಗ್ನಿಮಿತ್ರದ ಪ್ರಸ್ತಾಪನೆ.

‡ ಭಾಸನಾಟಕ ಚಕ್ರೇಪಿ ಛೇಕೈಃ ಕ್ಷಿಪ್ತೇ ಪರೀಕ್ಷಿತುಂ ।
ಸ್ವಪ್ನವಾಸವದತ್ತಸ್ಯ ದಾಹಕೋಽಭೂನ್ನ ಪಾವಕಃ ||—ಸೂಕ್ತಿಮುಕ್ತಾವಳೀ.

ಮೇಲೆ ಹೇಳಿದ ಹದಿಮೂರು ರೂಪಕಗಳ ಸಂಬಂಧವಾಗಿ ನಿಶ್ಚಯಿಸ ಬೇಕಾದ ಅಂಶಗಳು ಯಾವುವೆಂದರೆ :—

೧. ಈ ರೂಪಕಗಳೆಲ್ಲ ಒಬ್ಬನೇ ಬರೆದುವೇ ?

೨. ಒಬ್ಬನೇ ಬರೆದುವಾದರೆ ಅವುಗಳನ್ನು ಬರೆದವನು ಭಾಸನೇ ?

೩. ಇವುಗಳ ಕಾಲವಾವುದು ?

ಈ ರೂಪಕಗಳ "ಸ್ಥಾಪನೆ", ಅವರಲ್ಲಿ ಮುದ್ರಾಲಂಕಾರ, ಕವಿಕಾವ್ಯ ಗಳ ಹೆಸರು ಉಕ್ತವಾಗಿಲ್ಲದಿರುವಿಕೆ, ಪ್ರಾಚೀನ ಸಂಸ್ಕೃತ ಪ್ರಾಕೃತ ರೂಪ ಗಳು, ಸುಲಭಶೈಲಿ, (ಭಾಸನೆಂದರೆ ಒಪ್ಪುವ) ರಸಪರಿಪುಷ್ಟಿ—ಇವುಗಳಲ್ಲಿ ಸಾದೃಶ್ಯವಿರುವುದರಿಂದ, ಇವೆಲ್ಲಾ ಏಕಕರ್ತೃಕವೆಂದೂ, ಸ್ವಪ್ನವಾಸವದತ್ತವು ಭಾಸನದೆಂದು ಗೊತ್ತಿರುವುದರಿಂದಲೂ ಕಾಳಿದಾಸಾದಿಗಳ ಉಕ್ತಿಗಳಿಗೆ ಮಾತೃಕಾರೂಪವಾದ ಭಾಗಗಳು, ಈ ಗ್ರಂಥಗಳಲ್ಲಿ ಸಿಕ್ಕಿರುವುದರಿಂದಲೂ, ಇವೆಲ್ಲವೂ ಭಾಸಕೃತವೇ ಎಂದೂ, ಈ ಗ್ರಂಥಗಳಲ್ಲಿ ಭರತಶಾಸ್ತ್ರ ವಿರೋಧವೂ, ಅಪಾಣಿನೀಯ ರೂಪಗಳೂ, ಕೌಟಲೀಯ ಅರ್ಥಶಾಸ್ತ್ರಾನುವಾದವೂ ಇರು ವುದರಿಂದ, ಈ ಗ್ರಂಥ ಕರ್ತೃವಾದ ಭಾಸನು ಈ ಪ್ರಮಾಣ ಗ್ರಂಥಗಳಿಗಿಂತ ಹಿಂದಿನ ಎಂದರೆ ಕ್ರಿ. ಪೂ. ಐದು ಅಥವಾ ಆರನೆಯ ಶತಮಾನದವನೆಂದೂ ಗಣಪತಿ ಶಾಸ್ತ್ರಿಗಳು ಅಭಿಪ್ರಾಯಪಟ್ಟರು.

ಮ|| ಶಾಸ್ತ್ರಿಗಳು ಈ ನಾಟಕಗಳನ್ನೂ, ಅವುಗಳ ವಿಚಾರವಾಗಿ ತಮ್ಮ ಅಭಿಪ್ರಾಯವನ್ನೂ ಪ್ರಕಟಿಸಿದ ಮೇಲೆ ಸಂಸ್ಕೃತ ವಿದ್ವಾಂಸರಲ್ಲಿ ಎರಡು ಪಂಗಡವಾಯಿತು — ಒಂದು ಪಂಗಡದವರು (ಇವರೇ ಹೆಚ್ಚುಮಂದಿ) ಅವ ರನ್ನು ಅನುಮೋದಿಸಿದರು. †ಮತ್ತೊಂದು ಪಂಗಡದವರು ಇವುಗಳಿಗೂ "ಆಶ್ಚರ್ಯ ಚೂಡಾಮಣಿಗೂ" (೮ ಅಥವಾ ೯ನೆಯ ಶತ) ಸಾದೃಶ್ಯಗಳಿರು ವುದರಿಂದ ಇವು ಭಾಸನು ಬರೆದವುಗಳಲ್ಲ, ಯಾರೋ ಕೇರಳ ದೇಶದವರು ಈಚೆಗೆ ರಚಿಸಿದುವು, ಎಂದರು. ‡ಆದರೆ ಇವರು ಯಾರೂ ಕಾಲ

---

† ಕೀತ್; ವಿನ್‌ಡರ್‌ನಿಟ್ಸ್, ಸುಕ್ತನ್‌ಕರ್, ಇತ್ಯಾದಿ.

‡ ಬಾರ್ನೆಟ್, ಪಿಶರೋಡಿಗಳು, ಕುಪ್ಪುಸ್ವಾಮಿಶಾಸ್ತ್ರಿಗಳು, ಇತ್ಯಾದಿ.

ವಿಚಾರವಾಗಿ ಮ|| ಗಣಪತಿಶಾಸ್ತ್ರಿಗಳ ಅಭಿಪ್ರಾಯವನ್ನು ಒಪ್ಪಲಿಲ್ಲ. ಪಾಶ್ಚಾತ್ಯ ವಿದ್ವಾಂಸರು ನಿರ್ದೇಶಿಸುವ ಕಾಲವು ಕ್ರಿ. ಶ. ೨ನೆಯ ಶತಮಾನದಿಂದ ೭ನೆಯ ಶತಮಾನದವರೆಗೂ, ಭಾರತೀಯ ವಿದ್ವಾಂಸರು ನಿರ್ದೇಶಿಸುವುದು ಕ್ರಿ. ಪೂ. ೫ನೆಯ ಶತಮಾನದಿಂದ ಕ್ರಿ. ಶ. ೧೦ನೆಯ ಶತಮಾನದವರೆಗೂ ಹೋಗುತ್ತದೆ. ಇಂಗ್ಲೆಂಡಿನ ಸುಪ್ರಸಿದ್ಧ ಸಂಸ್ಕೃತ ವಿದ್ವಾಂಸರೂ, ಸಂಸ್ಕೃತ ಸಾಹಿತ್ಯಚರಿತ್ರಲೇಖಕರೂ ಆದ ಮೆಗ್ಡಾನಲ್‌ರವರು ಸಂದಿಗ್ಧ ಮನಸ್ಕರಾಗಿರುವುದರಿಂದ, ಇವುಗಳ ಕಾಲವನ್ನು ಹೇಳಿಲ್ಲ. ಕೀತ್‌ರವರು ಸುಮಾರು ಕ್ರಿ. ಶ. ೩೦೦ ಇರಬಹುದೆಂದು ಅಭಿಪ್ರಾಯಪಡುತ್ತಾರೆ.

ಈ ಗ್ರಂಥಗಳ ಕರ್ತೃವು—ಅವನ ಕಾಲ ಯಾವುದೇ ಆಗಿರಲಿ—ಭಾಸನಲ್ಲವೆಂದು ಹೇಳುವುದಕ್ಕೆ ಪ್ರತಿಪಕ್ಷದವರು ಕೊಟ್ಟಿರುವ ಕಾರಣಗಳು ಅಷ್ಟು ಪ್ರಬಲವಾದುವುಗಳೇನೂ ಅಲ್ಲ. ಅವುಗಳಲ್ಲಿ ಪ್ರಬಲವಾದದ್ದು ಒಂದು ಮಾತ್ರ ಇದೆ. ಅದೇನೆಂದರೆ, ಹಿಂದಿನ ಗ್ರಂಥಗಳಲ್ಲಿ ಭಾಸನದೆಂದು ಅನುವಾದ ಮಾಡಿರುವ ಶ್ಲೋಕಗಳಲ್ಲಿ ಒಂದೂ ಈ ನಾಟಕಗಳಲ್ಲಿ ಕಂಡುಬರುವುದಿಲ್ಲ. ಸಂಗ್ರಹಕಾರರೋ ಲೇಖಕರೋ ತಪ್ಪುಮಾಡಿರಬಹುದು, ಅಥವಾ ಭಾಸನ ಬೇರೆ ನಾಟಕಗಳಲ್ಲಿ ಇವು ಸಿಕ್ಕಬಹುದು, ಎಂದು ಇಟ್ಟುಕೊಳ್ಳೋಣ ಆದರೂ ಸಂದೇಹಕ್ಕೆ ಇದೊಂದು ಕಾರಣವಾಯಿತು. "ಭಾಸಕೃತ ಸ್ವಪ್ನವಾಸವದತ್ತ"ವೆಂದೇ ನಾಟ್ಯದರ್ಪಣದಲ್ಲಿ ಹೇಳಿರುವ ಒಂದು ಶ್ಲೋಕವೂ ಈ ನಾಟಕದಲ್ಲಿ ಕಂಡುಬರುವದಿಲ್ಲ. ಆದರೆ ಹಿಂದೆ ಇದ್ದ ಸ್ವಪ್ನವಾಸವದತ್ತವು ಬಹುಮಟ್ಟಿಗೆ ಈ ಸ್ವಪ್ನವಾಸವದತ್ತದಂತೆಯೇ ಇದ್ದಿರಬೇಕೆಂದು ನಿರ್ಧರಿಸುವುದಕ್ಕೆ ಕೆಲವು ಸಾಧನಗಳು ಸಿಕ್ಕಿವೆ. ಆದುದರಿಂದ ಭಾಸ ಪ್ರತಿಪಕ್ಷದವರು ಈ ಸ್ವಪ್ನವಾಸವದತ್ತವು ಭಾಸನ ಸ್ವಪ್ನವಾಸವದತ್ತದ ಆಧಾರದ ಮೇಲೆ ಹುಟ್ಟಿದ್ದು; ಪ್ರಾಯಶಃ ಶಾಕ್ಯರು (ಕೇರಳದೇಶದ ನಟರು) ಮಾಡಿಕೊಂಡ ಅದರ ರಂಗಪ್ರತಿ ಇರಬೇಕು—ಎಂದು ಸಿದ್ಧಾಂತಕ್ಕೆ ಬಂದಿರುತ್ತಾರೆ.

ಸ್ವಪ್ನವಾಸವದತ್ತದ ವಿಚಾರವಾಗಿ ಇಷ್ಟು ದೂರ ಒಪ್ಪಿಕೊಂಡರೆ, ಈ ಗುಂಪೆಲ್ಲವೂ ಭಾಸ ಕರ್ತೃಕವೆಂದು ಹೇಳುವುದಕ್ಕೆ ಇರುವ ಅಡಚಣೆ

ಬಹುಮಟ್ಟಿಗೆ ಕಡಮೆಯಾದ ಹಾಗಾಯಿತು. ಏಕೆಂದರೆ, ಇವೆಲ್ಲವೂ ಏಕಕರ್ತೃಕಗಳೆಂದು ಹೇಳುವಮಟ್ಟಿಗೆ ನಾನಾವಿಧವಾದ ಸಾದೃಶ್ಯಗಳು ಇವುಗಳಲ್ಲಿವೆ. ಆದರೆ ಇಲ್ಲಿಯೂ, ಪಂಚರಾತ್ರ, ಅವಿಮಾರಕ, ಊರುಭಂಗ ಇವುಗಳ ಕಷ್ಟಶೈಲಿಗೂ, ಸ್ವಪ್ನವಾಸವದತ್ತ, ಪ್ರತಿಜ್ಞಾ ಯೌಗಂಧರಾಯಣ ಪ್ರತಿಮಾನಾಟಕ ಮುಂತಾದುವುಗಳ ಸುಲಭಶೈಲಿಗೂ ಸಂಬಂಧವೇ ಇಲ್ಲ. ಈ ಗ್ರಂಥಗಳಲ್ಲಿ ಸ್ಪಷ್ಟವಾದ ಎರಡು ಗುಂಪುಗಳಿವೆ; ಆದುದರಿಂದ ಇವು ಒಬ್ಬನು ಬರೆದುದು ಹೇಗೆ?—ಎಂದು ವಾದಿಸುವವರಿದ್ದಾರೆ. ಒಬ್ಬನು ಆಜೀವನವೂ ಒಂದೇ ಶೈಲಿಯಲ್ಲಿಯೇ ಏಕೆ ಬರೆಯಬೇಕು? ವಿಷಯಕ್ಕೂ ವಯಸ್ಸಿಗೂ ತಕ್ಕಂತೆ ಅದು ಬದಲಾಯಿಸುವುದಿಲ್ಲವೇನು? ಅಂತು ಈ ಪಕ್ಷದವರ ಅಭಿಪ್ರಾಯದಲ್ಲಿಯೂ, ಸ್ವಪ್ನವಾಸವದತ್ತಾದಿ ಸುಲಭ ಶೈಲಿಯ ಗ್ರಂಥಗಳಾದರೂ ಭಾಸನದೆಂದಹಾಗಾಯಿತು.

ಭಾಸನ ಕಾಲವಾವುದು? ಅವನು ಕಾಳಿದಾಸನಿಗಿಂತ ಹಿಂದೆ (ಎಷ್ಟು ಹಿಂದೆ?) ಇದ್ದಿರಬೇಕೆಂಬುದು ನಿಜ. ಆದರೆ ಕಾಳಿದಾಸನ ಕಾಲ ನಿಶ್ಚಿತವಾಗಿದ್ದರೆ ತಾನೇ ಭಾಸನ ಕಾಲದ ವಿಚಾರ? ಕಾಳಿದಾಸನ ಕಾಲವು ಸುಮಾರು ಕ್ರಿ. ಶ. ೪೦೦ ಇರಬಹುದೆಂದು ಅನೇಕರ ಮತವಿರುವಂತೆ ಕಾಣುತ್ತದೆ. ಆದುದರಿಂದ ಪ್ರಕೃತಕ್ಕೆ ಕೀತ್‌ರವರು ಅಭಿಪ್ರಾಯಪಡುವಂತೆ, ಭಾಸನು ಸು. ಕ್ರಿ. ಶ. ೩೦೦ ರಲ್ಲಿ ಇದ್ದಿರಬಹುದೆಂದು ಇಟ್ಟುಕೊಳ್ಳುವುದು ಸಪ್ರಮಾಣವಾಗಿರುವಂತೆ ಕಾಣುತ್ತದೆ. ಮುಂದೆ ಇದು ತಪ್ಪೆಂದು ನಿರ್ಧರವಾಗುವುದಾದರೆ ಆಗಲಿ ಒಪ್ಪುತಪ್ಪುಗಳಾವುದನ್ನೂ ಮಾಡದಿರುವುದಕ್ಕಿಂತ ದೊಡ್ಡವರ ಜೊತೆಯಲ್ಲಿ ತಪ್ಪುಮಾಡುವುದೇ ಉತ್ತಮ.

ಈ ಗ್ರಂಥಗಳ ಕವಿ ಯಾರೇ ಆಗಿರಲಿ, ಯಾವಯಾವ ನಾಟಕಗಳನ್ನೇ ಬರೆದಿರಲಿ, ಯಾವಾಗಲೇ ಬರೆದಿರಲಿ—ಅಂತು ಈ ಹದಿಮೂರು ನಾಟಕಗಳನ್ನು ಕಂಡುಹಿಡಿದು ಪ್ರಕಾಶಪಡಿಸಿ ಮ|| ಗಣಪತಿಶಾಸ್ತ್ರಿಗಳವರು ಸಂಸ್ಕೃತ ರೂಪಕ ಪ್ರಪಂಚಕ್ಕೂ ಆ ಮೂಲಕ ಇತರ ಸಾಹಿತ್ಯಲೋಕಕ್ಕೂ ಅತಿಶಯವಾದ ಉಪಕಾರವನ್ನು ಮಾಡಿದ್ದಾರೆ.

ಸ್ವಪ್ನವಾಸವದತ್ತ

ಭಾಸನು ಬರೆದುವುಗಳೆಂದು ಪ್ರಸಿದ್ಧವಾಗಿರುವ ಹದಿಮೂರು ನಾಟಕಗಳಲ್ಲಿ—ಮಧ್ಯಮ ವ್ಯಾಯೋಗ, ದೂತ ಘಟೋತ್ಕಚ, ಕರ್ಣಭಾರ, ಊರುಭಂಗ, ಪಂಚರಾತ್ರ, ದೂತವಾಕ್ಯ,—ಈ ಆರೂ ಮಹಾಭಾರತ ಕಥೆಯನ್ನು ಅನುಸರಿಸಿ ಬರೆದುವು. ಪ್ರತಿಮಾನಾಟಕ, ಅಭಿಷೇಕನಾಟಕ ಇವೆರಡೂ ರಾಮಾಯಣದ ಕಥೆಯನ್ನು ಅನುಸರಿಸಿ ಬರೆದುವು. ಬಾಲಚರಿತವಲ್ಲಿರುವುದು ಭಾಗವತದ ಕೃಷ್ಣಲೀಲೆಯ ಕಥೆ; ಪ್ರತಿಜ್ಞಾ ಯೌಗಂಧರಾಯಣ, ಸ್ವಪ್ನವಾಸವದತ್ತ ಇವೆರಡರ ವಸ್ತುವೂ ಬೃಹತ್ಕಥೆಯಿಂದ ತೆಗೆದುಕೊಂಡದ್ದು; ಇದರಂತೆಯೇ ಅವಿಮಾರಕ, ಚಾರುದತ್ತ ಇವೆರಡಕ್ಕೂ ಬೃಹತ್ಕಥೆಯೇ ಮೂಲವಾಗಿದ್ದರೂ ಇರಬಹುದು.

ಬೃಹತ್ಕಥೆಯು ಈಗ ಇಲ್ಲ. ಅದನ್ನು ಗುಣಾಢ್ಯನೆಂಬುವನು ಸುಮಾರು ಕ್ರಿ. ಶ. ಎರಡು ಅಥವಾ ಮೂರನೆಯ ಶತಮಾನದಲ್ಲಿ [1]ಪೈಶಾಚಿ (ಎಂಬ ಪ್ರಾಕೃತ) ಭಾಷೆಯಲ್ಲಿ ಬರೆದನೆಂದು ಊಹಿಸಲ್ಪಟ್ಟಿದೆ. ಅದರಲ್ಲಿದ್ದ ಕಥೆ ಮಾತ್ರ ಬೃಹತ್ಕಥಾಮಂಜರಿ, ಬೃಹತ್ಕಥಾ ಶ್ಲೋಕ ಸಂಗ್ರಹ, ಕಥಾಸರಿತ್ಸಾಗರ (ಕ್ರಿ. ಶ. ೧೧ ನೆಯ ಶತ) ಎಂಬ ಸಂಸ್ಕೃತ ಗ್ರಂಥಗಳಲ್ಲಿ ಈಗ ಉಳಿದಿದೆ. ಈ ಗ್ರಂಥಗಳಲ್ಲಿ (ಸೋಮದೇವ ಕೃತವಾದ) ಕಥಾಸರಿತ್ಸಾಗರವೇ ವಿಸ್ತಾರವೂ, ಪ್ರಸಿದ್ಧವೂ ಆದದ್ದು. ಅದರಲ್ಲಿ ಉದಯನನ ಕಥೆಯು ಸಂಗ್ರಹವಾಗಿ, ಹೀಗಿದೆ :—

ವತ್ಸದೇಶದಲ್ಲಿ ಉದಯನನೆಂಬ .ರಾಜನಿದ್ದನು. ಆತನಿಗೆ ವೀಣೆ ನುಡಿಸುವುದರಲ್ಲಿಯೂ, ಆ ವೀಣಾ ಗಾನದಿಂದ ಆನೆಗಳನ್ನು ಮೋಹಗೊಳಿಸಿ

---

(1) ಇದು ಇಂಡಿಯದ ವಾಯವ್ಯ ದಿಕ್ಕಿನಲ್ಲಿ ಪ್ರಚಾರದಲ್ಲಿತ್ತೆಂದು ಕೆಲವರೂ ದ್ರಾವಿಡ ಪ್ರಾಂತದಲ್ಲಿ ಪ್ರಚಾರದಲ್ಲಿದ್ದ ವಿಂಧ್ಯ ಭಾಷಾ ಭೇದವಿರಬೇಕೆಂದು ಕೆಲವರೂ ಊಹಿಸುತ್ತಾರೆ.

ಅವುಗಳನ್ನು ಹಿಡಿಯುವುದರಲ್ಲಿಯೂ ಬಹು ಆಸಕ್ತಿ. ಆದುದರಿಂದ ತನ್ನ ರಾಜ್ಯಭಾರವನ್ನು ಯೌಗಂಧರಾಯಣನೇ ಮುಂತಾದ ಮಂತ್ರಿಗಳ ಆಡಳಿತಕ್ಕೆ ಒಪ್ಪಿಸಿ ತಾನು ನಿಶ್ಚಿಂತನಾಗಿರುತ್ತ ವೀಣೆಯ ಗಾನ, ಆನೆಯ ಬೇಟೆಗಳಲ್ಲಿಯೇ ಇರುತ್ತಿದ್ದನು.

ಇತ್ತ ಉಜ್ಜಯನೀ ನಗರದಲ್ಲಿ ಚಂಡಮಹಾಸೇನನೆಂಬ ರಾಜನಿಗೆ ಗೋಪಾಲಕ, ಪಾಲಕ ಎಂಬ ಇಬ್ಬರು ಗಂಡುಮಕ್ಕಳೂ, ವಾಸವದತ್ತೆ ಎಂಬ ಒಬ್ಬಳು ಹೆಣ್ಣುಮಗಳೂ ಇದ್ದರು. ವತ್ಸರಾಜನು ಅನುರೂಪನಾದ ವರನಾದುದರಿಂದ ವಾಸವದತ್ತೆಯನ್ನು ಅವನಿಗೇ ಕೊಟ್ಟು ಮದುವೆಮಾಡ ಬೇಕೆಂದು ಚಂಡಮಹಾಸೇನನು ಯೋಚಿಸಿದನು. ಆದರೆ ತನಗೂ ವತ್ಸ ರಾಜನಿಗೂ ಬದ್ಧದ್ವೇಷ. ಆದುದರಿಂದ ವಾಸವದತ್ತೆಯನ್ನು ಏನಾದರೂ ಉಪಾಯದಿಂದ ಅವನಿಗೆ ಮದುವೆಮಾಡಿಕೊಟ್ಟುಬಿಟ್ಟರೆ, ಒಳ್ಳೆಯ ಅಳಿಯ ನನ್ನು ಸಂಪಾದಿಸಿದ ಹಾಗೂ ಆಯಿತು. ಶತ್ರುವನ್ನು ಜಯಿಸಿ ಸ್ವಾಧೀನ ಪಡಿಸಿಕೊಂಡ ಹಾಗೂ ಆಯಿತು — ಎಂದು ಯೋಚಿಸಿ, ಒಬ್ಬ ದೂತನ ಮೂಲಕ, "ವಾಸವದತ್ತೆಯು ತಮ್ಮಲ್ಲಿ ಶಿಷ್ಯವೃತ್ತಿಮಾಡಬೇಕೆಂದಿರುವುದ ರಿಂದ ತಾವು ಇಲ್ಲಿಗೆ ಬಂದು ಅವಳಿಗೆ ವೀಣೆಯನ್ನು ಕಲಿಸಿಕೊಡಬೇಕು" ಎಂದು ವತ್ಸರಾಜನಿಗೆ ಹೇಳಿಕಳುಹಿಸಿದನು. ಅದಕ್ಕೆ ಪ್ರತಿಯಾಗಿ ವತ್ಸ ರಾಜನು, "ತಮ್ಮ ಮಗಳು ನನ್ನ ಶಿಷ್ಯಳಾಗಬೇಕೆಂಬ ಅಪೇಕ್ಷೆಯಿದ್ದರೆ ಇಲ್ಲಿಗೇ ಆಕೆಯನ್ನು ಕಳುಹಿಸಿಕೊಡೋಣವಾಗಲಿ" ಎಂದು ದರ್ಪದಿಂದ ಹೇಳಿಕಳುಹಿಸಿದನು. ಹೀಗೆ ಮಾಡುವುದು ತನ್ನ ಗೌರವಕ್ಕೆ ಕಡಿಮೆಯೆಂದು ಚಂಡಮಹಾಸೇನನು ಅದಕ್ಕೆ ಒಪ್ಪದೆ, ತಾನಿದ್ದ ಸ್ಥಳಕ್ಕೇ ವತ್ಸ ರಾಜನನ್ನು ಬರಮಾಡಿಕೊಳ್ಳುವುದಕ್ಕೆ ಒಂದು ತಂತ್ರವನ್ನು ಹೂಡಿದನು. ಅವನಿಗೆ ಆನೆಯ ಬೇಟೆಯಲ್ಲಿ ತುಂಬ ಆಸೆಯೆಂಬುದು ಗೊತ್ತು; ಆದುದರಿಂದ ಆನೆಯಂತೆಯೇ ಇದ್ದ ಒಂದು ಸೊಗಸಾದ ಯಂತ್ರದ ಆನೆಯನ್ನು ಮಾಡಿಸಿ, ಅದರ ಒಳಗೆ ಗುಟ್ಟಾಗಿ ಶೂರರಾದ ಕೆಲವು ಭಟರು ಇರುವಂತೆ ಏರ್ಪಡಿಸಿ ಅದನ್ನು ವಿಂಧ್ಯಪರ್ವತದ ಕಾಡಿನಲ್ಲಿ ಓಡಾಡಿಸುತ್ತಿದ್ದನು.

ಇದನ್ನು ನೋಡಿ ಮೋಸಹೋದ ಭೃತ್ಯರು “ವಿಂಧ್ಯಾರಣ್ಯಕ್ಕೆ ಒಂದು ದೊಡ್ಡ ಆನೆಯು ಬಂದಿದೆ” ಎಂದು ರಾಜನಿಗೆ ತಿಳಿಸಲು, ಅವನು ಅದನ್ನು ಹಿಡಿಯುವುದಕ್ಕೋಸ್ಕರ ವೀಣೆ ತೆಗೆದುಕೊಂಡು ಹೋಗಿ, ಅದರ ಮುಂದೆ ನುಡಿಸುತ್ತ, ಅದಕ್ಕನುಸಾರವಾಗಿ ಇಂಪಾದ ಧ್ವನಿಯಿಂದ ಹಾಡುತ್ತ ಮೆಲ್ಲ ಮೆಲ್ಲಗೆ ಅದರ ಸಮೀಪಕ್ಕೆ ಹೋದನು. (ಆದರೆ ಮನಸ್ಸೆಲ್ಲವೂ ಸಂಗೀತದ ಲ್ಲಿಯೇ ಸೇರಿದ್ದುದರಿಂದಲೂ, ಸಂಜೆಯ ಮಬ್ಬು ಕತ್ತಲೆ ಕವಿದಿದ್ದುದರಿಂದಲೂ. ಅದು ಮಾಯಾಗಜವೆಂಬುದು ರಾಜನಿಗೆ ಗೊತ್ತಾಗಲಿಲ್ಲ.) ಆ ಮಾಯಾ ಗಜವು ಸಂಗೀತವನ್ನು ಕೇಳುವುದಕ್ಕೋ ಎಂಬಂತೆ ಕಿವಿಯನ್ನು ನೆಟ್ಟಗೆ ಮಾಡಿಕೊಂಡು ಆತನ ಸಮೀಪಕ್ಕೆ ಬಂದುಬಂದು ಹಿಂದಕ್ಕೆ ಹೋಗುತ್ತಾ, ರಾಜನನ್ನು ಬಹುದೂರವಾಗಿ ತೆಗೆದುಕೊಂಡು ಹೋಯಿತು. ಹೀಗೆ ಬಹು ದೂರ ಹೋದಮೇಲೆ ಒಳಗೆ ಅಡಗಿಕೊಂಡಿದ್ದ ವೀರಪುರುಷರು ತಟ್ಟನೆ ಹೊರಗೆ ಬಂದು ರಾಜನನ್ನು ಮುತ್ತಿ ಉಜ್ಜಯಿನಿಗೆ ಸೆರೆ ಹಿಡಿದುಕೊಂಡು ಹೋದರು. ಅಲ್ಲಿ ರಾಜನು ಚಂಡಮಹಾಸೇನನ ಅಪ್ಪಣೆಯಂತೆ ಅವನ ಅರಮನೆಯಲ್ಲಿದ್ದುಕೊಂಡು ವಾಸವದತ್ತೆಗೆ ಸಂಗೀತವನ್ನು ಹೇಳಿಕೊಡುತ್ತ ಆಕೆಯಲ್ಲಿ ಅನುರಕ್ತನಾದನು. ವಾಸವದತ್ತೆಯು ಅವನಲ್ಲಿಯೇ ಆಸಕ್ತಳಾಗಿ ಅವನನ್ನು ಎಡೆಬಿಡದೆ ಉಪಚರಿಸುತ್ತಿದ್ದಳು.

ವತ್ಸರಾಜನು ಸೆರೆಸಿಕ್ಕಿದ ವರ್ತಮಾನವು ಅವನ ರಾಜಧಾನಿಯಾದ ಕೌಶಾಂಬಿಗೆ ಮುಟ್ಟಲು ಯೌಗಂಧರಾಯಣನು “ಕುಳ್ಳನಾದ ಬೋಳದಲೆಯ ಮುದಿ ಹುಚ್ಚನಂತೆ”ಯೂ, ವಸಂತಕನು ‘‘ನರಗಳುಬ್ಬಿ, ಡೊಳ್ಳು ಹೊಟ್ಟೆಯ ಕೆಟ್ಟ ಮುಸುಡಿಯ ಹಲ್ಲುಬೀರ’’ ನಂತೆಯೂ ವೇಷಹಾಕಿಕೊಂಡು, ಉಜ್ಜ ಯನಿಗೆ ಹೋಗಿ ಅಲ್ಲಿ ನಾನಾ ವಿನೋದಗಳನ್ನೂ ಮಾಡತೊಡಗಿದರು. ಇವರ ವಿನೋದಗಳ ಸಮಾಚಾರವು ಅಂತಃಪುರಕ್ಕೂ ತಲಪಲು ವಾಸವದ ತ್ತೆಯು ಅದನ್ನು ತಾನೂ ನೋಡಬೇಕೆಂದು ಅವರನ್ನು ತನ್ನ ನಾಟ್ಯಶಾಲೆಗೆ ಬರಮಾಡಿಕೊಂಡಳು. ಅಲ್ಲಿ ಯೌಗಂಧರಾಯಣನು ಸಂದರ್ಭನೋಡಿಕೊಂಡು ತಮ್ಮ ಅರಸನನ್ನು ಕಂಡು, ಸಂಕೋಲೆಗಳನ್ನು ಮುರಿಯುವ ಹಾಗೂ, ವಾಸವದತ್ತೆಯ ವೀಣೆಯ ತಂತಿಗಳಿಗೆ ಹಚ್ಚುವುದರಿಂದಲೇ ಆಕೆಯನ್ನು

ಸ್ವಾಧೀನಪಡಿಸುವ ಹಾಗೂ ವಶೀಕರಣ ಔಷಧಗಳನ್ನು ಕೊಟ್ಟು ಹೊರಟು ಹೋದನು. ವಸಂತಕನು ಅಲ್ಲಿಯೇ ಇದ್ದುಕೊಂಡು ರಾಜಪುತ್ರಿಯ ಮನೋ ರಂಜನೆಯಾಗುವಂತೆ ಹಾಸ್ಯ ಮತ್ತು ಅದ್ಭುತ ರಸಗಳಿಂದ ಕೂಡಿದ ಮನೋ ಹರವಾದ ಕಥೆಗಳನ್ನು ಹೇಳುತ್ತ ಕಾಲಕಳೆಯುತ್ತಿದ್ದನು. ಒಂದುದಿನ ರಾತ್ರಿ ಯೌಗಂಧರಾಯಣನು ಮಾಡಿದ ಏರ್ಪಾಡಿನಂತೆ ವಾಸವದತ್ತೆಯ ಭದ್ರಾವತಿ ಯೆಂಬ ಆನೆಯನ್ನು ತರಿಸಿ, ಅದರ ಮಾವುತನ ಸಹಾಯದಿಂದ ವತ್ಸರಾಜ, ವಾಸವದತ್ತೆ, ಅವಳ ಸಖಿಯಾದ ಕಾಂಚನಮಾಲೆ ಈ ಮೂವರೂ ತಪ್ಪಿಸಿಕೊಂಡು ಹೊರಟು ಹೋದರು. ಚಂಡಮಹಾಸೇನನಿಗೆ ಬೇಕಾದದ್ದು ಅದೇ! ಆದುದರಿಂದ ಎಲ್ಲರೂ ಕೌಶಾಂಬಿಯಲ್ಲಿ ಸೇರಲು, ವಿಧಿವಿಹಿತವಾಗಿ ಮದುವೆ ನಡೆಯಿತು.

ಕೆಲವು ಕಾಲದ ಮೇಲೆ ಒಂದಾನೊಂದು ದಿನ ವತ್ಸರಾಜನು ಚಾಪಲ್ಯ ದಿಂದ ಪೂರ್ವಪರಿಚಿತೆಯಾದ ವಿರಚಿಕೆಯೆಂಬ ಅಂತಃಪುರಚಾರಿಣಿಯೊಂದಿಗೆ ಏಕಾಂತದಲ್ಲಿ ಇದ್ದುದನ್ನು ಕಂಡು ವಾಸವದತ್ತೆಯು ಸಿಟ್ಟುಗೊಂಡಳು. ಆಗ ವತ್ಸರಾಜನು ತನ್ನ ಹೆಂಡತಿಗೆ ಶರಣಾಗತನಾಗಿ ಆಕೆಯ ಕ್ಷಮಾಪಣೆಯನ್ನು ಬೇಡಿಕೊಳ್ಳಬೇಕಾಯಿತು. ಮತ್ತೊಂದುಸಾರಿ, ತನ್ನ ಉದ್ಯಾನವನದ ಲತಾ ಗೃಹದಲ್ಲಿ ಮಂಜುಲಿಕೆಯೆಂಬ ಒಬ್ಬ ಹುಡುಗಿಯನ್ನು ಕಂಡನು. ಸೌಂದರ್ಯ ಸಮುದ್ರದಲ್ಲಿ ಹುಟ್ಟಿದ ಎರಡನೇ ಲಕ್ಷ್ಮಿಯೋ ಎಂಬಂತೆ ಅತಿಮನೋಹರಳಾ ಗಿದ್ದ ಆಕೆಯನ್ನು ಕಂಡಮಾತ್ರದಿಂದಲೇ ಮೋಹಪರವಶನಾದ ಆ ರಾಜನು, ವಸಂತಕನ ಸಹಾಯದಿಂದ ಆಕೆಯನ್ನು ಗಾಂಧರ್ವವಿಧಿಗನುಸಾರವಾಗಿ ಗುಟ್ಟಿನಲ್ಲಿ ಮದುವೆಮಾಡಿಕೊಂಡನು. ಮಂಜುಲಿಕೆಯು ಒಬ್ಬ ರಾಜಪುತ್ರಿ; ಆಕೆಯನ್ನು ವಾಸವದತ್ತೆಯ ಅಣ್ಣನಾದ ಗೋಪಾಲಕನು ಗೆದ್ದುತಂದು ತನ್ನ ತಂಗಿಗೆ ಬಳಿವಳಿಯಾಗಿ ಕೊಟ್ಟಿದ್ದನು. ಆದುದರಿಂದ ಈ ಸಂಗತಿಯು ವಾಸವದತ್ತೆಗೆ ತಿಳಿದು ಆಕೆಗೆ ಪತಿಯಮೇಲೆ ತುಂಬ ಆಗ್ರಹವುಂಟಾಯಿತು. ಈ ಕೋಪವನ್ನು ಶಮನಮಾಡುವುದಕ್ಕಾಗಿ ರಾಜನು ಆಕೆಯ ಸಖಿಯಾದ ಮತ್ತು ಆಕೆಗೆ ಬಳುವಳಿಯಾಗಿ ಬಂದಿದ್ದ ಸಾಂಕೃತ್ಯಾಯಿನಿ ಎಂಬ ಸನ್ಯಾಸಿ ಯನ್ನು ಆಶ್ರಯಿಸಿದನು. ಆ ಸಾಂಕೃತ್ಯಾಯಿನಿಯು ಹೇಗೋ ದೇವಿಯನ್ನು

ಸಮಾಧಾನಗೊಳಿಸಿ ಆಕೆಯ ಅಪ್ಪಣೆಯಂತೆ ರಾಜನಿಗೆ ಆ ಮಂಜುಲಿಕೆಯನ್ನರ್ಪಿಸಿದನು.

ಹೀಗೆ ವಿಷಯಾಸಕ್ತನಾಗಿದ್ದ ರಾಜನನ್ನು ನೋಡಿ ಯೌಗಂಧರಾಯಣನು ತನ್ನ ಬುದ್ಧಿಶಕ್ತಿಯಿಂದ ಅವನ ರಾಜ್ಯವನ್ನು ವಿಸ್ತರಿಸಬೇಕೆಂದು ಯೋಚಿಸಿ, ಅದಕ್ಕಾಗಿ ಮಗಧ ದೇಶದ ರಾಜನಾದ ಪ್ರದ್ಯೋತನ ಮಗಳು ಪದ್ಮಾವತಿಯನ್ನು ವತ್ಸರಾಜನಿಗೆ ಮದುವೆಮಾಡಿಸಬೇಕೆಂದು ನಿಶ್ಚಯಿಸಿದನು. ಆದರೆ ವಾಸವದತ್ತೆಯ ಮೇಲಿನ ಪ್ರೀತಿಯಿಂದ ಇದಕ್ಕೆ ವತ್ಸರಾಜನು ಒಪ್ಪುವಂತಿರಲಿಲ್ಲ. ಹೆಣ್ಣಿನ ಮೇಲೆ ಹೆಣ್ಣು ಕೊಡುವುದಕ್ಕೆ ಪ್ರದ್ಯೋತನೂ ಒಪ್ಪುತ್ತಿರಲಿಲ್ಲ. ಆದುದರಿಂದ ಮಂತ್ರಿಯು ವಾಸವದತ್ತೆ ಗೋಪಾಲಕರೊಡನೆ ಯೋಚಿಸಿ, ಇದಕ್ಕೆ ಒಂದು ಉಪಾಯವನ್ನು ಹೂಡಿದನು. ಮೃಗಯಾವಿಹಾರಕ್ಕೆ ಅತಿ ರಮಣೀಯವಾಗಿ, ತಮ್ಮ ದೇಶದ ಕೊನೆಯ ಸರಹದ್ದಿನಲ್ಲಿಯೂ, ಮಗಧದೇಶಕ್ಕೆ ಹತ್ತಿರದಲ್ಲಿಯೂ ಇರುವ ಲಾವಾಣಕವೆಂಬ ಪ್ರಾಂತಕ್ಕೆ ವಾಸವದತ್ತಾಸಮೇತನಾದ ವತ್ಸರಾಜನನ್ನು ಉಪಾಯದಿಂದ ಕರೆದೊಯ್ದು, ಬೇಟೆಯ ನೆಪದಿಂದ ಆತನನ್ನು ದೂರಮಾಡಿ, ಅಂತಃಪುರಕ್ಕೆ ಬೆಂಕಿಯನ್ನು ಹತ್ತಿಸಿ, ವಾಸವದತ್ತೆಯು ಸುಟ್ಟುಹೋದಳೆಂಬ ವರ್ತಮಾನವನ್ನು ಹರಡಿಸನು. ಅನಂತರ ತಾನು ವೃದ್ಧಬ್ರಾಹ್ಮಣನಂತೆಯೂ, ಆಕೆಯು ಬ್ರಾಹ್ಮಣ ಸ್ತ್ರೀಯಂತೆಯೂ ವಸಂತಕನು ಒಕ್ಕಣ್ಣಿನ ವಟುವಂತೆಯೂ ವೇಷ ಮರೆಸಿಕೊಂಡು ಮಗಧರಾಜನ ಪಟ್ಟಣವನ್ನು ಸೇರಿದನು. ಆ ಸಮಯದಲ್ಲಿ ಉದ್ಯಾನವನದಲ್ಲಿದ್ದ ಮಗಧರಾಜನ ಪುತ್ರಿಯಾದ ಪದ್ಮಾವತಿಯ ಸಮೀಪಕ್ಕೆ ಹೋಗುತ್ತಿರುವಾಗ, ದ್ವಾರಪಾಲಕರು ಅಲ್ಲಿಗೆ ಹೋಗದಂತೆ ಅಡ್ಡಿಮಾಡುತ್ತಿರಲು ಒಳಗಿದ್ದ ಪದ್ಮಾವತಿಯು ಬ್ರಾಹ್ಮಣವೇಷದಲ್ಲಿರುವ ಆ ರಾಜಸುತೆಯನ್ನು ಕಂಡಮಾತ್ರದಿಂದಲೇ ಆನಂದವನ್ನು ಹೊಂದಿ ದ್ವಾರಪಾಲಕರಿಂದ ಅವರನ್ನು ತನ್ನ ಸಮೀಪಕ್ಕೆ ಕರೆಯಿಸಿಕೊಂಡು, ಅವರು ಯಾರೆಂದು ವಿಚಾರಿಸಿದಳು. ಯೌಗಂಧರಾಯಣನು, "ಅವಂತಿಕೆಯೆಂಬ ಈ ಹುಡುಗಿಯು ನನ್ನ ತಂಗಿ. ಆಕೆಯ ಗಂಡನು ಎಲ್ಲಿಯೋ ಹೊರಟುಹೋಗಿದ್ದಾನೆ. ಆತನನ್ನು ಹುಡುಕಿ ತರುವವರೆಗೂ ಇವಳನ್ನು ನಿನ್ನಲ್ಲಿ ಬಿಟ್ಟುಹೋಗಿರುತ್ತೇನೆ.

ಸೀನೀಕೆಯನ್ನು ದಯವಿಟ್ಟು ನಿನ್ನ ಸಮೀಪದಲ್ಲಿಟ್ಟುಕೊಂಡಿರಬೇಕು. ಈ ಕುರುಡ ಹುಡುಗನು ಅವಳ ತಮ್ಮ. ಅವಳಿಗೆ ಒಬ್ಬಳೇ ಇರಬೇಕೆಂಬ ವ್ಯಥೆಯಾಗದಂತೆ, ಇವನೂ ಜೊತೆಯಲ್ಲಿರುವನು" ಎಂದು ಹೇಳಿ, ಪದ್ಮಾವತಿಯು ಹಾಗೇ ಆಗಲೆಂದು ಅಂಗೀಕರಿಸಿದ ಮೇಲೆ ಹೊರಟುಹೋದನು. ವಾಸವದತ್ತೆಯ ದೊಡ್ಡ ಗುಣವನ್ನು ನೋಡಿ ಅವಳು ಯಾರೋ ಉತ್ತಮ ಸ್ತ್ರೀಯೇ ಆಗಿರಬೇಕೆಂದು ಪದ್ಮಾವತಿಯು ಆಕೆಯನ್ನು ತನ್ನ ಸರಿಸಮಾನವಾಗಿಯೇ ಉಪಚರಿಸುತ್ತಿದ್ದಳು. ಹೀಗಿರಲು ಒಂದು ದಿವಸ ವಾಸವದತ್ತೆಯು ಆ ಪದ್ಮಾವತಿಗೆ ತಾನು ಹಿಂದೆ ವತ್ಸರಾಜನಿಂದ ಕಲಿತಿದ್ದ, ಅಳಿಸಿಹೋಗದಿರುವ ತಿಲಕವನ್ನು ಮಾಡಿಕೊಟ್ಟಳು. ಇದು ಪದ್ಮಾವತಿಯ ತಾಯಿಗೆ ತಿಳಿದು, ಆ ಮೂಲಕ ಅವಳ ಪ್ರಸಿದ್ಧಿ ಹೆಚ್ಚಿತು.

ಯೌಗಂಧರಾಯಣನು ನೆನೆಸಿದ್ದಂತೆಯೇ ಎಲ್ಲವೂ ನಡೆಯಿತು. ಮಗಧದೇಶದ ರಾಜನು ಹೆಣ್ಣುಕೊಡುವುದಾಗಿ ಹೇಳಿಕಳುಹಿಸಿದನು. ವತ್ಸರಾಜನೂ ಒಪ್ಪಿದನು. ಗೋಪಾಲಕ ಯೌಗಂಧರಾಯಣ ಮುಂತಾದವರ ಇರುವಿಕೆಯನ್ನು ನೋಡಿ ಅವನಿಗೆ ವಾಸವದತ್ತೆಯ ಮರಣವು ಅನುಮಾನವಾಗಿತ್ತು. ಈ ಮದುವೆಯ ಮೂಲಕ ಆಕೆಯನ್ನು ಪುನಃ ಪಡೆಯಬಹುದೆಂಬ ದೂರದ ಆಸೆಯೂ ಇತ್ತು. ಇಲ್ಲದಿದ್ದರೆ ಅವನು ಈ ಲಗ್ನಕ್ಕೆ ಸಮ್ಮತಿಸುತ್ತಿರಲಿಲ್ಲ. ವಾಸವದತ್ತೆಯು ತನ್ನ ಚಿಂತೆ ಕಳವಳವನ್ನು ನುಂಗಿಕೊಂಡಿರುತ್ತ, ಮದುವೆ ಹತ್ತಿರಕ್ಕೆ ಬಂದಾಗ ಹಿಂದಿನಂತೆ ಪದ್ಮಾವತಿಗೆ ಅಳಿಸಿಹೋಗದ ತಿಲಕವನ್ನೂ ಬಾಡದಿರುವ ಪುಷ್ಪಮಾಲಿಕೆಯನ್ನೂ ರಚಿಸಿದಳು. ಮದುವೆಗೆ ಬಂದ ವತ್ಸರಾಜನಿಗೆ ಈ ತಿಲಕಮಾಲಿಕೆಗಳನ್ನು ನೋಡಿ ತನ್ನ ಸಂಶಯವು ಇನ್ನೂ ದೃಢಪಟ್ಟಿತು. ಅಂತೂ ಮದುವೆಯೇನೋ ನಡೆದುಹೋಯಿತು. ಅಲ್ಲಿ ಹೆಚ್ಚು ದಿನವಿದ್ದರೆ ರಾಜನು ಅಂತಃಪುರದಲ್ಲಿ ವಾಸವದತ್ತೆಯನ್ನು ಕಂಡು ಅವಾಂತರವಾದೀತೆಂದು ಯೌಗಂಧರಾಯಣನು ಕೂಡಲೇ ಊರಿಗೆ ಹಿಂತಿರುಗುವುದಕ್ಕೆ ಏರ್ಪಾಡುಮಾಡಿದನು. ವಸಂತಕನೂ, ವಾಸವದತ್ತೆಯೂ ಯಾರಿಗೂ ಗೊತ್ತಾಗದಂತೆ ಪರಿವಾರದೊಡನೆ ಹಿಂದೆ ಬರುತ್ತಿದ್ದರು. ಹೀಗೆ ಪ್ರಯಾಣಮಾಡುತ್ತಿರುವ ವತ್ಸರಾಜನು ಲಾವಾಣಕಕ್ಕೆ

ಬರಲು ಅವನ ಮನಸ್ಸು ವಾಸವದತ್ತೆಯನ್ನು ನೆನೆಯತೊಡಗಿತು. ಇತ್ತ ವಾಸವದತ್ತೆಯೂ ಮನಸ್ಸು ತಡೆಯಲಾರದೆ ತನ್ನ ಜೊತೆಯಲ್ಲಿದ್ದ ಪ್ರಧಾನರನ್ನೆಲ್ಲಾ ಹೊರಗೆ ನಿಲ್ಲಿಸಿ ಅರ್ಧರಾತ್ರಿ ಸಮಯದಲ್ಲಿ ತಾನೊಬ್ಬಳೇ ಗೋಪಾಲಕನ ಮನೆಯೊಳಗೆ ಪ್ರವೇಶಿಸಿ ಅಲ್ಲಿ ಅಣ್ಣನನ್ನು ಕಂಡು ಅಳಲಾರಂಭಿಸಿದಳು. ಈ ಮಧ್ಯೆ ಅವಳ ಜೊತೆಯಲ್ಲಿದ್ದ ಪ್ರಧಾನರು ಪದ್ಮಾವತಿಯ ಹತ್ತಿರಕ್ಕೆ ಹೋಗಿ, ''ಏನು ಕಾರಣದಿಂದಲೋ ಅವಂತಿಕೆಯು ನಮ್ಮನ್ನು ಬಿಟ್ಟು ತಾನೊಬ್ಬಳೇ ಗೋಪಾಲಕ ರಾಜನ ಮನೆಗೆ ಹೋದಳು'' ಎಂದು ತಿಳಿಸಿದರು. ಇದನ್ನು ಕೇಳಿ ಪದ್ಮಾವತಿಯು ಸಂಶಯಪಟ್ಟು ಗಂಡನ ಸಮಕ್ಷಮದಲ್ಲಿಯೇ ಅವರನ್ನು ಕುರಿತು, ''ನೀವೀಗಲೇ ಅವಂತಿಕೆಯಲ್ಲಿಗೆ ಹೋಗಿ ನಿನ್ನನ್ನು ಬ್ರಾಹ್ಮಣನು ನನ್ನಲ್ಲಿ ನ್ಯಾಸವಾಗಿಟ್ಟಿರುವುದರಿಂದ ನಿನಗಿಲ್ಲೇನು ಕೆಲಸ? ನಾನಿದ್ದಲ್ಲಿಗೆ ಬರಬೇಕು, ಎಂದು ನಾನು ಹೇಳಿದೆನೆಂದು ತಿಳಿಸಿ'' ಎಂದು ಆಜ್ಞೆ ಮಾಡಿದಳು. ಇದನ್ನು ಕೇಳಿ ವತ್ಸರಾಜನು ಅವರು ಹೋದಮೇಲೆ ಗುಟ್ಟಾಗಿ ಆ ತಿಲಕ ಮತ್ತು ಮಾಲೆಗಳನ್ನು ರಚಿಸಿದವರಾರೆಂದು ಪದ್ಮಾವತಿಯನ್ನು ಕೇಳಲು, ಆಕೆಯು ಅವಂತಿಕೆಯೆಂಬ ಒಬ್ಬ ಹುಡುಗಿಯನ್ನು ಒಬ್ಬ ಬ್ರಾಹ್ಮಣನು ತನ್ನ ಹತ್ತಿರ ಬಿಟ್ಟು ಹೋಗಿರುವುದಾಗಿಯೂ, ಅವುಗಳು ಆಕೆ ರಚಿಸಿದುವೆಂದೂ ಹೇಳಿದಳು. ವತ್ಸರಾಜನು ಇದನ್ನು ಕೇಳಿದ ಕೂಡಲೇ ಗೋಪಾಲಕನ ಮನೆಯಲ್ಲಿ ವಾಸವದತ್ತೆ ಇರಬಹುದೆಂದು ಯೋಚಿಸಿ, ಆ ಕ್ಷಣವೇ ಅಲ್ಲಿಗೆ ಹೋಗಿ ಗೋಪಾಲಕ, ವಾಸವದತ್ತೆ, ತನ್ನ ಮಂತ್ರಿಗಳು, ವಸಂತಕ ಎಲ್ಲರೂ ಇರುವುದನ್ನು ಕಂಡನು. ಇಷ್ಟು ದಿನಗಳಿಂದ ಪ್ರವಾಸದಲ್ಲಿದ್ದು ಚಿಂತೆಯಿಂದ ಬಿಳಿಚಿಕೊಂಡಿರುವ ತನ್ನ ಪ್ರಿಯಪತ್ನಿ ವಾಸವದತ್ತೆಯನ್ನು ನೋಡಿ ವತ್ಸರಾಜನು ಮೂರ್ಛೆಹೋದನು. ವಾಸವದತ್ತೆಯೂ ಇದನ್ನು ನೋಡಿ ಸಹಿಸಲಾರದೆ ತಾನು ಮಾಡಿದ ಕೆಲಸಕ್ಕಾಗಿ ತನ್ನನ್ನೇ ತಾನು ದೂಷಿಸಿಕೊಂಡು ಅಳುತ್ತಿದ್ದಳು. ಇಷ್ಟು ಹೊತ್ತಿಗೆ ಪದ್ಮಾವತಿಯು ಈ ಗದ್ದಲವನ್ನು ಕೇಳಿ ಅಲ್ಲಿಗೆ ಬಂದು ನೋಡಲು ಆಕೆಗೂ ದುಃಖವುಂಟಾಯಿತು. ಆಗ ಯೌಗಂಧರಾಯಣನು ಮುಂದೆ ಬಂದು, ''ಇದು, ಮಗಧ ರಾಜಪುತ್ರಿಯು ದೊರೆಯುವುದರಿಂದ ಮಹಾರಾಜನು ಈ ಭೂಮಂಡಲವನ್ನು

ಸುಲಭವಾಗಿ ಗೆದ್ದು ಚಕ್ರವರ್ತಿಯಾಗಬಹುದೆಂದು ಯೋಚಿಸಿಕೊಂಡು ನಾನು ಮಾಡಿದ ತಪ್ಪೇ ಹೊರತು ಇದರಲ್ಲಿ ದೇವಿಯ ಅಪರಾಧವು ಸ್ವಲ್ಪವೂ ಇಲ್ಲ. ಈ ದೇವಿಯು ಪ್ರವಾಸದಲ್ಲಿದ್ದಾಗ ಈಕೆಯ ಸಚ್ಚರಿತ್ರಕ್ಕೆ ಈಕೆಯ ಸಪತ್ನಿಯಾದ ಪದ್ಮಾವತಿಯೇ ಸಾಕ್ಷಿ'' ಎಂದು ಹೇಳಿ ಎಲ್ಲವನ್ನೂ ವಿವರಿಸಿ ಸಮಾಧಾನಪಡಿಸಿದನು.

(ಕಥಾಮುಖ ಮತ್ತು ಲಾವಾಣಕ ಲಂಬಕ)

ಈ ಕಥೆಯ ಪೂರ್ವಭಾಗವು "ಪ್ರತಿಜ್ಞಾ ಯೌಗಂಧರಾಯಣ" ದಲ್ಲಿಯೂ, ಉತ್ತರಭಾಗವು "ಸ್ವಪ್ನವಾಸವದತ್ತ" ದಲ್ಲಿಯೂ ಪ್ರತಿಪಾದಿತ ವಾಗಿವೆ. ಈ ನಾಟಕಗಳಲ್ಲಿ ಒಂದೊಂದಕ್ಕೆ ಎಷ್ಟು ಹೊಂದಿಕೆಯಿದೆ ಎಂದರೆ ಕವಿಯು ಮೊದಲು ಇವೆರಡನ್ನೂ ಹತ್ತು ಅಂಕದ ಒಂದೇ ಪ್ರಕರಣವಾಗಿ ಬರೆದಿದ್ದಿರಬಹುದೆಂದೂ, ಈಚೆಗೆ ನಟರು ಅದನ್ನು ಒಡೆದು ಎರಡು ನಾಟಕ ಗಳನ್ನಾಗಿ ಮಾಡಿಕೊಂಡಿರಬಹುದೆಂದೂ ಕೆಲವರು ಸೂಚಿಸಿದ್ದಾರೆ. ಈ ನಾಟಕದ ಹೃದಯದಂತಿರುವ ಸ್ವಪ್ನವನ್ನು ದೃಷ್ಟಿಯಲ್ಲಿಟ್ಟುಕೊಂಡು ಕವಿಯು ಅದಕ್ಕೆ "ಸ್ವಪ್ನವಾಸವದತ್ತ"ವೆಂಬ ಹೆಸರು ಕೊಟ್ಟಿದ್ದಾನೆ. ಅವಳ ಭಾಗ್ಯವು "ಚಕ್ರಾರಪಂಕ್ತಿ"ಯಂತೆ ಕೆಳಕ್ಕೆ ಇಳಿದು ಪುನಃ ಮೇಲಕ್ಕೆ ಹೋದದ್ದೇ ಇದರ ವಸ್ತು—ಪದ್ಮಾವತೀ ಚರಿತ್ರೆಯಲ್ಲ. ಆದ್ದರಿಂದಲೇ ಇದನ್ನು ಕವಿಯು "ಪದ್ಮಾವತೀ ಕಲ್ಯಾಣ" ವೆಂದು ಕರೆದಿಲ್ಲ. ಪದ್ಮಾವತಿಯಂಥ ರೂಪ ಯೌವನ ಗುಣಸಂಪನ್ನೆಯಾದ ಧನಕನಕ ರಾಜ್ಯಗಳನ್ನು ತರುವ ಸುಂದರಿ ಸಿಕ್ಕಿದರೂ, ಅಂಥ ನವಸಮಾಗಮ ಕಾಲದಲ್ಲಿಯೂ ಉದಯನನಿಗೆ ವಾಸವ ದತ್ತೆಯಲ್ಲಿ ಎಂಥ ಪ್ರೇಮವಿತ್ತು ಎಂದು ತೋರಿಸುವುದಕ್ಕೋಸ್ಕರ ಪದ್ಮಾ ವತಿಯೇ ಹೊರತು ಅವಳು ನಾಯಿಕೆಯಲ್ಲ. ವಾಸವದತ್ತೆ ಪರಿಜನಗ ಳಂತಿದ್ದರೂ ನಮ್ಮ ಗೌರವ ಗಮನಗಳು ಅವಳ ಮೇಲೇ ಇರುತ್ತವೆ. ಪದ್ಮಾವತಿ ಇನ್ನೂ ಮದುವೆಯಾಗಿಲ್ಲದ, ಕೃತ್ರಿಮವನ್ನು ಕಾಣದ ಹುಡುಗಿ. ಅವಳಲ್ಲಿ ಜೋರಿಲ್ಲ, ಜಬರುದಸ್ತಿಲ್ಲ, ಮುಂದಾಳುತನವಿಲ್ಲ. ಅವಳ ಈ

ಸಾತ್ವಿಕ ಸ್ವಭಾವಕ್ಕೆ ಸಲ್ಲಬೇಕಾದ ಪ್ರೀತಿ ವಿಶ್ವಾಸಗಳು ಕೊನೆಯಲ್ಲಿ ಪೂರ್ಣವಾಗಿ ಬಂದರೂ ಅವಳಲ್ಲಿ ನಾಯಿಕೆಯಾಗಬಲ್ಲ ಔನ್ನತ್ಯವಿಲ್ಲ. ಇದು "ವತ್ಸರಾಜ ಚರಿತ್ರೆ" ಎನ್ನಬಹುದಾಗಿತ್ತು. ಆದರೆ ವತ್ಸರಾಜನು ವಾಸವದತ್ತಾ ಪದ್ಮಾವತಿಯರ ಗುಣಾತಿಶಯಗಳನ್ನು ಚಿತ್ರಿಸುವುದಕ್ಕೆ ಇರುವ ಗೋಡೆ ಮಾತ್ರ. ವಾಸವದತ್ತೆಯು ಬರದೇ ಇದ್ದ ಅಂಕವಿಲ್ಲ; ಉದಯನನು ಮೊದಲು ರಂಗಕ್ಕೆ ಬರುವುದು ನಾಲ್ಕನೆಯ ಅಂಕದಲ್ಲಿ.

ಶಾಕುಂತಲ, ಉತ್ತರರಾಮಚರಿತ್ರೆ ಮುಂತಾದ ನಾಟಕಗಳನ್ನು ಓದಿದವರಿಗೆ ತಟ್ಟನೆ ದೃಷ್ಟಿಗೆ ಬೀಳತಕ್ಕದ್ದು "ಸ್ವಪ್ನವಾಸವದತ್ತ" ದ ಸಣ್ಣ ಆಕಾರ. ಆದರೆ ನಾಟಕವು ಬಹು ಚಿಕ್ಕದಾದರೂ ಇದರಲ್ಲಿ ಮೂಲ ಕಥೆಯ ಅಂಗಗಳೆಲ್ಲವೂ ಬಂದಿವೆ—ಆದರೆ ಕೆಲವು ಸ್ವಲ್ಪ ಬದಲಾಗಿವೆ. ಮತ್ತೆ ಕೆಲವು ವಿಸ್ತಾರವಾಗಿಯೋ ಸಂಗ್ರಹವಾಗಿಯೋ ಇವೆ. ಇನ್ನೂ ಕೆಲವು ಸೂಚಿತವಾಗಿವೆ.

ಕೆಲವು ನಾಟಕ ಸಂಘಗಳವರು ಶಾಕುಂತಲ ನಾಟಕವನ್ನಾಡುತ್ತ ಕಾಳಿದಾಸನ ವಸ್ತುರಚನೆಯಲ್ಲಿ ನ್ಯೂನತೆಯನ್ನು ಆರೋಪಿಸಿ, ತಮ್ಮ ಆಟವನ್ನು ವಿಶ್ವಾಮಿತ್ರ ಮೇನಕೆಯರ ವೃತ್ತಾಂತದಿಂದ ಆರಂಭಿಸುವರು. ಇವರು ವಿಶ್ವಾಮಿತ್ರ ಮೇನಕೆಯರ ಜನನದಿಂದ ಏಕೆ ಮೊದಲು ಮಾಡುವುದಿಲ್ಲವೊ! ನಾಟಕ ಗ್ರಂಥದಲ್ಲಿ ಯಾವಯಾವ ಸಂಗತಿಯನ್ನು ಇಟ್ಟುಕೊಳ್ಳಬೇಕು, ಯಾವುದನ್ನು ಬಿಡಬೇಕು, ಯಾವುದನ್ನು ವಿಸ್ತರಿಸಬೇಕು, ಯಾವುದನ್ನು ಸಂಕುಚಿಸಬೇಕು ಎಂಬ ವಿವೇಕವನ್ನು ಅರಿಯುವುದು ಕಷ್ಟ. ಇದರ ಜೊತೆಗೆ ಎಂಥ ಸನ್ನಿವೇಶಗಳನ್ನು ಕಲ್ಪಿಸಿದರೆ, ಅದರಲ್ಲಿ ತಿಳಿಯಬೇಕಾದ ವೃತ್ತಾಂತಗಳೆಲ್ಲಾ ತಿಳಿದು, ಪಾತ್ರಗಳ ಗುಣಾವಗುಣಗಳೂ ಪ್ರಕಾಶಕ್ಕೆ ಬಂದು ಅವುಗಳ ನಡೆನುಡಿಗಳು ಆನಂದಗೊಳಿಸಿ ನಮ್ಮ ಮನಸ್ಸಿನ ಮೇಲೆ ಉದ್ದಿಷ್ಟ ಪರಿಣಾಮವನ್ನು ಉಂಟುಮಾಡುವುವೆಂಬುದನ್ನು ಕಂಡುಕೊಳ್ಳಬೇಕು. ಇದಕ್ಕೆ ನಾಟಕವನ್ನು ರಚಿಸಬಲ್ಲ ನೈಪುಣ್ಯ ವಿಶೇಷವನ್ನು ಪಡೆದ ಕವಿಯಾಗಬೇಕು. "ಸ್ವಪ್ನವಾಸವದತ್ತ" ನಾಟಕದಲ್ಲಿ ಎಲ್ಲಿ ನೋಡಿದರೂ ಇಂಥ ನೈಪುಣ್ಯವು ಕಂಗೊಳಿಸುತ್ತದೆ.

ನಾಟಕಕ್ಕೆ ಬರುವುದಕ್ಕಿಂತ ಮುಂಚೆ ಅದರ “ಸ್ಥಾಪನೆ'ಯ ವಿಚಾರ ವಾಗಿ ಒಂದು ಮಾತು. “ಸ್ಥಾಪನೆಯೂ ಮುಂದಿನ ನಾಟಕದಂತೆ ಬಹು ಸಂಗ್ರಹವಾಗಿದೆ. ಇದರಲ್ಲಿ ನಟಿ ಇಲ್ಲ, ಅವಳ ಋತುವರ್ಣನೆ ಇಲ್ಲ ಕವಿಕಾವ್ಯ ವಿವರಣೆಯಂತೂ ಇಲ್ಲವೇ ಇಲ್ಲ. ಸೂತ್ರಧಾರನು ಇನ್ನೂ ಸಭಿಕರಲ್ಲಿ ವಿಜ್ಞಾ ಪಿಸುತ್ತಿರುವಷ್ಟರಲ್ಲಿಯೇ . ಒಳಗೆ ಗದ್ದಲ. ಅದನ್ನು ಕೇಳಿ, ಮಗಧರಾಜನ ಭೃತ್ಯರು ತಪೋವನದಲ್ಲಿ ಒಬ್ಬ ಕನ್ಯೆಯನ್ನು ಕರೆದುಕೊಂಡು ಹೋಗುತ್ತ ಅಲ್ಲಿದ್ದ ಜನರನ್ನು ದಾರಿ ಬಿಡಿಸುತ್ತಿದ್ದರೆಂದು ತಿಳಿದು ಅವನು ಹೆಚ್ಚು ಮಾತನ್ನಾಡದೆ, ಹೇಳದೆ ಕೇಳದೆ ಹೊರಟುಹೋಗುವನು. ಆದರೂ, ಆ ಕಥೆ ಯಾವುದು, ಎಲ್ಲಿಂದ ಮೊದಲಾಗಿದೆ ಎಂದು ತಿಳಿಯುವುದಕ್ಕೆ ಇಷ್ಟು ಸಾಕಾಗಿದೆ. ಇದಕ್ಕಿಂತ ಸಂಗ್ರಹವಾದ ಸ್ಥಾಪನೆಯಿಲ್ಲ. ಕೆಲವು ಪ್ರಸ್ತಾ ವನೆಗಳನ್ನು ನೋಡಿದರೆ ನಾಟಕ ಕರ್ತರು ತಾವು ಬರೆಯುತ್ತಿರುವುದು ಆತ್ಮ ಚರಿತ್ರೆಯೆಂದು ಭ್ರಮಿಸಿರುವ ಹಾಗೆ ತೋರುತ್ತದೆ. ಇಂಥ ಉದ್ದುದ್ದವಾದ ಕವಿಚರಿತ್ರೆಯನ್ನೂ, ಅಕಾಲ ಋತುವರ್ಣನೆಯನ್ನೂ ಕೇಳಿ ಕೇಳಿ ಬೇಜಾರಾಗಿ ಗದ್ದಲಮಾಡುತ್ತ ನಾಟಕದ ಆರಂಭವನ್ನು ಎದುರು ನೋಡುವ ಸಭ್ಯರಿಗೆ ಈ ಸಂಕೋಚವು ಬಹು ಸಂತೋಷವನ್ನುಂಟುಮಾಡುತ್ತದೆ.

ಮೊದಲನೆಯ ಅಂಕದಲ್ಲಿ ಯೌಗಂಧರಾಯಣನು ವಾಸವದತ್ತೆಯನ್ನು ಆವಂತಿಕೆ ಎಂಬ ಹೆಸರಿನಿಂದ ಪದ್ಮಾವತಿಯಲ್ಲಿ ನ್ಯಾಸವಾಗಿಟ್ಟು ಹೋಗುವನು. ಇದು ವಿಸ್ತಾರವಾಗಿ ಪ್ರತಿಪಾದಿತವಾಗಿದೆ. “ಪುಷ್ಪಕ ಭದ್ರಕ ಮೊದಲಾದ ದೈವಜ್ಞರು” ಹೇಳಿದ ಮಾತು ಆಪತ್ತಿನ ವಿಚಾರದಲ್ಲಿ ನಿದರ್ಶನಕ್ಕೆ ಬಂದದ್ದ ರಿಂದ, ಅದು ಸಂಪತ್ತಿನಲ್ಲಿಯೂ ನಿಜವಾಗುವುದೆಂಬ ನಂಬಿಕೆಯ ಮೇಲೆ ಯೌಗಂಧರಾಯಣನು ಮಂತ್ರಿಗಳೊಡನೆ ಆಲೋಚಿಸಿ ಲಾವಾಣಕ ವಹ್ನಿಯ ನ್ನು ಕಲ್ಪಿಸಿದ್ದು, ವಾಸವದತ್ತೆಯನ್ನು ಒಡಂಬಡಿಸಿದ್ದು ಮುಂತಾದ ಪೂರ್ವ ಕಥೆ ಪರಿಕರ ವೃತ್ತಾಂತಗಳೆಲ್ಲಾ ಸೂಚಿಸಲ್ಪಟ್ಟಿವೆ.

ಈ ಹೆಣ್ಣು ಒಪ್ಪಿಸುವ ಕೆಲಸವು ನಡೆಯುವುದು ಅಧಿಕಾರ ದರ್ಪವುಳ್ಳ ಅರಮನೆಯ ಹತ್ತಿರದಲ್ಲಲ್ಲ. ಶಾಂತವಾದ ತಪೋವನದಲ್ಲಿ ; ಕಲ್ಪವೃಕ್ಷದಿಂದ

ಕಳಿತ ಹಣ್ಣುಗಳು ಬೀಳುತ್ತಿರುವಂತೆ "ಯಾರಿಗೇನು ಬೇಕು" ಎಂದು ಒಬ್ಬೊಬ್ಬರನ್ನೂ ಔದಾರ್ಯದಿಂದ ಧಾರಾಳವಾಗಿ ಕೇಳಿಸುತ್ತಿರುವ ಪದ್ಮಾವತಿಯಂಥ "ಉದಾರಶೀಲೆ" ಯಾದ ರಾಜಕುಮಾರಿಯ ಸಾನ್ನಿಧ್ಯದಲ್ಲಿ (''ಯಾವನೋ ಆಗಂತುಕನು'' ಹೊರತು) ನಿತ್ಯತೃಪ್ತರೂ, ವೈರಾಗ್ಯಶಾಲಿಗಳೂ, ಸಂಯಮಿಗಳೂ ಇರುವ ಶಾಂತವಾದ ಋಷ್ಯಾಶ್ರಮಗಳ ಮಧ್ಯದಲ್ಲಿ, ಈ ಸನ್ನಿವೇಶಕಲ್ಪನೆಯಿಂದ, ಇನ್ನೂ ಮದುವೆಯೇ ಆಗದೆ ತಾನೇ ಪರಾಧೀನೆಯಾಗಿರುವ ಪದ್ಮಾವತಿಯಂಥ "ಕನ್ಯೆ" ಯು ಅಪರಿಚಿತೆಯಾದ ಹೆಂಗುಸನ್ನು ತನ್ನ ಹತ್ತಿರ ಇಟ್ಟುಕೊಳ್ಳಲು ಒಪ್ಪಿದ್ದು ಹೇಗೆ? ಅವಳನ್ನು ಯೌಗಂಧರಾಯಣನು ಒಡಂಬಡಿಸಿದ್ದು ಹೇಗೆ? ಎಂದು ಮುಂತಾದ ಪ್ರಶ್ನೆಗಳು ಬರುವುದಕ್ಕೆ ಅವಕಾಶವಿಲ್ಲದಂತಾಗಿದೆ. ಪದ್ಮಾವತಿಯು ತನ್ನ ಮಾತಿಗೆ ತಾನೇ ಕಟ್ಟುಬಿದ್ದು "ನ್ಯಾಸರಕ್ಷೆ ಎಂಬುದು ಕಷ್ಟ, ಯೌಗಂಧರಾಯಣನ ಈ ಪ್ರಾರ್ಥನೆ ''ದುಸ್ಸಾಧ್ಯ'' ಎಂದು ಕಂಚುಕಿಯು ಹೆದರಿಸಿ ಎಚ್ಚರಕೊಟ್ಟರೂ ಆವಂತಿಕೆಯನ್ನು ತನ್ನಲ್ಲಿ ಇರಿಸಿಕೊಳ್ಳುವಳು ಇದು ''ಸತ್ಯಸಂಧಳಾದ'' ಅವಳ ಗುಣಕ್ಕೆ ತಕ್ಕ ಕಾರ್ಯ. ಇದು ಹೀಗಾಯಿತಲ್ಲ, ಎಂದು ಪಶ್ಚಾತ್ತಾಪ ಪಡುತ್ತಾಗಲಿ, ಇಷ್ಟವಿಲ್ಲದೆ ಅರ್ಧ ಅರ್ಧ ಮನಸ್ಸಿನಿಂದಾಗಲಿ ಮಾಡಿದ್ದಲ್ಲ. ಅವಳ ಸ್ವಭಾವವೇ ಅಂಥದು. ಮೇಲಾಗಿ ಅವಳಿಗೆ ತಪೋವನ ಜನಗಳಲ್ಲಿ ತುಂಬಾ ಭಕ್ತಿ, ಅವರು ತನ್ನನ್ನು ಏನಾದರೂ ಕೇಳಿದರೆ, ಅದು ಒಂದು 'ಅನುಗ್ರಹ' ವೆಂದೂ, ಆಗ ತಾನು ''ಆ ತಪೋವನಕ್ಕೆ ಬಂದುದು ಅದೃಷ್ಟವಶದಿಂದ ಸಾರ್ಥಕವಾಗುವುದೆ''ಂದೂ ಅವಳ ಭಾವನೆ. ಈ ತಪೋವನ ಪಕ್ಷಪಾತವು ಅವಳಿಗೆ ಪಿತ್ರಾರ್ಜಿತವಾದದ್ದು. ಆಗಲೂ ಅವಳ ತಾಯಿಯು ಆ ಆಶ್ರಮದಲ್ಲಿ ವಸಿಸುತ್ತಿದ್ದಳು.

ವಾಸವದತ್ತೆಯನ್ನು ಕಂಡರೆ ಅವಳಿಗೆ ಆಗಲೇ ಎಷ್ಟೋ ಮಮತೆ! ''ಬಾರಮ್ಮ! ಬಾ! ಈಗ ನಮ್ಮವಳಾದೆ!" ಎಂದು, ಗುಣವತಿಯರಾದ ಅತ್ತೆಯರು ಮನೆತುಂಬಿಸಿಕೊಂಡಾಗ, ಪುಟ್ಟಸೊಸೆಯನ್ನು ಬರಮಾಡಿಕೊಳ್ಳುವಂತೆ

ಅಂತಃಕರಣದಿಂದ ಆದರಿಸುವಳು. ಪರಪುರುಷರು ಬಂದರೆ ಎಲ್ಲಿ ಸಂಕೋಚ ಪಟ್ಟುಕೊಳ್ಳುವಳೋ, ತನ್ನ ಅಣ್ಣನನ್ನು ಕಾಣದೆ ಹೋದರೆ ಎಲ್ಲಿ ಕೊರಗುವಳೋ, ಎಂದು ಆಗಲೇ ಅವಳ ಯೋಗಕ್ಷೇಮವು ಹತ್ತಿಕೊಳ್ಳುವುದು. ಎಂದೂ ನೋಡದ, ಇನ್ನೂ ಯಾವ ಸಂಬಂಧವೂ ಇಲ್ಲದ, ವತ್ಸರಾಜನು "ಮೂರ್ಛೆಬಿದ್ದನೆಂದು ಕೇಳಿದೊಡನೆ" ಅವಳ ಹೃದಯವು ಶೂನ್ಯಪ್ರಾಯವಾಗಿತ್ತು" ವಾಸವದತ್ತೆಯು ಒಳ ಸಂಚಿಗೆ ಸೇರಿದ್ದರೂ, ತನ್ನನ್ನು ಯೌಗಂಧರಾಯಣನು ಪದ್ಮಾವತಿಯ ಹತ್ತಿರ ಬಿಟ್ಟು ಹೋಗುತ್ತಾನೆಂದು ತಿಳಿದಿರಲಿಲ್ಲ. ಪಟ್ಟದ ರಾಣಿಯಾಗಿ, ಎದುರಿಲ್ಲದ ದವಲತ್ತು ಮಾಡುತಿದ್ದವಳು ಯೌಗಂಧರಾಯಣನ ವಿವೇಕಬುದ್ಧಿ ದೂರಾಲೋಚನೆಗಳ ಮೇಲೆ ಭರವಸೆಯಿಟ್ಟು, ಮನಸ್ಸಿನಲ್ಲಿ ಮನಸ್ಸಿಲ್ಲದೆ ತನ್ನ ಮೋಹದ ಗಂಡನನ್ನು ಆಗ ತಾನೇ ಅಗಲಿ, ಒಬ್ಬ ಸಾಮಾನ್ಯ ಬ್ರಾಹ್ಮಣ ಹೆಂಗುಸಿನಂತೆ ಅವನ ಹಿಂದೆ ಬಂದಿದ್ದಳು. ಇನ್ನೂ ಬರುತ್ತಿರುವಾಗಲೇ "ಅತಿಥಿಗಳಿಗೆ ಸ್ವಗೃಹದಂತೆ" ಇರಬೇಕಾದ ಋಷ್ಯಾಶ್ರಮದಲ್ಲಿ ಜನರನ್ನು ಒತ್ತರಿಸುತ್ತಿರುವುದನ್ನು ನೋಡಿ ತಾನೂ "ರಾಜಭಟರ ಕೈಯಿಂದ ನೂಕಿಸಿ ಕೊಳ್ಳಬೇಕಾದ ಸ್ಥಿತಿಗೆ ಬಂದೆ'' ನೆಂದು ಸಂಕಟಪಟ್ಟುಕೊಳ್ಳುವಳು. ಯೌಗಂಧರಾಯಣನೇನೋ ಅವಳನ್ನು ಸಮಾಧಾನಪಡಿಸುವುದಕ್ಕೋಸ್ಕರ ''ನಿಜಸ್ಥಿತಿಯನ್ನು ಮರೆಸಿಕೊಂಡಿದ್ದಾಗ ದೇವತೆಗಳಿಗೂ ಇಂತಹ ತಿರಸ್ಕಾರಗಳು ತಪ್ಪಿದುವಲ್ಲ'' ''ಇವೆಲ್ಲಾ ನೀನು ಮೊದಲು ಅನುಭವಿಸಿಬಿಟ್ಟ ವೈಭವಗಳೇ'' "ಭಾಗ್ಯವಿತಾನಂ ಚಕ್ರಾರಪಂಕ್ತಿಯಂತಿರೆ ಪೊರ್ದುಳ್ಗುಂ" ಎಂದು ಪುರಾಣ, ಪುಣ್ಯಕಥೆ, ನೀತಿ ವೇದಾಂತಗಳನ್ನೆಲ್ಲಾ ಓದುವನು. ಆದರೂ "ಯಾವನೋ ದುರ್ಮದೋದ್ಧತನು ಚಲಭಾಗ್ಯದಿಂದ ಬೀಗಿ ಋಷ್ಯಾಶ್ರಮದಲ್ಲಿಯೂ ಜನರನ್ನು ನಿಷ್ಠುರಾಜ್ಞೆಯಿಂದ ತಳ್ಳಿಸುತ್ತ, ಪಾವನಾಶ್ರಮವನ್ನು ಪೊಲೆವಳ್ಳಿಗೆ ಸಾಟಿಮಾಡುತ್ತಿದ್ದನೆಂದು ಯೌಗಂಧರಾಯಣನಿಗೂ, ಹೀಗೆ ಪರಾಭವವಾಯಿತಲ್ಲ" ಎಂದು ವಾಸವದತ್ತೆಗೂ ಮನಸ್ಸಿನಲ್ಲಿ ವ್ಯಥೆಯು ಇದ್ದೇ ಇತ್ತು. ಈ ಸ್ಥಿತಿಯಲ್ಲಿ ಅವರು ''ಧರ್ಮಪ್ರಿಯೆ'' ಯಾದ ಪದ್ಮಾವತಿಯ ವಿಚಾರವನ್ನು ಕೇಳುವರು. ಇವರ ನೈಸರ್ಗಿಕವಾದ ಸತ್ಸ್ವಭಾವವೂ. ನೈಮಿತ್ತಿಕವಾದ ಆತ್ಮೀಯತೆಯೂ

ಕೂಡಲೇ ಅವಳಲ್ಲಿ "ಮಮತೆ" ಯನ್ನೂ 'ಸೋದರೀ ಸ್ನೇಹವನ್ನೂ ಉಂಟುಮಾಡುವುವು. ಹೀಗೆ ಮನಸ್ಸು ಸುಮುಖವಾಗಿದ್ದಾಗ ಪದ್ಮಾವತಿಯು ಪ್ರವೇಶಿಸುವಳು. ಅವಳ ರೂಪವು ಕುಲೋನ್ನತಿಗೆ ತಕ್ಕಂತೆ ಇದ್ದು, ವಾಸವ ದತ್ತೆಯಂಥ ಸ್ತ್ರೀಯು ಮೆಚ್ಚುವಷ್ಟು ಶ್ಲಾಘ್ಯವಾದದ್ದು. ಆ ಮಧುರವಾದ ರೂಪಕ್ಕೆ ತಕ್ಕಂತೆ ಪ್ರಿಯವಾದ ಮಾತು. ಆದ್ದರಿಂದ ಅವಳಲ್ಲಿ ಎಲ್ಲರಿಗೂ ವಿಶ್ವಾಸವು ಹೆಚ್ಚುವುದು. ಈಗ ಆಶ್ರಮದಲ್ಲಿದ್ದ ತಾಪಸಿಯು, ಅವಳನ್ನು ಆದ ರಿಸಿ, ಅವಳ ಮದುವೆಯ ಪ್ರಸ್ತಾವನನ್ನೆತ್ತುವಳು. ಚೇಟಿಯು "ಪ್ರದ್ಯೋತ ರಾಜನು ತನ್ನ ಮಗನಿಗಾಗಿ ದೂತರ ಮುಖದಿಂದ ಹೇಳಿಕಳುಹಿಸುತ್ತಿರು ವನು" ಎಂದು ಹೇಳುವಳು. ಪ್ರದ್ಯೋತನು ವಾಸವದತ್ತೆಯ ತಂದೆ. ಆದ್ದರಿಂದ ಅವಳಿಗೆ ಪದ್ಮಾವತಿಯು ತನ್ನ ಕುಟುಂಬಕ್ಕೆ ಸೇರಿದಂತೆ ಅನುರಾಗ ವುಂಟಾಗುತ್ತದೆ. ಆದ್ದರಿಂದ "ಮಂದಭಾಗ್ಯಳಾದ ನನಗೆ ಪದ್ಮಾವತಿಯ ಹತ್ತಿರಕ್ಕೆ ಹೋಗದಿದ್ದರೆ ಗತಿಯೇನು ? ಎಂದು ಗೊಣಗಿದರೂ, ಅವಳಿಗೆ ಪದ್ಮಾವತಿಯ ಜೊತೆಯಲ್ಲಿರಲು ಮನಸ್ಸು ಒಡಂಬಡುವಂತಾಗುತ್ತದೆ.

ಈಗ ಲಾವಾಣಕದಲ್ಲಿ ಅಧ್ಯಯನಮಾಡುತ್ತಿದ್ದು ಹೊರಟುಬಂದ ಬ್ರಹ್ಮಚಾರಿಯೊಬ್ಬನು ಅಲ್ಲಿಗೆ ಬಂದನು. ಆ ಗ್ರಾಮಕ್ಕೆ ಬೆಂಕಿಬಿದ್ದ ವೃತ್ತಾಂ ತವನ್ನು ವಿವರಿಸುವನು. ಈತನೇನೋ ಕೇಳಿದ್ದಕ್ಕೆ ತಕ್ಕಷ್ಟು ಸಮಂಜಸ ವಾಗಿಯೇ ಉತ್ತರವನ್ನು ಕೊಡುವ ವಿವೇಕಿ ಅಂತೂ, ನಮಗೆ ಆವಶ್ಯಕ ವಾದಷ್ಟೇ ವೃತ್ತಾಂತವನ್ನು ತಿಳಿಸುವ ಆದರ್ಶವರ್ತಮಾನಪತ್ರಿಕೆಯಂತೆಯೂ ಪ್ರಕೃತಕ್ಕೆ ಬೇಕಾದಷ್ಟನ್ನು ಸಂಗ್ರಹವಾಗಿಯೂ ಹೇಳುವನು. ಇದರಿಂದ ವಾಸವದತ್ತಾವತ್ಸರಾಜರಿಗಿದ್ದ ಗಾಢಪ್ರೇಮವೂ, ಯೌಗಂಧರಾಯಣ ರುಮಣ್ವಂತ ಮುಂತಾದವರ ಪ್ರಭುಭಕ್ತಿಯೂ ಗೊತ್ತಾಗುತ್ತವೆ. ತನ್ನ ಪ್ರಿಯಪತ್ನಿಯು ಸತ್ತುಹೋದಳೆಂದು ತಿಳಿದು ವತ್ಸರಾಜನು ದಗ್ಧಶೇಷವಾದ ಒಡವೆಗಳನ್ನು ಎದೆಗೆ ಒತ್ತಿಕೊಂಡು, ಹೊರಳಿ ಅತ್ತೂ ಕರೆದು ಮೂರ್ಛೆ ಹೋಗಿ, ರುಮಣ್ವಂತ ಮುಂತಾದವರ ಉಪಚಾರವನ್ನು ಲಕ್ಷ್ಯಮಾಡದೆ, "ತನ್ನ ಪ್ರಿಯಭಾರ್ಯೆಯ ಮತ್ತು ಇಷ್ಟಮಂತ್ರಿಯ ವಿಯೋಗವನ್ನು ಸಹಿಸಲಾರದೆ, ತಾನೂ ಅದೇ ಬೆಂಕಿಯಲ್ಲಿ ಬಿದ್ದು ಪ್ರಾಣವನ್ನು ಕಳೆದು

ಕೊಳ್ಳಲು ಯತ್ನಿಸಿದ್ದನ್ನು ಕೇಳಿ ವಾಸವದತ್ತೆಯು ತಾನು ಎಲ್ಲಿದ್ದೇನೆಂಬು ದನ್ನೇ ಮರೆತು ಸಂಕಟಪಡುವಳು. ಆದರೆ ಆ ವಿಚಾರವಾಗಿ ಬಹಿರಂಗದಲ್ಲಿ ಸಂಕಟಪಡುವುದಕ್ಕುಂಟೇ, ಮತ್ತೊಬ್ಬರಿಗೆ ಹೇಳಿಕೊಳ್ಳುವುದಕ್ಕುಂಟೇ? ಮಾತನಾಡುವುದಕ್ಕಾದರೂ ಉಂಟೇ ? ಹೀಗೆ ಅವಳು ಮೂಗುನೋವನ್ನು ಅನುಭವಿಸುತ್ತಿರುವಾಗ, ಬ್ರಹ್ಮಚಾರಿಯ ಮೂಲಕ ವತ್ಸರಾಜನ ಗುಣಕಥನ ವನ್ನು ಕೇಳಿ ತಾಪಸಿ, ಚೇಟಿ, ಪದ್ಮಾವತಿ ಮುಂತಾದವರೆಲ್ಲರಿಗೂ ಅವನಲ್ಲಿ ಪಕ್ಷಪಾತವು ಹುಟ್ಟಿ ಅವನನ್ನು ಪುನಃ "ಬೇರೆ ಯಾವ ಪುಣ್ಯವತಿಯು ಕೈಹಿಡಿಯುವಳೋ" ಎಂಬ ಯೋಚನೆಗೆ ಮೊದಲಾಗುತ್ತದೆ. ಸ್ವಲ್ಪ ಹೊತ್ತಿಗೆ ಮುಂಚೆ ಪದ್ಮಾವತಿಯ ಮದುವೆಯ ಪ್ರಸ್ತಾಪ ಬಂದಿದ್ದು, ಈ ಸಂದರ್ಭದಲ್ಲಿ ಅವಳಿಗೂ ವತ್ಸರಾಜನನ್ನು ಮದುವೆಮಾಡಿಕೊಳ್ಳುವುದರ ಕಡೆಗೆ ಮನಸ್ಸು ಹೋಗುತ್ತದೆ. ಆದರೆ ಕವಿಯು ಇದನ್ನು ಬಹುಗಂಭೀರ ವಾಗಿ ತೋರಿಸಿದ್ದಾನೆ. ಮೊದಲು ತಾಪಸಿಯಿಂದ

> "ಆಹಾ ! ಆ ಗ್ರಾಮಕ್ಕೆ ಆಗಂತುಕನಾಗಿ ಬಂದ ಈ ಬ್ರಹ್ಮಚಾರಿಯೂ ಹೀಗೆ ಪ್ರಶಂಸೆ ಮಾಡಬೇಕಾದರೆ, ಆ ರಾಜನು ಬಹಳ ಉತ್ತಮಗುಣವುಳ್ಳವ ನಾಗಿರಬೇಕಲ್ಲವೆ ?"

ಎಂದು ಅವನನ್ನು ಹೊಗಳಿಸಿ, ಅನಂತರ ಚೇಟಿಯಿಂದ

> " ರಾಜಪುತ್ರಿ ! ಅಂತಹ ಮಹಸೀಯನನ್ನು ಬೇರೆ ಯಾವ ಪುಣ್ಯವತಿಯು ಕೈಹಿಡಿಯುವಳೋ ?"

ಎಂದು ಪ್ರಶ್ನೆಮಾಡಿಸಿ, ಆಮೇಲೆ ಪದ್ಮಾವತಿಯಿಂದ

> " ನನ್ನ ಹೃದಯವೂ ಇದನ್ನೇ ಆಲೋಚಿಸುತ್ತಿರುವುದು '

ಎಂದು ಆತ್ಮಗತವಾಗಿ ಹೇಳಿಸಿದ್ದಾನೆ ಹೀಗೆ ಮೊದಲನೆಯ ಅಂಕದಲ್ಲಿ ನಾಯಕನನ್ನುನೋಡುವುದಕ್ಕೆ ಮುಂಚೆಯೇ ಕವಿಯು ನಾಯಿಕೆಯ ಹೃದಯ ಭೂಮಿಯನ್ನು ಹದಮಾಡಿ, ಅದರಲ್ಲಿ ಅನುರಾಗವನ್ನು ನೆಟ್ಟಿದ್ದಾನೆ.

ಕೊನೆಗೆ ಪದ್ಮಾವತೀವಾಸವದತ್ತೆಯರು ತಾಪಸಿಗೆ ನಮಸ್ಕರಿಸಲು, ಆಕೆ "ಅನುರೂಪನಾದ ಪತಿಯನ್ನು ಹೊಂದು" ಎಂದು ಪದ್ಮಾವತಿಗೂ "ಶೀಘ್ರ ದಲ್ಲಿಯೇ ನಿನಗೆ ನಿನ್ನ ಪತಿಯೊಡನೆ ಸಮಾಗಮವುಂಟಾಗಲಿ" ಎಂದು ವಾಸವದತ್ತೆಗೂ ಆಶೀರ್ವಾದ ಮಾಡುವಳು. ಆಕೆಯು ನಿಜವಾದ ತಪ ಸ್ವಿನಿ ! ಹೇಗೆಂದರೆ ? ಅದು ಮುಂದೆ ಹಾಗೆಯೇ ಆಗುವುದು !

ಎರಡು ಮೂರನೆಯ ಅಂಕಗಳು ತುಂಬಾ ಚಿಕ್ಕವು. ಇವೆರಡೂಸೇರಿ ಮೊದಲನೆಯ ಅಂಕದಷ್ಟಾಗುತ್ತವೆ. ಇವುಗಳಲ್ಲಿ (ಮೊದಲು ನಿರರ್ಥಕ ವಾದ ಒಂದು ಸಣ್ಣ ಪ್ರವೇಶಕವಾದ ಮೇಲೆ) ವತ್ಸರಾಜನಿಗೆ ಪದ್ಮಾವತಿ ಯೊಡನೆ ಮದುವೆಯಾಗುತ್ತದೆ. ಎರಡನೆಯ ಅಂಕವು ಮೊದಲಾದಾಗ ಪದ್ಮಾವತಿಯು ಚೆಂಡಾಡುತ್ತಿರುವಳು. ವಾಸವದತ್ತೆಯು ಆಗಲೇ ಅವಳೊ ಡನೆ ಸ್ನೇಹವನ್ನು ಸಂಪಾದಿಸಿ, ಅಕ್ಕತಂಗಿಯರಂತೆ ಸಲುಗೆಯಿಂದಲೂ ಸರಸ ವಾಗಿಯೂ ಹಾಸ್ಯ ಮಾಡುತ್ತ ಮಾತನಾಡುತ್ತಿರುವಳು. ಮದುವೆಗೆ ಬಂದ ಹುಡುಗಿ ಎದುರಿಗೆ ಇದ್ದರೆ, ಅವಳ ಮದುವೆ ಪ್ರಸ್ತಾಪಬರದೆ ಇರುತ್ತದೆಯೆ ? ವಾಸವದತ್ತೆ ಬಂದಿದ್ದದ್ದು ಅವಳ ಮದುವೆ ಮಾಡಿಸುವುದಕ್ಕೆ. ಆದ್ದರಿಂದ ಚೆಂಡಾಟವನ್ನೇ ನೆಪಮಾಡಿಕೊಂಡ ಅವಳ ಮದುವೆ ಪ್ರಸ್ತಾಪವನ್ನೆತ್ತಿ ಅವಳ ಚೇಟಿಯಿಂದ ವತ್ಸರಾಜನು "ಬಹು ದಯಾಳು ! ಮತ್ತು ಪ್ರಣಯ ಸ್ವಭಾವವುಳ್ಳವ"ನಾದ್ದರಿಂದ ಪದ್ಮಾವತಿಯು ಅವನಲ್ಲಿ ಅನುರಕ್ತೆಯಾಗಿರುವ ಳೆಂದು ಹೊರಡಿಸುವಳು. ಪದ್ಮಾವತಿಯು ರಾಜನ ಸೌಂದರ್ಯಕ್ಕಾಗಲಿ, ಐಶ್ವರ್ಯಕ್ಕಾಗಲಿ ಮೋಹಗೊಂಡವಳಲ್ಲ. ಇದನ್ನು ಕೇಳಿ, ನೋಡಿ ವಾಸವ ದತ್ತೆಗೆ ಸಂತೋಷ. ಇನ್ನೂ ಚೇಟಿಯೇ "ಒಂದುವೇಳೆ ಅವನು ಕುರೂಪಿಯಾ ಗಿದ್ದರೆ ?" ಎಂದು ಪ್ರಶ್ನೆಹಾಕುವಳು. ವಾಸವದತ್ತೆಗೆ ಇದು ಸೈರಿಸುವುದಿಲ್ಲ. ಆದ್ದರಿಂದ ಪದ್ಮಾವತಿಯು ಇನ್ನೂ ಯೋಚಿಸುವುದಕ್ಕಿಂತ ಮುಂಚೆಯೇ ತಾನು ಎಲ್ಲಿರುವೆನು, ಯಾರೊಡನೆ ಮಾತನಾಡುತ್ತಿರುವೆನೆಂಬುದನ್ನೂ ಮರೆತು, ಥಟ್ಟನೆ "ಛಿ! ಛಿ! ಎಂದಿಗೂ ಇಲ್ಲ! ವಾಸ್ತವದಲ್ಲಿ ಅವನು ಬಹಳ ರೂಪವಂತನು" ಎಂದುಬಿಡುವಳು. ಪ್ರೇಕ್ಷಕರಿಗೆ " ಅಯ್ಯೋ ! ಇನ್ನೇನು ಗತಿ ! ಇವಳ ಗುಟ್ಟು ಹೊರಬಿದ್ದುಹೋಯಿತಲ್ಲ !." ಎನ್ನಿಸುತ್ತದೆ. ಆದರೆ

ಅವಳು ಚಾತುರ್ಯದಿಂದ “ ಉಜ್ಜಯಿನಿಯ ಜನರು ಹೀಗೆಂದು ಮಾತಾಡಿ ಕೊಳ್ಳುತ್ತಿದ್ದುದನ್ನು ಕೇಳಿದ್ದೆನು ” ಎಂದು ಉತ್ತರ ಕೊಟ್ಟುಬಿಡುತ್ತಾಳೆ. ಪದ್ಮಾವತಿಯು ಕೊಟ್ಟ ಉತ್ತರವು ಸಹಜವಾಗಿದೆ, “ ಸರಿ ! ಇರಬಹುದು ! ಉಜ್ಜಯಿನಿಯಲ್ಲಿರತಕ್ಕವರಿಗೆ ಅವನು ಆಗಾಗ ಕಾಣಿಸಿಕೊಳ್ಳುತ್ತಲೇ ಇರಬೇಕಲ್ಲವೇ ? ಸೌಂದರ್ಯವೆಂಬುದು ಎಂತಹವರ ಮನಸ್ಸನ್ನಾದರೂ ಆಕರ್ಷಿಸದಿರಲಾರದು ” ಎನ್ನುವಳು. ಪದ್ಮಾವತಿಯು ಚಾತುರ್ಯವನ್ನರಿಯದ ಋಜುಸ್ವಭಾವದ ಹುಡುಗಿಯಲ್ಲದಿದ್ದರೆ, ವಾಸವದತ್ತೆಯ ಈ ಮಾತಿನಿಂದ ಕೋಪಬಂದಿರಬಹುದಾಗಿತ್ತು. ಭಾಸನ ಕೌಶಲ್ಯವು ಈ ಸನ್ನಿವೇಶದ ಕಲ್ಪನೆಯಲ್ಲಿ ಚೆನ್ನಾಗಿ ಕಂಡುಬರುವುದು. ಇದರಿಂದ ಕಥೆಯೇನೂ ಬೆಳೆಯುವುದಿಲ್ಲ ನಿಜ. ಆದರೆ ನಾಟಕದಲ್ಲಿ ಮೊದಲೇ ತಿಳಿಸಿರುವ ಕಥೆ ಬೆಳೆಯುವುದೇ ಮುಖ್ಯವಲ್ಲ. ಅದರಲ್ಲಿ ಹಣ್ಣುಗಳಂತಿರುವ ಇಂಥ ರಸವತ್ತಾದ ಸನ್ನಿವೇಶಗಳನ್ನು ಕಲ್ಪಿಸಿ ಅವುಗಳಿಂದ ರಸವು ಸೂಸುವಂತೆ ಮಾಡಬೇಕು. ಹಸುವನ್ನು ಉಪಚರಿಸಿ, ಆದರಿಸಿ, ಹುಲ್ಲು ಹಿಂಡಿಗಳನ್ನು ತಿನ್ನಿಸುವುದೆಲ್ಲಾ ಅದರ ಮೊಲೆಗಳಿಂದ ಹಾಲನ್ನು ಎಳೆತುಕೊಳ್ಳುವುದಕ್ಕೆ. ನಾಟಕದಲ್ಲಿ ರಸವತ್ತಾದ ಸನ್ನಿವೇಶಗಳು ಬಾರದೆ ಇದ್ದರೆ, ಅದು ಗಾಡಿಯೆಳೆಯುವುದಕ್ಕೆ ಹಾಕುವ ಗೊಡ್ಡು ಹಸುವಿನಂತೆ ಆಗುತ್ತದೆ. ಪಾತ್ರಗಳ ಗುಣಸ್ವಭಾವಗಳು ಹೊರಪಡುವುದೂ ಇಂಥ ಸನ್ನಿವೇಶಗಳಲ್ಲಿಯೇ ! ಗಿಡ ಮರಗಳ ಯೋಗ್ಯತೆಯು ಗೊತ್ತಾಗಬೇಕಾದರೆ ಹೂವು ಹಣ್ಣುಗಳ ಕಾಲದಲ್ಲಿಯೇ ; ಹಾಗೆಯೇ ಮನುಷ್ಯರ ಯೋಗ್ಯತೆಯು ಗೊತ್ತಾಗಬೇಕಾದರೂ, ಅವರಿಗೆ ಕಷ್ಟ ಸುಖ ಕೋಪ ತಾಪಗಳುಂಟಾಗುವ ಸಂದರ್ಭಗಳಲ್ಲಿ. ಧರ್ಮಪಕ್ಷಪಾತವೂ, ಪ್ರಭುಪ್ರೀತಿಯೂ ಇರತಕ್ಕ ನಿಪುಣ ಮಂತ್ರಿಯಾದ ಯೌಗಂಧರಾಯಣನ ಸ್ವಭಾವವೂ, ತನ್ನ ಪತಿಯಲ್ಲಿ ಪೂರ್ಣಪ್ರೇಮವಿದ್ದರೂ ಅವನ ಮಂಗಳಾಕಾಂಕ್ಷೆಯಿಂದ ಸಪತ್ನೀಸಹವಾಸಕ್ಕೆ ಒಪ್ಪಿ ಪದ್ಮಾವತಿಯನ್ನು ಕಂಡಂದಿನಿಂದ ಅವಳಲ್ಲಿ ತಂಗಿಗಿಂತ ಹೆಚ್ಚಾಗಿ ನಡೆದುಕೊಳ್ಳುತ್ತಿದ್ದ ವಾಸವದತ್ತೆಯ ಪ್ರೇಮಸ್ವಭಾವವೂ, ಸುಂದರಿಯೂ ಪ್ರೇಮಶಾಲಿನಿಯೂ ಋಜುಸ್ವಭಾವದವಳೂ ಆದ ಚಿಕ್ಕ ಹೊಸ ಹೆಂಡತಿ ಬಂದರೂ ಮೊದಲನೆಯ ಹೆಂಡತಿಯನ್ನು

ಮರೆಯದೆ ಅವಳ ಗುಣಗಳನ್ನೇ ನೆನೆಸಿಕೊಂಡು ನೆನೆಸಿಕೊಂಡು ಗೋಳಾಡಿದ ವತ್ಸರಾಜನ ದಾಂಪತ್ಯಪ್ರೇಮವೂ ಕಂಡುಬರುವುದು ಇಂಥ ಸನ್ನಿವೇಶ ಗಳಲ್ಲಿಯೇ.

ಭಾಸನು ಇಂಥ ರಸಸ್ಥಾನಗಳಾದ ಸನ್ನಿವೇಶಗಳನ್ನು ಕಲ್ಪಿಸಿ, ಒಂದು ವೃತ್ತಾಂತದಿಂದ ಮತ್ತೊಂದು ವೃತ್ತಾಂತಕ್ಕೆ ಹಾರಿಹೋಗುವನು. ಅವೂ ಅನಿರೀಕ್ಷಿತವಾಗಿಯೂ, ಹಠಾತ್ತಾಗಿಯೂ ತೋರಿಬರುವುವು. ವತ್ಸರಾಜನ ಮದುವೆಯಾಗುವುದೂ ಹೀಗೆಯೇ. ವಾಸವದತ್ತಾ ಪದ್ಮಾವತಿಯರು ಅರ್ಧಹಾಸ್ಯದಿಂದ ಇನ್ನೂ ಮದುವೆಯ ಮಾತನ್ನಾಡುತ್ತಿರುವ ಹಾಗೆಯೇ, ಧಾತ್ರಿಯು ಬಂದು "ರಾಜಪುತ್ರಿಗೆ ಜಯವಾಗಲಿ! ಭರ್ತೃದಾರಿಕೆ, ಆಗಲೇ ನಿನ್ನನ್ನು ಕೊಟ್ಟಾಯಿತು!" ಎನ್ನುವಳು.

ವಾಸವದತ್ತೆ—ಆರ್ಯೇ! ಯಾರಿಗೆ?

ಧಾತ್ರಿ—ವತ್ಸರಾಜನಾದ ಉದಯನನಿಗೆ!

ವಾಸವದತ್ತೆ—ಹಾಗಿದ್ದರೆ ಆ ಮಹಾರಾಜನು ಕ್ಷೇಮದಿಂದಿರುವನೆ?

ಆಗಲೂ ವಾಸವದತ್ತೆಗೆ ವತ್ಸರಾಜನ ಕ್ಷೇಮಚಿಂತನೆಯೇ ಹೊರತು ತನ್ನ ಅಥವಾ ತನ್ನ ಸವತಿಯ ಯೋಚನೆಯೇ ಇಲ್ಲ. ಧಾತ್ರಿಯ ಸಂಭ್ರಮ ಸಂತೋಷಗಳು ಅವಳ ಮಾತಿನಿಂದ ಗೊತ್ತಾಗುತ್ತವೆ.—"ಅವನು ಕ್ಷೇಮ ದಿಂದ ಇಲ್ಲಿಗೆ ಬಂದುದು ಮಾತ್ರವಲ್ಲ; ಈ ನಮ್ಮ ರಾಜಕುಮಾರಿಯನ್ನು ಪ್ರತಿಗ್ರಹಿಸಿಯೂ ಇರುವನು!" ಎನ್ನುವಳು. ಅವಳಿಗೆ ಅವನು ರಾಜ ಕುಮಾರಿಯನ್ನು ಪ್ರತಿಗ್ರಹಿಸಿದ್ದು ಮುಖ್ಯ. ವಾಸವದತ್ತೆಯು ಪುನಃ ತನ್ನನ್ನು ತಾನು ಮರೆತು, "ಏನನ್ಯಾಯವಿದು?" ಎಂದು ಉತ್ತರಕ್ಷಣದಲ್ಲಿ ಬಹು ಬುದ್ಧಿವಂತಿಕೆಯಿಂದ ಪಾರಾಗುವಳು "ವತ್ಸರಾಜನು ಏನೋ ಕಾರ್ಯಾಂತರದ ಮೇಲೆ ಇಲ್ಲಿಗೆ ಬಂದಿದ್ದಾಗ, ಅವನ ಕುಲ, ರೂಪ, ವಯಸ್ಸು, ಜ್ಞಾನ ಇವುಗಳನ್ನೆಲ್ಲಾ ನೋಡಿ, ನಮ್ಮ ಮಹಾರಾಜನು ತಾನಾಗಿಯೇ ಇವಳನ್ನು ಅವನಿಗೆ ವಾಗ್ದಾನಮಾಡಿಬಿಟ್ಟ" ನೆಂದು ಕೇಳಿ

ಅವಳಿಗೆ ವತ್ಸರಾಜನ ವಿಚಾರದಲ್ಲಿ ಸ್ವಲ್ಪ ಸಮಾಧಾನವಾದರೂ ವಿವಾಹ ಕಾರ್ಯವನ್ನು ತ್ವರಗೊಳಿಸಿದಷ್ಟೂ ಅವಳ ಹೃದಯವು ಕಳವಳಿಸುತ್ತದೆ. ಇನ್ನೂ ಈ ಮಾತು ಆಡುತ್ತಿರುವಾಗಲೇ ಮತ್ತೊಬ್ಬ ಚೇಟಿಯು ಬಂದು, "ಅಮ್ಮಾ! ಹೊರಡು! ಹೊರಡು! ಈಗಲೇ ಒಳ್ಳೆಯ ಶುಭಮುಹೂರ್ತವಂತೆ! ಈಗಲೇ ವಿವಾಹ ಮಹೋತ್ಸವವು ನಡೆದುಹೋಗಬೇಕೆಂದು ಮಹಾರಾಣಿಯವರ ಆಜ್ಞೆಯಾಗಿದೆ" ಎಂದು ಹೊರಡಿಸಿಕೊಂಡು ಹೋಗುವಳು. ಮದುವೆಗಳು ಇಷ್ಟು ಚಿಟಿಕೆ ಚಪ್ಪರವಾಗಿಬಿಟ್ಟದ್ದರೆ ಹೆಣ್ಣು ಹೆತ್ತವರು ಬದುಕಿಕೊಂಡಾರು! ಆದರೆ ಇದು ನಡೆಯುವುದು ನಾಟಕದಲ್ಲಿ ಮಾತ್ರ. ವಿಶೇಷವಾಗಿ ಭಾಸನ ಪೌರೋಹಿತ್ಯದಲ್ಲಿ ಮಾತ್ರ!

ಮೂರನೆಯ ಅಂಕವು ಆರಂಭವಾಗುವುದು ಈ "ಅನ್ಯಾಯ"ದಿಂದಲೇ! ವಾಸವದತ್ತೆಯಂಥ ಗುಣವಂತೆಗೂ ಪ್ರಾಣಪ್ರಿಯನಾದ ತನ್ನ ಗಂಡನು ಅನ್ಯರ ಪಾಲಾಗುವುದನ್ನು ಕಣ್ಣಾರ ನೋಡುವುದಕ್ಕೆ ಹೊಟ್ಟೆಹಿಡಿಯುವುದಿಲ್ಲ. ಆದ್ದರಿಂದ ಅವಳು "ವಿವಾಹ ಮಹೋತ್ಸವದ ಸಡಗರದಿಂದ ತುಂಬಿದ ಅಂತಃಪುರದ ತೊಟ್ಟಿಯಲ್ಲಿ ಪದ್ಮಾವತಿಯನ್ನು ಬಿಟ್ಟು ಕಣ್ಮರೆಯಾಗಿ ಪ್ರಮದವನಕ್ಕೆ ಬಂದು" ಅಲ್ಲಿ ಒಂದು ಮರದ ಕಲ್ಲುಕಟ್ಟೆಯ ಮೇಲೆ ಚಿಂತಿಸುತ್ತ ಕುಳಿತುಕೊಳ್ಳುವಳು. ಇತರರಾಗಿದ್ದರೆ ಇಂಥ ಸಂದರ್ಭಗಳಲ್ಲಿ ಅಡ್ಡಿಗಳನ್ನು ತಂದಿಟ್ಟು ಅವಾಂತರ ಮಾಡಿ ಅದಕ್ಕೆ ಕೈಲಾಗದಿದ್ದರೆ ಪ್ರಾಣ ಕಳೆದುಕೊಳ್ಳುತ್ತಿದ್ದರು. ವಾಸವದತ್ತೆಗೂ ಈ ಆತ್ಮಹತ್ಯದ ಚಾಪಲ್ಯವಿಲ್ಲದೆ ಇಲ್ಲ. ಆದರೆ ಪತಿಯನ್ನು ನೋಡುವ ಆಶೆಯು ಅದಕ್ಕೆ ಅವಕಾಶ ಕೊಡುವುದಿಲ್ಲ.

ಈ ಸ್ಥಿತಿಯಲ್ಲಿ ಅವಳ ಮಟ್ಟಿಗಾದರೂ ಅವಳನ್ನು ಬಿಡಬಾರದೇ? ಉರಿಯುವ ಗಾಯಕ್ಕೆ ಉಪ್ಪುಹಾಕಿದಂತೆ ಮಹಾರಾಣಿಯಿಂದ ಆಜ್ಞಪ್ತಳಾದ ಚೇಟಿಯು "ಅವಂತಿಕೆ"ಯಿಂದ ವರಣಮಾಲಿಕೆಯನ್ನು ಕಟ್ಟಿಸಿಕೊಂಡು ಹೋಗುವುದಕ್ಕೆ ಅವಳಿರುವ ಕಡೆಗೆ ಬರುವಳು. "ನಾನು ಇದನ್ನೂ ಮಾಡಬೇಕಾಗಿ ಬಂತೇ?" ಎಂದು ವಾಸವದತ್ತೆಯು ಕೊರಗುವಳು. ಆದರೆ

ಚೇಟಿಯು ಬಿಡಳು "ಬೇರೆ ಕೆಲಸವನ್ನು ಚಿಂತಿಸುತ್ತ ಕುಳಿತಿರುವುದಕ್ಕೆ ಇದು ಸಮಯವಲ್ಲ! ಈಗಾಗಲೇ ರತ್ನಖಚಿತವಾದ ಸ್ನಾನಶಾಲೆಯಲ್ಲಿ ವರನಿಗೆ ಮಂಗಳಸ್ನಾನವು ನಡೆಯುತ್ತಿರುವುದು. ಮಾಲೆಯು ಸಿದ್ಧವಾಗಲಿ! ಹೊತ್ತುಮೀರುವುದು!" ಎಂದು ಆತುರಪಡಿಸುವಳು. ಈ ಕೊರತೆ ಆತುರಗಳ ಮಧ್ಯದಲ್ಲಿ ವಾಸವದತ್ತೆಗೆ ತನ್ನ ಗಂಡನ ವೃತ್ತಾಂತವನ್ನು ತಿಳಿಯಬೇಕೆಂದು ಕುತೂಹಲ! ಆದ್ದರಿಂದ ಚೇಟಿಯನ್ನು "ವರನು ಹೇಗಿರುವನು" ಎಂದು ಕೇಳುವಳು. ಅವಳು ಹಿಂದಿನ ಚೇಟಿಯಂತೆ ಒಂದೇಸಲಕ್ಕೆ ಸಂತೋಷವಾಗುವಂತೆ ಉತ್ತರ ಕೊಡಬಾರದೆ? "ಅಂತವನನ್ನು ನಾವು ಇದುವರೆಗೆ ಹಿಂದೆ ಯಾವಾಗಲೂ ನೋಡಿದುದೇ ಇಲ್ಲ" ಎನ್ನುವಳು. ವಾಸವದತ್ತೆಗೆ ತೃಪ್ತಿಯಾಗುವುದಿಲ್ಲ. "ಸಖಿ! ಹೇಳು ಹೇಳು? ನೋಡುವುದಕ್ಕೆ ಚೆನ್ನಾಗಿರುವನೆ?" ಎಂದು ಕೇಳುವಳು. ಆಮೇಲೆ "ಅವಿಧವಾಕರಣ" ವನ್ನು ತುಂಬಿ "ಸಪತ್ನೀ ಮರ್ದನ" ವನ್ನು ಬಿಟ್ಟು, ಮಾಲೆಕಟ್ಟಿ ಅದಕ್ಕೆ ಚೇಟಿಗೆ ಅನುಮಾನವಾಗದಂತೆ ಚಾತುರ್ಯದಿಂದ ಉತ್ತರಕೊಡುತ್ತಿರುವಷ್ಟರಲ್ಲಿಯೇ ಮತ್ತೊಬ್ಬ ಚೇಟಿಯು ಬಂದು, ಮದುವೆಯಲ್ಲಿ, ರಾಜನ ಮದುವೆಯಲ್ಲಿ, ಮತ್ತೇನೂ ಬೇಕೇ ಇಲ್ಲವೇನೋ ಎಂಬಂತೆ ಮಾಲೆಗಾಗಿ ಅವಸರಿಸುವಳು. ಹಿಂದಿನ ಚೇಟಿ ಬಂದಾಗ ವರನಿಗೆ ಮಂಗಳಸ್ನಾನವಾಗುತ್ತಿತ್ತು; ಈಗಾಗಲೇ ಅವನನ್ನು ಕಲ್ಯಾಣಮಂಟಪಕ್ಕೆ ಕರೆತರುತ್ತಿದ್ದರು! ಮಾಲೆಯನ್ನು ತೆಗೆದುಕೊಂಡು ಹೋಗಿಯಾಯಿತು, ಮದುವೆಯೂ ಆಗಿಹೋಯಿತು—ಆಗಿರಬೇಕು; ಅದರ ವರ್ಣನೆಯೇನೂ ಬಂದಿಲ್ಲ; ಅದನ್ನು ಅರಿಯದವರು ಯಾರು? (ಎರಡನೆಯ ಮದುವೆಯೆಂದು ಎಲ್ಲಾ ಆತುರದಲ್ಲಿ ನಡೆದುಹೋಯಿತೇನೋ!) ಅರಮನೆಯೆಲ್ಲವೂ ಈ ಸಂತೋಷ ಸಂಭ್ರಮಗಳಲ್ಲಿ ತೇಲಿ ಮುಳುಗುತ್ತಿರುವಾಗ ವಾಸವದತ್ತೆಯು ಮಾತ್ರ ಗಂಟನ್ನು ಕಳೆದುಕೊಂಡವಳಂತೆ ಸಂಕಟಪಡುತ್ತ ಹಾಸಿಗೆಯಲ್ಲಿ ಹೊರಳುತ್ತ ನಿದ್ರೆಮಾಡುವುದಕ್ಕೆ ಯತ್ನಿಸುತ್ತಿದ್ದಳು.

ನಾಲ್ಕನೆಯ ಅಂಕವು ಮೊದಲಾಗುವಾಗ ಮದುವೆ ನಡೆದು ಕೆಲವು ದಿನಗಳಾಗಿವೆ. ಅಳಿಯನೂ ಅವನ "ಗೆಳೆಯ" ನೂ ಇನ್ನೂ ಮಾವನ

ಮನೆಯಲ್ಲಿಯೇ ಇದ್ದುಕೊಂಡಿದ್ದಾರೆ. ಅವರನ್ನು ಇನ್ನೂ ಯಾರೂ ಅಸಡ್ಡೆ ಮಾಡುವಂತಾಗಿಲ್ಲ. ಪದ್ಮಾವತಿಗೆ ಆಗಲೇ ರಾಜನ ಮೇಲೆ ಬಹು ಪ್ರೀತಿ. ಒಂದು ಹೂವು ಕೊಯ್ಯಬೇಕಾದರೂ ಅದನ್ನು ತಾನು ಮುಡಿದು ಸಂತೋಷ ಪಡುವುದಕ್ಕಿಂತ ತನ್ನ ಗಂಡನು ಗಿಡದ ಮೇಲೆ ನೋಡಿ ಸಂತೋಷಪಡಲಿ ಎಂಬ ಆಶೆ! ಅವನನ್ನು ಸ್ವಲ್ಪ ಹೊತ್ತು ಕಾಣದಿದ್ದರೂ ಮನಸ್ಸು ತಪಿಸು ವುದು. ಆದರೆ ಅವನ ಮನಸ್ಸು ಮಾತ್ರ ವಾಸವದತ್ತೆಯನ್ನು ನೆನೆನೆನೆಸಿ ಕೊಂಡು ದುಃಖಿಸುತ್ತಿರುವುದು. "ಭಾರ್ಯಾದುಃಖಂ ಪುನರ್ಭಾರ್ಯಾ" ಎಂಬ ಹೇಳಿಕೆಯು ಅವನಿಗೆ ಅನ್ವಯಿಸುವುದಿಲ್ಲ. ಅವಳು "ಅನುಪಮ ಗುಣರೂಪ ವಿಭವದಿಂದ" ಅಭಿಮತೆಯಾಗಿದ್ದರೂ, ವಾಸವದತ್ತೆಯಲ್ಲಿ ಲಗ್ನವಾಗಿದ್ದ ಅವನ ಮನಸ್ಸನ್ನು ಎಳೆದುಕೊಳ್ಳುವುದು ಅವಳಿಗೆ ಅಸಾಧ್ಯ ವಾಗಿತ್ತು. ಇದು ವಾಸವದತ್ತೆ ಪದ್ಮಾವತಿಯರಿಬ್ಬರಿಗೂ ಗೊತ್ತಿತ್ತು. ಆದರೆ ಅವರಿಗೆ ಅದಕ್ಕಾಗಿ ಪರಸ್ಪರ ಮಾತ್ಸರ್ಯವಿಲ್ಲ. ಕೋಪವಿಲ್ಲ! ಏಕೆಂದರೆ ಪದ್ಮಾವತಿಯದು ಅಂಥ ಉದಾರ ಗುಣ, ಮತ್ತು ರಾಜನು ತನ್ನನ್ನು ಚೆನ್ನಾಗಿ ಪ್ರೀತಿಸುತ್ತಿರುವನೆಂದು ಅವಳು ಬಲ್ಲಳು. ಆದರೆ ಮೊದಲನೆಯ ಹೆಂಡತಿಯನ್ನೂ ಹೀಗೆಯೇ ಪ್ರೀತಿಸುತ್ತಿದ್ದನೇ ಎಂದು ಸಂದೇಹ. (ವಾಸವ ದತ್ತೆಯು ಹಿಂದಿನಂತೆಯೇ ಎಚ್ಚರತಪ್ಪಿ, "ಇದಕ್ಕಿಂತಲೂ ಹೆಚ್ಚಾಗಿ ಅವ ಳನ್ನು ಪ್ರೀತಿಸುತ್ತಿದ್ದನು" ಎಂದು ಬಿಟ್ಟು ಉಪಾಯವಾಗಿ ತೊಡರಿನಿಂದ ಪಾರಾಗುವಳು.) ಇವನ್ನು ಊಹಿಸುವುದಕ್ಕೆ ಅವಳಿಗೆ ಬೇರೆ ಕಾರಣವೂ ಇತ್ತು. "ತನಗೂ ವೀಣೆ ಕಲಿಸಿಕೊಡು" ಎಂದು ಕೇಳಿದುದಕ್ಕೆ ಉದಯ ನನು ಮಾತಾಡದೆ ಸ್ವಲ್ಪ ದೊಡ್ಡದಾಗಿ ನಿಟ್ಟುಸಿರನ್ನು ಮಾತ್ರ ಬಿಟ್ಟು ಸುಮ್ಮನಿದ್ದನು. ಹೊಸದಾಗಿ ಮದುವೆಯಾದ ಆ ಸುಕುಮಾರಿಯ ಮುಂದೆ ವಾಸವದತ್ತೆಯ ವೃತ್ತಾಂತವನ್ನೆತ್ತಿ ಅವಳ ಮನಸ್ಸನ್ನು ನೋಯಿಸುವುದಕ್ಕೆ ಅವನಿಗೆ ಇಷ್ಟವಿರಲಿಲ್ಲ. ಹಾಗೆಯೇ ಬಲವಂತಪಡಿಸಿ ಅವನ ಮನಸ್ಸನ್ನು ನೋಯಿಸಲು ಅವಳಿಗೂ ಇಷ್ಟವಿರಲಿಲ್ಲ. ಈ ಮಾತೆಲ್ಲ ನಡೆಯುತ್ತಿರುವಾಗ ಕವಿಯು ವಾಸವದತ್ತಾ ಪದ್ಮಾವತಿಯರಿಗಿರುವ ಲತಾಮಂಟಪದ ಬಾಗಿಲಿಗೇ ಬಹು ಕುಶಲತೆಯಿಂದ ವತ್ಸರಾಜ ವಸಂತಕರನ್ನು ತಂದು ಕೂರಿಸುವನು.

ಶಾಕುಂತಲದಂತೆ ಇಲ್ಲಿಯೂ ದುಂಬಿಯಿಂದ ಸಂವಿಧಾನಕ್ಕೆ ತುಂಬಾ ಉಪಕಾರ ವಾಗುವುದು. ಹೊಸದಾಗಿ ಮದುವೆಯಾಗಿ, ಸಂಕಲಿಕೆಯ ಧೋತ್ರವು ಇನ್ನೂ ಮಾಸದೆಯೇ ಇದ್ದಿರಬಹುದಾದ ಕಾಲದಲ್ಲಿ ಈ ಮದುವಣಿಗನಾದ ರಾಜನು ಆ ದುಂಬಿಗಳನ್ನು ಓಡಿಸಬೇಡ ; ಅವು "ಎಮ್ಮಂದದೆ ನಿಜ ದಯಿತಾ ವಿಯೋಗವೊಂದುಗುಂ" ಎನ್ನುವನು ! ಪದ್ಮಾವತಿಯು ಮಂಟಪದ ಒಳಗೆ ಇರದೇ ತನ್ನ ಹತ್ತಿರವೇ ಇದ್ದರೂ ಅವನು ಅದೇ ಮಾತನಾಡುತ್ತಿದ್ದನೆಂದು ತೋರುತ್ತದೆ ! ವಾಸವದತ್ತೆಯು ಒಳಗಿಂದಲೇ ಇಂಥ ರಾಜನನ್ನು ನೋಡಿ ಸಮಾಧಾನವನ್ನೂ ಕಣ್ಣೀರನ್ನೂ ತಂದುಕೊಳ್ಳುವಳು. ತನ್ನ ಪ್ರಾಣಪ್ರಿಯನಾದ ಗಂಡನನ್ನು ಎಷ್ಟೋ ದಿನದ ಮೇಲೆ ಕಂಡರೂ ಈಗ ಅವನೊಡನೆ ಮಾತನಾಡುವುದಕ್ಕುಂಟೇ, ಕಣ್ಣು ತುಂಬ ನೋಡುವುದಕ್ಕಾದರೂ ಉಂಟೇ, ಅವನ ಮುಂದೆ ಕಾಣಿಸಿಕೊಳ್ಳುವುದಕ್ಕುಂಟೇ ? ಮತ್ತೊಂದು ಸಲ ಚಾತುರ್ಯದಿಂದ ಸುಳ್ಳುಹೇಳಿ ಮಾನವನ್ನು ಕಾಪಾಡಿಕೊಳ್ಳಬೇಕಾಗುವುದು. ಅವಳ ಸಂಕಟವು ಪ್ರೇಕ್ಷಕರಿಗೆ ಗೊತ್ತು. ವಾಸವದತ್ತೆಗೆ ತನ್ನ ಗಂಡನು 'ವಿರಚಿಕೆ' ಮುಂತಾದ ಇತರ ಅಂತಃಪುರಸ್ತ್ರೀಯರಲ್ಲಿ ಅನುರಕ್ತನಾಗಿದ್ದನೆಂದು ಹಿಂದೆ ಸ್ವಲ್ಪ ಮನ ಕಷಾಯವಿದ್ದಿರಬಹುದು. ಆದರೆ ಈಗ ವಿರಹದಿಂದಲೂ, ತಾನೇ ಪರೋಕ್ಷದಲ್ಲಿ ಕಿವಿಯಾರ ಕೇಳಿದ ಮಾತುಗಳಿಂದಲೂ ರಾಜನು ತನ್ನಲ್ಲಿ ಎಷ್ಟು ಪ್ರೀತಿಯಿಟ್ಟಿದ್ದನೆಂದು ಗೊತ್ತಾಗಿ, ಅವಳಿಗೆ ಪ್ರಣಯವು ಉಕ್ಕಿ ಬರುತ್ತಿತ್ತೆಂದು ತೋರುತ್ತದೆ. ಈ ಸ್ಥಿತಿಯಲ್ಲಿ ಅವಳು ಗಂಭೀರವಾಗಿರಬೇಕು ! ಎಂಥ ವಿಷಮ ಸಂಕಟ ! ಈ ಸಮಯಕ್ಕೆ ಸರಿಯಾಗಿ ವಿದೂಷಕನು ವತ್ಸರಾಜನನ್ನು ಧರ್ಮಸಂಕಟಕ್ಕೆ ಸಿಕ್ಕಿಸಿ, ಅವನ ಹೃದಯದಲ್ಲಿದ್ದ ವಾಸವದತ್ತಾ ಪಕ್ಷಪಾತವನ್ನು ಹೊರಪಡಿಸುವನು. ಆದರೂ ಪದ್ಮಾವತಿಗೆ ಸಿಟ್ಟಿಲ್ಲ. ಇನ್ನೂ ವಸಂತಕನು 'ಇಷ್ಟು ಕಿರುಕುಳದ ಸ್ವಭಾವದವನು !' ರಾಜನನ್ನು ಸುಮ್ಮನೆ ಪೀಡಿಸುತ್ತಾನಲ್ಲ ಎಂದು ನೊಂದುಕೊಳ್ಳುವಳು. ಇದನ್ನು ಕಂಡರೆ ವಾಸವದತ್ತೆಗಿಂತಲೂ ಪ್ರೇಕ್ಷಕರಿಗೆ ಪದ್ಮಾವತಿಯಲ್ಲಿ ಹೆಚ್ಚು ಪ್ರೀತಿಗೌರವಗಳು ಹುಟ್ಟುವುವು. ತನ್ನ ಗಂಡನು ತನ್ನ ಸವತಿಯನ್ನು ತನಗಿಂತಲೂ ಹೆಚ್ಚಾಗಿ ಪ್ರೀತಿಸುತ್ತಾನೆಂದು ತಿಳಿದು ತಿಳಿದೂ, ಅವನ ಮೇಲೂ, ಅವಳ

ಮೇಲೂ ಶಾಂತಳಾಗಿರುವ ಹೆಂಗಸೇ ಇರಲಾರಳು! ಚೇಟಿಗೂ ಅವನು "ನಿರ್ದಯನು" ಎಂದು ತೋರುವುದು. ಆಗ ಪದ್ಮಾವತಿಯು ತನ್ನ ಸಹಜವಾದ ದೊಡ್ಡ ಗುಣದಿಂದ

> "ಸಖಿ, ಛಿ! ಛಿ! ಹಾಗೆ ಎಣಿಸಬೇಡ. ಈಗಲೂ ಆ ವಾಸವದತ್ತೆಯಲ್ಲಿ ಅಷ್ಟೊಂದು ಪ್ರೀತಿಯನ್ನಿಟ್ಟು, ಆಕೆಯ ಗುಣಗಳನ್ನು ಪ್ರಶಂಸೆ ಮಾಡುತ್ತಿರುವ ಆರ್ಯಪುತ್ರನನ್ನು ನಿರ್ದಯನೆಂಬು ಹೇಗೆ ಹೇಳಬಹುದು? ಅವನೇನೋ ಬಹಳ ದಯಾಳುವೇ!"

ಎಂದು ತನ್ನ "ವಂಶ ಗೌರವಕ್ಕೆ ತಕ್ಕ ಮಾತನ್ನು" ಆಡುವಳು.

ವಸಂತಕನಿಗೆ ಮಾತ್ರ ವಾಸವದತ್ತೆಯನ್ನು ಕಂಡರೆ ಹೆದರಿಕೆ, (ರಾಜನಿಗೂ ಅದು ಸ್ವಲ್ಪ ಇದ್ದೇ ಇತ್ತು) ಆದರೆ ಅವಳು "ಬಹಳ ಇಷ್ಟಳು" ಪದ್ಮಾವತಿಯಲ್ಲಿ ಆ ಹೆದರಿಕೆ ಇಲ್ಲದ್ದರಿಂದಲೂ, ಅವಳಲ್ಲಿ (ವಾಸವದತ್ತೆಯಲ್ಲಿದ್ದಂತೆ?) "ಕೋಪ ಅಹಂಕಾರಗಳಿಲ್ಲದೆ" ಯಾವಾಗಲೂ ಪ್ರಿಯವನ್ನೇ ನುಡಿಯುತ್ತ, ಬಹಳ ದಾಕ್ಷಿಣ್ಯ ಪ್ರಕೃತಿಯವಳಾದ್ದರಿಂದಲೂ, ಅವಳು ಅವನನ್ನು ಹುಡುಕಿಕೊಂಡು ಬಂದು ತಿಂಡಿಕೊಡುತ್ತಿದ್ದದ್ದರಿಂದಲೂ ಅವಳಲ್ಲಿ ಅವನಿಗೆ ಹೆಚ್ಚು ಪಕ್ಷಪಾತವೆಂದು ತೋರುತ್ತದೆ! ಇದನ್ನು ವತ್ಸರಾಜನು ತನ್ನ ಸ್ನೇಹಿತನ ಬಾಯಿಂದ ಹೊರಡಿಸಿ ವಾಸವದತ್ತೆಗೆ ತಿಳಿಸುವೆನೆಂದು ಹೆದರಿಸುವನು! ಹೀಗೆ ವಾಸವದತ್ತೆಯ ನೆನಪು ಬಂದು, ರಾಜನು ಅಳುವುದಕ್ಕೇ ಮೊದಲುಮಾಡುವನು. ಆಗಲೂ ಪ್ರಿಯವಾದ ಮಾತುಗಳು ನಡೆಯುತ್ತಿದ್ದದ್ದನ್ನು ತಪ್ಪಿಸಿದ್ದಕ್ಕಾಗಿ ಪದ್ಮಾವತಿಗೆ "ಕೇಡಿಗನಾದ ಈ ವಸಂತಕನ" ಮೇಲೆ ಸಿಟ್ಟೇ ಹೊರತು, ವತ್ಸರಾಜನ ಮೇಲೆ ಆಕ್ಷೇಪಣೆಯಿಲ್ಲ. ಹೀಗಿರಲು ತನ್ನ ಪತಿಯ ಸಂತೋಷ ಸಮಾಧಾನಗಳನ್ನೇ ಮುಖ್ಯವಾಗಿ ಎಣಿಸಿ ವಾಸವದತ್ತೆಯು ಪದ್ಮಾವತಿಯನ್ನು ಅವನಲ್ಲಿ ಕಳುಹಿಸಿ, ತಾನೂ ಹೊರಟುಹೋಗುವಳು? ಸಹಜವಾದ ಪತಿಪ್ರೇಮವೆಂಬುದು ಅಂತಹುದು, ಯಾವ ಪ್ರೇಮವಾದರೂ ಸರಿಯೆ! ಅದು ಸಹಜವಾದ್ದೆಂಬುದಕ್ಕೆ ಅದು ಸ್ವಸುಖನಿರಭಿಲಾಷವಾಗಿ ಸ್ವಾರ್ಥತ್ಯಾಗಪೂರ್ವಕವಾಗಿರುವುದೇ ಗುರುತು.

ಅಷ್ಟುಹೊತ್ತಿಗೆ ನೀರು ತರುವುದಕ್ಕೆಂದು ಹೋಗಿದ್ದ ವಸಂತಕನು ನೀರನ್ನು ತಂದು ಪದ್ಮಾವತಿಗೆ ಒಂದು ಸುಳ್ಳುಹೇಳಿ, ಅವಳ ಕೈಯಲ್ಲಿಯೇ ನೀರನ್ನು ಕೊಟ್ಟು ರಾಜನನ್ನು ಉಪಚರಿಸುವಂತೆ ಹೇಳುವನು. ಆಕೆಯು ಸುಳ್ಳಿಗೆ ಕೋಪಿಸಿಕೊಳ್ಳದೆ "ರಾಜನ ಸುಗುಣಗಳೇ ಪರಿಜನಕ್ಕೂ ಬರುವುವು" ಎಂದು ಸಂತೋಷಪಟ್ಟುಕೊಳ್ಳುವಳು. ರಾಜನದು ಅಷ್ಟು ನಿರ್ಮಲವಾದ ಮನಸ್ಸಲ್ಲ. ಆದುದರಿಂದ ವಿದೂಷಕನ ಸುಳ್ಳನ್ನು ಮರೆಹೊಕ್ಕು "ಪಾಪ! ಇನ್ನೂ ಹೊಸದಾಗಿ ಮದುವೆಯಾದ ಹುಡುಗಿ, ನಿಜ ಹೇಳಿದರೆ ನೊಂದುಕೊಳ್ಳುತ್ತಾಳೆ" ಎಂದು ತನ್ನ ಸುಳ್ಳನ್ನು ಸಮರ್ಥಿಸಿಕೊಳ್ಳುವನು.

ಈ ಅಂಕದಲ್ಲಿಯೂ ಕವಿಯ ಸಂವಿಧಾನ ಕೌಶಲವೂ, ಸನ್ನಿವೇಶ ಕಲ್ಪನಾಚಾತುರ್ಯವೂ ಚೆನ್ನಾಗಿ ಗೊತ್ತಾಗುತ್ತವೆ. ಮನೆಯಲ್ಲಿ ಇರುವ ಒಂದೆರಡು ಸಾಮಗ್ರಿಗಳಿಂದಲೇ, ಹತ್ತಾರು ರುಚಿರುಚಿಯಾದ ಅಡಿಗೆ ಮಾಡಬಲ್ಲ ನಿಪುಣೆಯಾದ ಗೃಹಿಣಿಯಂತೆ, ಕವಿಯು ಮುಂದಿರುವ ಒಂದೆರಡು ಪಾತ್ರಗಳಲ್ಲಿಯೇ, ಹಳೆಯ ಕಥಾ ಸಾಮಗ್ರಿಗಳಿಂದಲೇ ಸುಂದರವಾಗಿ ಕಂಗೊಳಿಸುವ ಮನೋಹರವಾದ ರಸಪದಾರ್ಥಗಳನ್ನು ಸೃಷ್ಟಿಸಿದ್ದಾನೆ—ಪ್ರತಿಯೊಂದು ಪುಟದಲ್ಲಿಯೂ ಇದಕ್ಕೆ ಒಂದೆರಡು ಉದಾಹರಣೆಗಳು ಸಿಕ್ಕುತ್ತವೆ. ವತ್ಸರಾಜನಿಗೆ ವಾಸವದತ್ತೆಯಲ್ಲಿ ಹೆಚ್ಚು ಪ್ರೀತಿಯೆಂಬ ಪ್ರಸ್ತಾಪ ಬರುವಂತೆ ಪದ್ಮಾವತಿ ಮಾತು ತೆಗೆದದ್ದು, ವತ್ಸರಾಜ ವಸಂತಕರು ಲತಾಗೃಹದ ಬಾಗಿಲಲ್ಲೇ ನಿಲ್ಲುವಂತೆ ಚೇಟಿಯು ದುಂಬಿಗಳನ್ನು ಎಬ್ಬಿಸಿದ್ದು, ವಾಸವದತ್ತೆಯು ಅಲ್ಲಿಂದ ತಪ್ಪಿಸಿಕೊಂಡು ಹೋಗುವಂತೆ ವತ್ಸರಾಜನ ಕೈವಸ್ತ್ರದಿಂದ ಅವನ ಮುಖವನ್ನು ಮುಚ್ಚಿಸಿದ್ದು—ಇವು ಕೆಲವು ಉದಾಹರಣೆಗಳು.

ಐದನೆಯ ಅಂಕದಲ್ಲಿ ಮದುವೆಯು ಇನ್ನೂ ಸ್ವಲ್ಪ ಹಳೆಯದಾಗಿದೆ. ಆದರೂ ಪದ್ಮಾವತೀ ವಾಸವದತ್ತೆಯರಿಗೆ ಮಾತ್ಸರ್ಯೋದಯವಾಗಿಲ್ಲ. ಸ್ನೇಹವು ಕಮ್ಮಿಯಾಗಿಲ್ಲ. "ಪದ್ಮಾವತಿಗೆ ತಲೆನೋವೆಂದು ಹೇಳಿದರೆ ಸಾಕು, ಅವಳು ತಾನಾಗಿಯೇ ಬರುವಳು" ಎಂದು "ಏನಾದರೂ ಕಥೆ

ಗಳನ್ನು ಹೇಳುತ್ತ ರಾಜಕುಮಾರಿಗೆ ತಲೆನೋವಿನ ಬಾಧೆಯು ಅಷ್ಟಾಗಿ ತೋರದಂತೆ ವಿನೋದಪಡಿಸುವಳು.'' ರಾಜನಿಗೆ "ದಿವ್ಯರೂಪಸಂಪನ್ನೆಯುಂ ಒಳ್ಗುಣಕ್ಕೆಡೆಯುಂ ಆದ ವರಾಂಗಿಯ ಲಾಭದಿಂದ.......ದುಃಖವೊಂದಿನಿಸು ಶಾಂತಿಯನಾಂತವೊಲ್" ಇದ್ದರೂ, ವಾಸವದತ್ತೆಯ ಹುಚ್ಚು ಹಾಗೆಯೇ ಇದೆ. ಅದನ್ನು ಅವನೂ ಬಲ್ಲನು.

ಲಲನಾರತ್ನಮವಂತಿರಾಜನ ಗುಣಕ್ಕೊಪ್ಪಿರ್ದ ಸತ್ಪುತ್ರಿ ಕೋ
ಮಳೆ ಲಾವಾಣಕವಹ್ನಿಯಿಂ ಹಿಮಹತಾಬ್ಜ ಶ್ರೀಯವೊಲ್ ನಾಡೆ ಬೆಂ।
ದಳದೀಗಳ್ ಪಲಕಾಲಮಾಯ್ತು ಪೆರದೊರ್ವಳ್ ಸೂರೆಗೊಂಡಿರ್ದುಮೆ
ನ್ನೊಲವಂ ಮನ್ಮನಮಿನ್ನುಮಾಸತಿಯನೇಕಾಸಕ್ತಿಯಿಂ ಚಿಂತಿಕುಂ ॥

ಎಂದು ಅವನೇ ದುಃಖವನ್ನೂ, ಆಶ್ಚರ್ಯವನ್ನೂ ಪಟ್ಟುಕೊಳ್ಳುತ್ತಾನೆ. ಆದರೂ ಒಂದು ಸಾರಿ ಕೈನೊಂದವನಾದ್ದರಿಂದ ಪದ್ಮಾವತಿಗೆ ತಲೆನೋವೆಂದು ಕೇಳಿದಕೂಡಲೆ ಅಷ್ಟಕ್ಕೇ "ಅಪಾಯ ಶಂಕೆ" ಯಿಂದ ಅವಳನ್ನು ನೋಡುವುದಕ್ಕೆ ಹೊರಡುವನು. ಪದ್ಮಾವತಿಯು ಸಮುದ್ರಗೃಹಕ್ಕೆ ಬಂದಿರುವುದಿಲ್ಲ. (ಎಲ್ಲಿಂದ ಬರಬೇಕಾಗಿತ್ತೋ, ಏಕೆ ಬಂದಿರಲಿಲ್ಲವೋ ತಿಳಿಯದು !) ಅದನ್ನು ರಾಜನು ತಾರ್ಕಿಕನಂತೆ ಕಾರ್ಯಕಾರಣಭಾವ ವಿಮರ್ಶೆಯಿಂದ ನಿಷ್ಕರ್ಷೆಮಾಡಿ ಅವಳಿಗೆಂದು ಸಿದ್ಧಮಾಡಿದ್ದ ಹಾಸಿಗೆಯಲ್ಲಿಯೇ ಮಲಗಿಕೊಳ್ಳುವನು. ವಿದೂಷಕನು ಕಥೆಹೇಳಬೇಕಾಗಿ ಉಜ್ಜಯಿನಿಯ ಪ್ರಸ್ತಾಪವನ್ನೆತ್ತುವನು. (ಮೂಲದಲ್ಲಿದ್ದ ವಾಸವದತ್ತೆಯ ಕುರುಡು ತಮ್ಮನ ಸ್ಥಾನದಲ್ಲಿ ಕವಿಯು ನಾಟಕಕ್ಕೆ ಅನುರೂಪನೂ, ಸಂಪ್ರದಾಯ ಸಿದ್ಧನೂ ಆದ ವಿದೂಷಕನನ್ನು ತಂದುಹಾಕಿದ್ದಾನೆ. ಈ ಕೆಲಸವನ್ನು ವಾಸವದತ್ತೆಯು ಅವನೊಡನೆ ಹಂಚಿಕೊಂಡು ನಾಯಿಕೆಯನ್ನು ವಿನೋದ ಪಡಿಸುತ್ತಿರುತ್ತಾಳೆ.) ಉಜ್ಜಯಿನಿಯ ಪ್ರಸ್ತಾಪವನ್ನೆತ್ತಿದ ಕೂಡಲೆ ರಾಜನಿಗೆ ವಾಸವದತ್ತೆಯು ತನ್ನ ಮೇಲೂ. ಅವಳ ಕಡೆಯ ಜನಗಳ ಮೇಲೂ ತೋರಿಸುತ್ತಿದ್ದ ಅಪಾರವಾದ ಪ್ರೇಮವು ಜ್ಞಾಪಕಕ್ಕೆ ಬಂದು, ಆ ಯೋಚನೆಯಲ್ಲಿಯೇ ಇದ್ದು, ತನ್ನ ಸ್ನೇಹಿತನು "ಬ್ರಹ್ಮದತ್ತರಾಯ, ಕಾಂಪಿಲ್ಯನಗರ" ದ ಪಾಠವನ್ನು ಗಟ್ಟಿಮಾಡುತ್ತಿರಲು ನಿದ್ರೆಹೋಗಿಬಿಡುವನು. ಈ

ಸಮಯದಲ್ಲಿ ಅಲ್ಲಿಗೆ ವಾಸವದತ್ತೆಯನ್ನು ತಂದುಬಿಡುವುದಕ್ಕೆ ಕವಿಯು ಚಳಿಯನ್ನು ತಂದೊಡ್ಡಿ, ಕಂಬಳಿ ತರುವುದಕ್ಕೆಂದು ವಸಂತಕನನ್ನು ಓಡಿಸುವನು. ವಾಸವದತ್ತೆಯ ಜೊತೆಯಲ್ಲಿ ಚೇಟಿಯು ಬಂದಿದ್ದು, ತಲೆಗೆ ಹಾಕುವ ಲೇಪವನ್ನು ತರುವುದಕ್ಕೆಂದು ಹೊರಟುಹೋಗುವಳು. ಈ ಸಣ್ಣ ಪಾತ್ರಗಳನ್ನು ಓಡಿಸಿ, ರಾಜ ರಾಣಿಯರನ್ನು ಏಕಾಂತದಲ್ಲಿ ಸೇರಿಸುವುದಕ್ಕೆ ಕವಿಯು ಕಲ್ಪಿಸಿರುವ ನೆಪಗಳು ಅವನ ರಚನಾನೈಪುಣ್ಯವನ್ನು ತೋರಿಸತಕ್ಕುವಾಗಿವೆ. ಸಾಮಾನ್ಯ ನಾಟಕಕರ್ತರಿಗೆ ಇಂಥ ಕಡೆಗಳಲ್ಲಿ ಬುದ್ಧಿ ಓಡುವುದು ಕಷ್ಟ. ವಾಸವದತ್ತೆಗೆ ಪದ್ಮಾವತಿಯ ತಲೆನೋವಿನ ವಿಮರ್ಶೆಯು ವತ್ಸರಾಜನ ದೃಷ್ಟಿಯಿಂದ—ಪದ್ಮಾವತಿಯು ಸ್ವಸ್ಥಳಾಗಿದ್ದರೆ ಅವಳು ತನ್ನ ಪ್ರಿಯಪತಿಯ "ಮನಸ್ಸಿಗೆ ಉಲ್ಲಾಸವನ್ನು ಕೊಡಬಹುದು" ಎಂದು ಅವಳ ಯೋಚನೆ. ಪದ್ಮಾವತಿಯ ಮೇಲಣ ಪ್ರೇಮವೂ ಕಮ್ಮಿಯಲ್ಲ; ಅವಳ ಹತ್ತಿರ ಯಾರೂ ಇಲ್ಲವೆಂದು ಕನಿಕರಪಟ್ಟು "ದೂರದಲ್ಲಿ ಬೇರೆಯಾಗಿ ಕುಳಿತರೆ ನನ್ನಲ್ಲಿ ತನಗೆ ಸ್ನೇಹವು ಕಡಿಮೆಯೆಂದು ತಿಳಿಯಬಹುದು" ಎಂದು ಶಂಕಿಸಿ, ಆ ಹಾಸಿಗೆಯ ಮೇಲೆ ಕುಳಿತುಕೊಳ್ಳುವಳು. ಕೊನೆಗೆ ಅರ್ಧ ಹಾಸಿಗೆ ಬಿಟ್ಟು, ಮಿಕ್ಕ ಅರ್ಧ ಹಾಸಿಗೆಯಲ್ಲಿ ಮಾತ್ರ (ಮುಸುಕುಹಾಕಿಕೊಂಡೋ ಕತ್ತಲೆಯಲ್ಲಿಯೋ!) ಒಂದು ವ್ಯಕ್ತಿಯು ಮಲಗಿದ್ದದ್ದರಿಂದ ಅದನ್ನು ಪದ್ಮಾವತಿಯೆಂದು ಭಾವಿಸಿ, ತಾನೂ ಅಲ್ಲಿ ಮಲಗಿಕೊಳ್ಳುವಳು! ಪ್ರಣಯ ಮೋಹದಲ್ಲಿ ಸಿಕ್ಕಿ ಗುರುಹಿರಿಯರನ್ನು ಲಕ್ಷ್ಯಮಾಡದೆ ಕಟ್ಟಿಕೊಂಡು ಓಡಿಹೋದ ವಾಸವದತ್ತಾ ವತ್ಸರಾಜರಂಥವರು ಒಬ್ಬರ ದರ್ಶನ ಭಾಷಣಗಳಿಗಾಗಿ ಮತ್ತೊಬ್ಬರು ಆತುರಪಡುತ್ತಿದ್ದ ಕಾಲದಲ್ಲಿ, ಸಂದರ್ಭವಿಶೇಷದಿಂದ ಅದು ಅಸಾಧ್ಯವಾಗಿರುವಾಗ, ಅವರನ್ನು ಅವರಿಗೇ ಗೊತ್ತಿಲ್ಲದಂತೆಯೂ, ಪ್ರೇಕ್ಷಕರಿಗೆ ಮಾತ್ರ ಗೊತ್ತಾಗುವಂತೆಯೂ, ನಿರ್ಜನವಾಗಿರುವ ಶಯ್ಯಾಗೃಹದಲ್ಲಿ ರಾತ್ರಿಹೊತ್ತು ‡ ಹೀಗೆ ತಂದುಸೇರಿಸಿರುವುದು ಒಂದು ಅಪೂರ್ವ ಸನ್ನಿವೇಶ.

---

‡ ಚಿತ್ರಗಾರರು ಚಿತ್ರದಲ್ಲಿ ಚಂದ್ರನನ್ನೋ ನಕ್ಷತ್ರಗಳನ್ನೋ ಬರೆದು ರಾತ್ರಿಯನ್ನು ಸೂಚಿಸುವುದುಂಟು. ಹಾಗೆ ಇಲ್ಲಿ ಅದು ರಾತ್ರಿಯೆಂದು ಬಾಯಿ ಬಿಟ್ಟು ಹೇಳದೆ ಎರಡು ಕಡೆ ದೀಪವನ್ನಿಟ್ಟು ಕವಿಯು ವೇಳೆಯನ್ನು ಸೂಚಿಸಿದ್ದಾನೆ.

ಮುಂದೇನಾಗುವುದೋ ಎಂದು ಪ್ರೇಕ್ಷಕರು ಕುತೂಹಲಪಡುತ್ತ ಪದ್ಮಾವತಿ ಎಲ್ಲಿ ಬಂದುಬಿಡುವಳೋ ಎಂದು ತವಕಪಡುತ್ತ ಇರುವಾಗ, ರಾಜನು "ಹಾ ವಾಸವದತ್ತೇ!" ಎಂದು ಕನವರಿಸಿಕೊಳ್ಳುವನು. ಇದೇ ಈ ನಾಟಕದ ತಿರುಳಾದ ಸ್ವಪ್ನದ ಮೊದಲು. ಇದನ್ನು ಎಚ್ಚರದ ಮಾತೆಂದು ತಿಳಿದ ವಾಸವದತ್ತೆಗೆ ಹೇಗಾಗಿರಬೇಕು! ವತ್ಸರಾಜನನ್ನು ತನ್ನೆದುರಿಗೇ ನೋಡು ತ್ತಿದ್ದ ವಾಸವದತ್ತೆಗೆ ಹೀಗಾದಮೇಲೆ ಸತ್ತುಹೋದಳೆಂದು ತೀರ್ಮಾನ ವಾಗಿದ್ದ ವಾಸವದತ್ತೆ ಸುತರಾಂ ಅನಿರೀಕ್ಷಿತವಾಗಿ ಕಣ್ಣಿಗೆ ಬಿದ್ದಾಗ ವತ್ಸ ರಾಜನಿಗೆ ಹೇಗಾಗಿರಬೇಕು? ಕನಸಿನಲ್ಲಿಯೇ ಮನ್ನಣೆಯನ್ನು ಕೇಳುತ್ತೀ ನೆಂದು ಹೋಗಿ ಮೇಲಕ್ಕೆ ತೋಳುಗಳನ್ನೆತ್ತಿ ಅವು ಮಂಚದ ಮೇಲೆ ಜೋಲಾಡುತ್ತ ಬೀಳಲು ವಾಸವದತ್ತೆಗೆ ಸಹಿಸದೆ ಅವುಗಳನ್ನು ಮೇಲೆತ್ತಿಟ್ಟು ಓಡಿಹೋಗುವಳು. ಅವನೂ ಥಿಗ್ಗನೆ ಮಂಚವಿಂದೆದ್ದು "ವಾಸವದತ್ತೆ! ನಿಲ್ಲು ನಿಲ್ಲು" ಎಂದು ನುಗ್ಗಿ ಹೊಸ್ತಿಲನ್ನು ಎಡವುವನು. ವಾಸವದತ್ತೆಯು ಜೀವಿಸಿರುವಳೆಂದು ಅವನಿಗೆ ದೃಢವಾಗಿ ನಂಬುಗೆಯು ಉಂಟಾಯಿತು. ಕ್ಷಣಮಾತ್ರದಲ್ಲಿ ಅವಳ ಜೋಲ್ಮುಡಿ, ಕಪ್ಪುಹಚ್ಚಿಕೊಳ್ಳದ ಕಣ್ಣುಗಳು, ಸುಂದರವಾದ ಮುಖ, ಎಲ್ಲವೂ ಅವನ ಕಣ್ಣಿಗೆ ಬಿದ್ದುವು. ಅವಳ ಅಂಗ ಸ್ಪರ್ಶದಿಂದುಂಟಾದ ರೋಮಾಂಚವಿನ್ನೂ ಹಾಗೆಯೇ ಇತ್ತು. ಆದ್ದರಿಂದ ಅದು ಕನಸೆಂದು ನಂಬುವುದು ಹೇಗೆ? ಆಗತಾನೇ "ಉಜ್ಜಯಿನಿಯ ಸ್ನಾನ ಘಟ್ಟ"ದಿಂದ ಬಂದ ವಿದೂಷಕನು ಅದು ಕನಸಿರಬಹುದೆಂದೂ ಇಲ್ಲದಿದ್ದರೆ ರಾಜನು ಆ ನಗರದಲ್ಲಿ ವಾಸಿಸುತ್ತಿದ್ದ ಅವಂತಿಸುಂದರಿ ಎಂಬ ಯಕ್ಷಿಣಿಯೊ ಬ್ಬಳನ್ನು ನೋಡಿರಬಹುದೆಂದೂ ವಾದಿಸುವನು. ಆದರೂ ರಾಜನಿಗೇನೋ ಅವನ ತರ್ಕವು ಒಪ್ಪುವುದಿಲ್ಲ. ಅಂತು, ವಾಸವದತ್ತೆಯು ಸಿಕ್ಕದಿದ್ದುದರಿಂದ, ಒಪ್ಪಲಾರದ ತರ್ಕವನ್ನೇ ಒಪ್ಪಬೇಕಾಗುವುದು. "ಯದಿ ಸ್ಯಾದುಪಲ ಭ್ಯೇತ!" ಇದ್ದರೆ ಸಿಕ್ಕಲೇಬೇಕಷ್ಟೆ! ಈ ಸಮಯಕ್ಕೆ ಸರಿಯಾಗಿ ಉದಯನ ವಾಸವದತ್ತೆಯರ ಪ್ರೇಮಕ್ಕೆ ಪಾತ್ರವಾಗಿದ್ದು, ಅವರ ಮಗುವಿಗಿಂತಲೂ ಹೆಚ್ಚಾಗಿದ್ದ ಘೋಷವತೀ ವೀಣೆಯು ಸಿಕ್ಕಿ, ಅವನ ಗೋಳು ಮತ್ತಷ್ಟು ಹೆಚ್ಚಾಗುವುದು. ಇದೇ ಅವನ ಶೋಕದ ಚರಮೋನ್ನತಿ. ಅಲ್ಲಿಂದ ಮುಂದೆ

ಆ ಶೋಕಹಿಮಾಲಯವು ಕರಗಿ, ಆನಂದಸಾಗರವಾಗಿ ಪರಿಣಮಿಸಲು ಮೊದಲಾಗುವುದು. ಕೆಲವುವೇಳೆ, ಪರೀಕ್ಷೆಗೆ ಹೋಗಿದ್ದ ಯುವಕರಿಗೆ ಇತ್ತಕಡೆ ಮದುವೆಯೋ, ಪುತ್ರೋತ್ಸವವೋ ಆಗುವುದು, ಅತ್ತಕಡೆ ಪರೀಕ್ಷೆಯಲ್ಲಿ ತೇರ್ಗಡೆಯಾಯಿತೆಂಬ ವರ್ತಮಾನವೂ ಬರುವುದು. ಹಾಗೆಯೇ ವತ್ಸರಾಜನಿಗೂ, ಆರನೆಯ ಅಂಕದಲ್ಲಿ, ಅತ್ತಕಡೆ ಕೈತಪ್ಪಿಹೋದ ರಾಜ್ಯವೂ ದೊರಕುವುದು, ಇತ್ತಕಡೆ ಕಳೆದುಕೊಂಡ ಹೆಂಡತಿಯೂ ಕೈಸೇರುವಳು. ಆದರೆ ಪರೀಕ್ಷೆಯ ಫಲಿತಾಂಶ ತಿಳಿಯುವುದಕ್ಕೆ ಮುಂಚೆ ಮನಸ್ಸಿಗೆ ಕಳವಳವಿರುವಂತೆ ಅವನಿಗೂ ಕಳವಳವಿರುತ್ತದೆ. ಆ ಕಳವಳದಲ್ಲಿಯೂ, ತನ್ನ ರಾಜ್ಯವನ್ನು ಆಕ್ರಮಿಸಿಕೊಂಡ ಆರುಣಿಯ ಮೇಲೆ ಕೋಪವನ್ನು ತೋರಿಸುವನು. (ಆದ್ದರಿಂದ ಅವನು ಶಾಕುಂತಲದ ದುಷ್ಯಂತನಿಗೆ ಸದೃಶನಾದ ಧೀರೊದಾತ್ತನೇ ಹೊರತು ರತ್ನಾವಳಿಯ ವತ್ಸರಾಜನಿಗೆ ಸದೃಶನಾದ ಧೀರಲಲಿತನಲ್ಲ.) ಒಂದು ಕಡೆ ತನ್ನ ರಾಜ್ಯವನ್ನು ಗೆಲ್ಲುವ ಕಳವಳ – ಅದು ಅಷ್ಟು ದೊಡ್ಡದಲ್ಲ, ಏಕೆಂದರೆ ಅದಕ್ಕೆ ರುಮಣ್ವಂತನು ಸೇನೆಯನ್ನು ಸಿದ್ಧಮಾಡಿಕೊಂಡು ಆಗಲೇ ಅದನ್ನು ಗಂಗಾನದಿಯ ಆಚೆದಡಕ್ಕೆ ತೆಗೆದುಕೊಂಡು ಹೋಗಿದ್ದನು, ತನ್ನ ಭಾವಮೈದನಾದಂದಿರಾದ ದರ್ಶಕಮಹಾಸೇನರ ಸಹಾಯ ಬೇರೆ ಇತ್ತು. (ಹೊಸದಾಗಿ ಕೈಹಿಡಿದ ಹುಡುಗಿಯ ಪುಣ್ಯವಿತ್ತು !) ಅದಕ್ಕಿಂತ ಮತ್ತೊಂದು ಕಡೆ, ವಾಸವದತ್ತೆಯ ಕಳವಳವೇ ದೊಡ್ಡದಾಗಿತ್ತು. ಇದನ್ನು ಹೆಚ್ಚಿಸಿ ಪರಿಹಾರಮಾಡಿ, ವಾಸವದತ್ತೆಯನ್ನು ವತ್ಸರಾಜನೊಡನೆ ಸೇರಿಸಿರುವ ಸಂವಿಧಾನ ಕೌಶಲವೂ ಮೆಚ್ಚತಕ್ಕದ್ದಾಗಿದೆ.

ವಾಸವದತ್ತೆಯು ಸುಟ್ಟು ಸತ್ತುಹೋದ ವರ್ತಮಾನವನ್ನೂ ಉದಯನನಿಗೆ ತಿರುಗಿ ರಾಜ್ಯಬಂದದ್ದನ್ನೂ ಕೇಳಿ ಅವಳ ತಾಯಿತಂದೆಗಳು ಒಬ್ಬ ಕಂಚುಕಿಯನ್ನೂ, ದಾದಿಯನ್ನೂ ಕಳುಹಿಸಿ, ಅವರೊಡನೆ ರಾಜನ “ ಮನಸ್ಸಮಾಧಾನಕ್ಕಾಗಿ ” ಅವನ ಮತ್ತು ವಾಸವದತ್ತೆಯ ಚಿತ್ರಪಟಗಳನ್ನು ಕಳುಹಿಸಿಕೊಡುವರು. ಅವರು ಬಂದರೆಂದು ಕೇಳಿ ಪದ್ಮಾವತಿಯು ಸ್ವಜನರನ್ನೂ, ಬಂಧುಗಳನ್ನೂ ಕಂಡವಳಂತೆ ಸಂತೋಷಪಡುವಳು. (ಗಂಡನಕಡೆಯವರನ್ನು, ಮೊದಲನೆಯ ಹೆಂಡಿತಿಯ ಕಡೆಯವರನ್ನೂ ತೊರೆದುಬಿಡದೆ

ಅವರನ್ನು ಸ್ವಜನರೆಂದು ಕಾಣುವ ಪುಣ್ಯಾತಗಿತ್ತಿಯಾದ ಹೆಂಡಿತಿ–ಎರಡನೆಯ ಹೆಂಡಿತಿ–ಯಾರು ?) ಇನ್ನೂ ತನ್ನ ಸವತಿಯ ಕಡೆಯವರೇ ತನ್ನನ್ನು ಹೇಗೆ ಕಾಣುತ್ತಾರೋ, ತನಗೆ ಏನು ಹೇಳುತ್ತಾರೋ ಎಂದು ಅವಳಿಗೆ ಹೆದರಿಕೆ. ರಾಜನಿಗೂ ಅದೇ ಕಳವಳ ! ಸೆರೆಯಲ್ಲಿಟ್ಟಿದ್ದರೂ ತನ್ನನ್ನು ಮಗನಿಗಿಂತಲೂ ಹೆಚ್ಚಾಗಿ ನೋಡುತ್ತಿದ್ದವರನ್ನು ಮೋಸಗೊಳಿಸಿ, ಅಂತಃಪುರದಲ್ಲಿದ್ದ ಹುಡುಗಿಯನ್ನು ಎತ್ತಿಕೊಂಡು ಹೋಗಿ ಅವಳನ್ನು ಯಾವುದೋ ಒಂದು ಕುಗ್ರಾಮದಲ್ಲಿ ಬೆಂಕಿಗೆ ಹಾಕಿದನೆಂದು ಹೊಟ್ಟೆಯ ಸಂಕಟ. ಇದಕ್ಕಾಗಿ ಅವಳನ್ನು ಹೆತ್ತ ತಾಯಿತಂದೆಗಳು ಏನನ್ನುತ್ತಾರೋ ಎಂಬ ಚಿಂತೆ. ಆದರೆ ಅವರು ಏನೂ ಆಕ್ಷೇಪಿಸದೆ ಅವನ ಯೋಗಕ್ಷೇಮವನ್ನು ಕೇಳಿ ಅವನ ಮನಸ್ಸಮಾಧಾನಕ್ಕಾಗಿ ಚಿತ್ರಪಟಗಳನ್ನು ಕಳುಹಿಸಿಕೊಡುವರು. ಅವನು ತನ್ನ ಯೋಗಕ್ಷೇಮವನ್ನು ಏನೆಂದು ಹೇಳಲು ಬಾಯಿ ಬಂದೀತು ? ದುಃಖದಿಂದ ಸಿಟ್ಟುಸಿರುಬಿಟ್ಟು "ಏನು ? ನಮ್ಮೆಲ್ಲರ ಯೋಗಕ್ಷೇಮವೇ ? ಇದೋ ! ನನಗಿರತಕ್ಕ ಎಲ್ಲಾ ಕುಶಲವೂ ಇದೇ !" ಎಂದು ಕಣ್ಣೀರು ತಂದುಕೊಳ್ಳುವನು. ಕಂಚುಕಿಯು ಮುದುಕನಂತೆ ಸ್ವಲ್ಪ ವೇದಾಂತವನ್ನು ಬೀಸಿ, ಶೈತ್ಯೋಪಚಾರ ಮಾಡುವನು. ಪದ್ಮಾವತಿಗೆ ಚಿತ್ರಪಟದಕಡೆ ಗಮನಹೋಗಿ ಅವಳು ವಾಸವದತ್ತೆಯ ಚಿತ್ರಕ್ಕೆ "ಗುರುಜನ"ವೆಂದು ನಮಸ್ಕರಿಸಲಿಚ್ಛಿಸುವಳು. ಇದು ಬರಿಯ ಬಾಹ್ಯ ನಟನೆಯಲ್ಲ ! ಅವಳದ್ದು ನಿಜವಾಗಿಯೂ ಅಂತಹ ಸತ್ಸ್ವಭಾವ. ಇಂಥ ಮೊದಲನೆಯ ಅತ್ತೆಯನ್ನು ಪಡೆದಿರುವವನು ವತ್ಸರಾಜನೊಬ್ಬನೇ ಎಂದು ತೋರುತ್ತದೆ. ಅವರ 'ಸ್ನೇಹ' 'ಘನತೆ'ಗಳಿಂದ ಪೂರ್ಣವಾದ ಮಾತುಗಳು ವತ್ಸರಾಜನಿಗೆ ರಾಜ್ಯ ಸಿಕ್ಕಿದ್ದಕ್ಕಿಂತಲೂ ಹೆಚ್ಚು ಸಂತೋಷವನ್ನುಂಟುಮಾಡುವುವು. ಸಂಸಾರವನ್ನು ಅಪೇಕ್ಷಿಸುವುದು ಇಂತಹ ಸ್ನೇಹ ಸಂತೋಷಕ್ಕೋಸ್ಕರ ; ಈ ಸಂತೋಷವು ಮೊದಲನೆಯ ಸಂಬಂಧವಲ್ಲಿಯೇ ಅನೇಕ ಸಂಸಾರಗಳಲ್ಲಿ ಅಭಾವವಾಗಿರುವಾಗ, ಅದನ್ನು ಎರಡನೆಯ ಸಂಬಂಧದಲ್ಲಿ ಕೈತುಂಬ ಪಡೆದ ವತ್ಸರಾಜನು ಎಷ್ಟು ಪುಣ್ಯವಂತ ! ಅದನ್ನು ಇಷ್ಟು ಸುಲಲಿತವಾಗಿ ಕಲ್ಪಿಸಿ ಪ್ರದರ್ಶಿಸಿರುವ ಕವಿಯ ಮನೋಧರ್ಮವು ಎಂತಹುದು ! ಈ ನಾಟಕದಲ್ಲಿಯೂ, ಪ್ರತಿಮಾನಾಟಕದಲ್ಲಿರುವಂತೆ ಅವನು ಒಂದು ಪ್ರೇಮಸಂಸಾರವನ್ನು ಚಿತ್ರಿಸಿದ್ದಾನೆ. ಇಲ್ಲಿ

ಯಾರಿಗಾದರೂ ಕೋಪತಾಪಗಳೂ, ಅರಿಷಡ್ವರ್ಗಗಳ ಬಾಧೆಯೂ ಉಂಟೆ? ರತ್ನಾವಳಿಯ ವಾಸವದತ್ತೆಯು ಮುಂಗೋಪದ ಮುದ್ದೆ; ಇಲ್ಲಿ ಉದಯನನ ಪ್ರಣಯದಿಂದ ಹುಳಿಮುರಿದು ಹಣ್ಣಾದವಳು. ಕಥಾಸರಿತ್ಸಾಗರದ ಮಹಾ ಸೇನನು ಉದಯನನಿಗೆ ಶತ್ರು. ಇಲ್ಲಿ ಅವರ ದ್ವೇಷದ ಸೂಚನೆಯೇ ಇಲ್ಲ— ಅವನು "ಆಪ್ತಮಿತ್ರ."

ಚಿತ್ರವನ್ನು ನೋಡುತ್ತಿರುವ ಪದ್ಮಾವತಿಗೆ ವಾಸವದತ್ತೆಯಲ್ಲಿ ಆವಂತಿ ಕೆಯ ಹೋಲಿಕೆಯು ಕಂಡುಬರುತ್ತದೆ. ವತ್ಸರಾಜನ ಚಿತ್ರವು ಅವನನ್ನು ಪೂರ್ತಿಯಾಗಿ ಹೋಲುತ್ತಿದ್ದುದರಿಂದ, ವಾಸವದತ್ತೆಯೂ ಅಲ್ಲಿ ಚಿತ್ರಿಸಿರು ವಂತೆಯೇ ಇದ್ದಿರಬೇಕು. (ಪಥ್ಯೆ ಈ ತರ್ಕಾನುಮಾನ ಬೇರೆ!) ಆದ್ದರಿಂದ ಅವಳು ಆವಂತಿಕೆಯ ವಿಚಾರವನ್ನು ಕೂಡಲೇ ವತ್ಸರಾಜನಿಗೆ ತಿಳಿಸುವಳು. ಅವನು ಅವಳನ್ನು ನೋಡಬೇಕೆಂದು ಆತುರದಿಂದ ಕೇಳುವನು. ಆದರೆ, ಗ್ರಹಚಾರ! ಅವಳು "ಪರಪುರುಷರ ಮುಂದೆ ಬಂದು ನಿಲ್ಲಲು ಇಷ್ಟಪಡುವ ಹಾಗಿಲ್ಲ" ರತ್ನಾವಳಿಯ ವತ್ಸರಾಜನಂತಲ್ಲದೆ, ಇವನು ''ರಾಜ ಧರ್ಮ ಗುರು''ವೂ, ''ಪರದಾರ ಸೋದರ''ನೂ ಆದ್ದರಿಂದ, ಇಂತಹ ತೀವ್ರ ಕುತೂ ಹಲದಲ್ಲಿಯೂ ಸುಮ್ಮನಾಗುವನು. ಆದರೆ ಉತ್ತರ ಕ್ಷಣದಲ್ಲಿಯೇ ಅವನು ಯಾವ ಆಕ್ಷೇಪಣೆಯೂ ಇಲ್ಲದಂತೆ ಅವಳನ್ನು ನೋಡುವ ಸಂದರ್ಭವೊದಗು ವುದು—ಯೌಗಂಧರಾಯಣನು ಬಂದು ತನ್ನ ತಂಗಿಯನ್ನು ಹಿಂದಕ್ಕೆ ಒಪ್ಪಿಸ ಬೇಕೆಂದು ಕೇಳುವನು; ಅವಳನ್ನು ಪದ್ಮಾವತಿಯೇ ಕರೆತರುವಳು. ಅವಳು ಬುರುಕಿಹಾಕಿಕೊಂಡು ಬರುವಳೆಂದು ತೋರುತ್ತದೆ; ಆದ್ದರಿಂದ ಸಂದರ್ಭ ವೊದಗಿಯೂ ರಾಜನಿಗೆ ಅವಳನ್ನು ನೋಡುವುದಕ್ಕಿಲ್ಲವಲ್ಲಾ? ಎಂದು ಅವನಿಗೂ ಪ್ರೇಕ್ಷಕರಿಗೂ ಸ್ವಲ್ಪ ಉತ್ಸಾಹಭಂಗ! ಅದಕ್ಕೆ ಪುನಃ ಸುಲಭ ವಾಗಿಯೇ ಪರಿಹಾರ! ''ಮತ್ತೊಬ್ಬರ ಒಡವೆಯನ್ನು ಹಿಂತಿರುಗಿ ಅವರಿಗೆ ಒಪ್ಪಿಸಿಕೊಡುವಾಗ, ಸಾಕ್ಷಿಗಳ ಮುಂದೆಯೇ ಆ ಕಾರ್ಯವನ್ನು ನಡೆಸ ಬೇಕಾದುದು ಆವಶ್ಯವು'' ಎಂದು ರಾಜನು ತನ್ನ ಮಾವನ ಮನೆಯಿಂದ ಬಂದು ಅಲ್ಲಿಯೇ ನಿಂತಿದ್ದ ಕಂಚುಕಿ ಮತ್ತು ದಾದಿಯರನ್ನು ಸಾಕ್ಷಿಗಳನ್ನಾಗಿ ಕೋರುವನು. ಆಗ ದಾದಿಯು ಅವಳನ್ನು ಗುರುತಿಸುವಳು. ವತ್ಸರಾಜನ

ಆಶ್ಚರ್ಯವನ್ನು ಕೇಳಬೇಕೆ? ಈ ಸ್ಥಿತಿಯಲ್ಲಿ ಅವಳು ತನ್ನ ತಂಗಿಯೆಂದು ಬ್ರಾಹ್ಮಣ ವೇಷದಲ್ಲಿದ್ದ ಯೌಗಂಧರಾಯಣನು ಮೊಂಡಾಟಮಾಡಿ ಸ್ವಲ್ಪ ದಿಗ್ಭ್ರಮೆ ಹಿಡಿಸುವನು. ಕೊನೆಗೆ ತೆರೆಯನ್ನು ಒತ್ತರಿಸಿ ಕಣ್ಣುತುಂಬ ನೋಡಿ ನಿರ್ಧರಮಾಡಿಕೊಳ್ಳಬೇಕಾಗುವುದು. ಆಗ ಯೌಗಂಧರಾಯಣನು ವೇಷವನ್ನು ತೆಗೆದು ಹಾಕಿ, ಎಲ್ಲವನ್ನೂ ವಿವರಿಸಿ ಪ್ರಭುವಿನ ಮನ್ನಣೆಯನ್ನು ಬೇಡುವನು. ವಾಸವದತ್ತೆಯನ್ನು ಸ್ವಲ್ಪಕಾಲಕ್ಕೆ ಮುಂಚೆಯೇ ಶಯ್ಯಾಗೃಹದಲ್ಲಿ ಕಂಡಿದ್ದು ಅದು ಕನಸೆಂದು ತೀರ್ಮಾನವಾಗಿತ್ತಾದಕಾರಣ ಈಗಲೂ ಇದೇನು "ಕನಸೋ! ಸತ್ಯವೋ!" ಎಂದು ರಾಜನಿಗೆ ಭ್ರಾಂತಿಯುಂಟಾಗುವುದು!

ವಾಸವದತ್ತೆಯನ್ನು ಮೊದಲಿನಿಂದಲೂ ರಂಗದಮೇಲೆ ನೋಡುತ್ತಿರುವ ಪ್ರೇಕ್ಷಕರಿಗೆ ಈ ಭ್ರಾಂತಿಯು ಅರ್ಥವಾಗುವುದಿಲ್ಲ. ಆದರೆ, ಉದಯನನಿಗೆ ವಾಸವದತ್ತೆಯ ವೃತ್ತಾಂತವೆಲ್ಲವೂ ಸ್ವಪ್ನದಂತೆ ಚಂಚಲವೂ ಸಂತೋಷದಾಯಕವೂ ಆದದ್ದು—ಅವಳಿಗೆ ವೀಣೆ ಕಲಿಸಿಕೊಟ್ಟದ್ದು, ಅವಳನ್ನು ಮದುವೆಯಾದದ್ದು, ಅವಳೊಡನೆ ಓಡಿಹೋದದ್ದು, ಅರಮನೆಯಲ್ಲಿಯೂ ಹೊರಗೂ ಅವಳನ್ನು ಎಡೆಬಿಡದೆ ಸುಖಸಂಕಥಾವಿನೋದಗಳಲ್ಲಿದ್ದುದ್ದು, ಅವಳನ್ನು ಕಳೆದುಕೊಂಡದ್ದು; ಕನಸಲ್ಲದ ಕನಸಿನಲ್ಲಿ ಕಂಡದ್ದು, ಕನಸಿನಂತಿರುವ ನಿಜದಲ್ಲಿ ಪಡೆದದ್ದು–ಇವೆಲ್ಲವೂ ಅಪೂರ್ವವಾದ ಅಲಭ್ಯ ಲಾಭ. ಕವಿಯೂ ಹಾಗೆಯೇ ವಾಸವದತ್ತೆಯನ್ನೂ, ಅವಳ ವೃತ್ತಾಂತವನ್ನೂ ನಾಟಕದ ಉದ್ದಕ್ಕೂ ಸ್ವಪ್ನದಂತೆಯೇ ತರುವನು; ಅವಳು ರಂಗದಮೇಲೆ ಬಂದಾಗಲೂ, ಪ್ರೇಕ್ಷಕರಿಗೂ ವಾಸವದತ್ತೆಯಲ್ಲ–"ಆವಂತಿಕೆ." ಅವಳ ಮರಣ ಜೀವಿತಗಳ ವೃತ್ತಾಂತವು ಮೇಲಿಂದ ಮೇಲೆ ಮಳೆಗಾಲದ ಮಳೆ ಬಿಸಿಲುಗಳ ಹಾಗೆ ನಾಟಕದ ಉದ್ದಕ್ಕೂ ಬಂದುಹೋಗುತ್ತವೆ–ಮೊದಲನೆಯ ಅಂಕದಲ್ಲಿ ಅವಳು ಬ್ರಹ್ಮಚಾರಿಯ ಎದುರಿಗೆ ನಿಂತುಕೊಂಡು ಅವನ ಬಾಯಿಂದ ತನ್ನ ಮರಣ ವೃತ್ತಾಂತವನ್ನು ತಾನೇ ಕೇಳುವಳು; ಎರಡನೆಯ ಅಂಕದಲ್ಲಿ ಅವಳ ಮರಣದಿಂದ ವತ್ಸರಾಜನು ಪರಿತಪಿಸುತ್ತಿದ್ದನ್ನು ತಾನೇ ಜ್ಞಾಪಿಸುವಳು; ಮೂರನೆಯ ಅಂಕದಲ್ಲಿ ವತ್ಸರಾಜನಿಗೆ ಬೇರೆ ಹೆಂಡತಿ ಇಲ್ಲವೆಂದು ವಾದಿಸುವಳು; ನಾಲ್ಕ

ನೆಯ ಅಂಕದಲ್ಲಿ ''ಪ್ರಥಮ ಭಾರ್ಯೆಯಾದ ವಾಸವದತ್ತೆಯ ವಿಷಯದಲ್ಲಿ ಪ್ರೀತಿ''; ''ಆ ಪ್ರಥಮಭಾರ್ಯೆಯನ್ನು ಕುರಿತು ದುಃಖ'', ವಾಸವದತ್ತೆಯ ಎದುರಿಗೇ ಸತ್ತ ಮೊದಲನೆಯ ಹೆಂಡತಿಗೂ, ಬದುಕಿರುವ ಎರಡನೆಯ ಹೆಂಡತಿಗೂ ಪರಸ್ಪರ ಹೋಲಿಕೆ—ಇವುಗಳ ಪ್ರಸ್ತಾಪ ಬರುವುದು; ಐದನೆಯ ಅಂಕದಲ್ಲಿ ರಾಜನು ಅವಳನ್ನು ನೆನೆಸಿಕೊಂಡು ಅಳುತ್ತಿರುವಾಗ ಅವಳು ಮಿಂಚಿನಂತೆ ಹೊಳೆದು ಓಡಿಹೋಗುವುದು; ಆದರ ಮೇಲೆ ವಿದೂಷಕನ ಸಂಭಾವ್ಯ ಅಸಂಭಾವ್ಯ ವಿಚಾರ—ಇವೂ; ಆರನೆಯ ಅಂಕದಲ್ಲಿ ಹೋದ ರಾಜ್ಯ ಬಂದಂತೆ ಸತ್ತ ಹೆಂಡತಿಯೂ ಬರಲಿ, ಎಂಬ ಕಂಚುಕಿಯ ''ಆಕಾಂಕ್ಷಿತ'', ''ಅವಳು ಮೃತಳಾಗಿದ್ದರೂ ಜೀವಿಸಿರುವಂತೆಯೇ'' ಎಂಬ ಭಾವನೆ; ಚಿತ್ರ ಪಟವನ್ನು ನೋಡಿ ''ಅವಳೇ ಇಲ್ಲಿರುವಳೆಂದು'' ರಾಜನ ಭಾವನೆ, ಕೊನೆಗೆ ವಾಸವದತ್ತೆಯು ತಾನು ವೇಷಹಾಕಿಕೊಂಡು ಬಂದು ರಕ್ಷಣೆಯನ್ನು ಅಪೇಕ್ಷಿಸಿದ್ದಕ್ಕಾಗಿ ಪದ್ಮಾವತಿಯನ್ನು ಕೇಳಿಕೊಂಡ ಕ್ಷಮಾಪಣೆ—ಇವೂ ಬರುತ್ತವೆ. ಇಂತಹ ಸಂದರ್ಭಗಳು ಇನ್ನೂ ಸ್ವಲ್ಪ ಬಲವಾದರೆ ವಾಸವದತ್ತೆಗೇ ತಾನು ಬದುಕಿದ್ದೇನೆಯೋ ಇಲ್ಲವೋ ಎಂಬ ಸಂದೇಹ ಉಂಟಾಗುವ ಸಂಭವ; ಹೀಗಿರುವಲ್ಲಿ ವತ್ಸರಾಜನಿಗೆ ಭ್ರಾಂತಿಯುಂಟಾಗುವುದೇನಾಶ್ಚರ್ಯ?

ಇದಲ್ಲದೆ ಈ ನಾಟಕದಲ್ಲಿ ಕೆಲವು ಭವಿಷ್ಯಾರ್ಥಸೂಚನೆಗಳೂ, ಅನ್ಯಾರ್ಥಸೂಚನೆಗಳೂ ಬರುತ್ತವೆ; ಇವೂ ಚಮತ್ಕಾರದ್ಯೋತಕಗಳು, ರಸಪೋಷಕಗಳು. ಉದಾಹರಣೆಗಾಗಿ–ಬ್ರಹ್ಮಚಾರಿಯು ''ವಾಸವದತ್ತೆಯು ಬೆಂದು ಸತ್ತುಹೋದರೂ ಬೆಂದವಳಲ್ಲ'' ಎನ್ನುವನು; ಅವನ ಅರ್ಥವೇ ಬೇರೆ, ಆದರೂ ವಾಸವದತ್ತೆ ಬದುಕಿರುವಳೆಂದು ತಿಳಿದ ಪಾಠಕ ಪ್ರೇಕ್ಷಕರಿಗೆ ಬೇರೆ ಅರ್ಥವಾಗಿ ಸ್ವಲ್ಪ ಹರ್ಷವಾಗುತ್ತದೆ. ತಾಪಸಿಯು ಹಾಗೇ, ಪದ್ಮಾವತಿಗೆ ಅನುರೂಪವಾದ ಪತಿ ಬರಲೆಂದೂ, ವಾಸವದತ್ತೆಗೆ ಶೀಘ್ರದಲ್ಲಿಯೇ ಅವಳ ಪತಿಯೊಡನೆ ಸಮಾಗಮವುಂಟಾಗಲಿ ಎಂದೂ ಹರಸುವಳು! ಇದರಿಂದ ಮುಂದೆ ಬಿಡುವ ಹಣ್ಣು ಇನ್ನೂ ಮೊಳಕೆಯಲ್ಲಿಯೇ ತೋರುವಂತೆ, ನಾಟಕದ ಕೊನೆಯಲ್ಲಿ ಆಗುವುದು ಆದರ ಮೊದಲಲ್ಲಿಯೇ ಸೂಚಿತವಾಗು

ವುದು. ಇದರಂತೆ ಮೇಲೆ ಹೇಳಿದ ಕಂಚುಕಿಯ ಆಕಾಂಕ್ಷಿತ ಮತ್ತು ಭಾವನೆಗಳು, ರಾಜನ ಚಿತ್ರ ವಿಮರ್ಶೆ, ಇತ್ಯಾದಿ.

ನಾಟಕದಲ್ಲಿ ಸಂವಿಧಾನ ಕೌಶಲದಿಂದ ಒಳ್ಳೆಯ ಸನ್ನಿವೇಶಗಳನ್ನು ಕಲ್ಪಿಸಿ, ಅವುಗಳಲ್ಲಿ ಪಾತ್ರಗಳ ನಡೆನುಡಿಗಳ ಮೂಲಕ ರಸೋತ್ಪಾದನೆ ಮಾಡಿ ಪಾಠಕ ಪ್ರೇಕ್ಷಕರನ್ನು ಆನಂದಗೊಳಿಸುವುದು ನಾಟಕ ಕರ್ತನ ಕರ್ತವ್ಯ. ಈ ಕಾರ್ಯವನ್ನು ಕವಿಯು ಸ್ವಪ್ನವಾಸವದತ್ತದಲ್ಲಿ ಹೇಗೆ ಮಾಡಿದ್ದಾನೆಂದು ಮೇಲೆ ವಿಸ್ತಾರವಾಗಿ ತೋರಿಸಿದ್ದಾಯಿತು. ಗುಲಾಬಿ ಗಿಡವು ಕುಳ್ಳಾಗಿದ್ದರೂ ಅದನ್ನು ಕತ್ತರಿಸಿ ಕಸಿಮಾಡಿ ಮೈತುಂಬ ಹೂಬಿಡಿಸುವ ಸಮರ್ಥನಾದ ತೋಟಗಾರನಂತೆ, ನಾಟಕವು ಚಿಕ್ಕದಾಗಿದ್ದರೂ ಕವಿಯು ಅದರಲ್ಲಿ ಅನೇಕ ರಸಸ್ಥಾನಗಳನ್ನು ಕಲ್ಪಿಸಿ ಆನಂದಗೊಳಿಸಿದ್ದಾನೆ. ರಸಪೋಷಕವಲ್ಲದ ಘಟನೆಗಳನ್ನಾಗಲಿ, ಪಾತ್ರಗಳನ್ನಾಗಲಿ ತಂದು ತುರುಕಿಲ್ಲ; ಕೊನೆಗೆ ಪದ್ಮಾವತಿಯ ತಾಯಿತಂದೆಗಳು ಯಾರೋ ಅವರ ಹೆಸರೂ ಇಲ್ಲ; ಅಣ್ಣ ದರ್ಶಕನೆಂದು ಮಾತ್ರ ಹೇಳಿದೆ; ಅವನೂ ರಂಗಕ್ಕೆ ಬರುವುದಿಲ್ಲ. ತಾಪಸಿ, ಬ್ರಹ್ಮಚಾರಿ, ಕಂಚುಕಿ, ಚೇಟಿ ಮುಂತಾದವರ ಹೆಸರನ್ನೂ ಹೇಳಿಲ್ಲ; ಆದ್ದರಿಂದ ಅವರು ಮಾಡಿದ ಕೆಲಸ ಜ್ಞಾಪಕದಲ್ಲಿ ನಿಲ್ಲುತ್ತದೆಯೇ ಹೊರತು ಅವರ ವ್ಯಕ್ತಿಯು ಮನಸ್ಸಿನಲ್ಲಿ ನಿಲ್ಲುವುದಿಲ್ಲ. ಪದ್ಯಾಧಿಕ್ಯದಿಂದ ಆಟವು ಕುಂಟುವಂತಿಲ್ಲ. ಈ ನಾಟಕಕ್ಕೆ ಇರುವುದೆಲ್ಲಾ ೫೭ ಪದ್ಯಗಳು. ಇಷ್ಟು ಸಂಗ್ರಹವಾಗಿ ರಸೈಕದೃಷ್ಟಿಯಿಂದ ನಾಟಕವನ್ನು ಗ್ರಥಿಸಿರುವುದರಿಂದ ವಿಸ್ತಾರವಾದ ಚಂಪೂಕಾವ್ಯ ಮುಂತಾದ ಗ್ರಂಥಗಳಲ್ಲಿ ಕಂಡುಬರಬಹುದಾದ ವರ್ಣನಾ ವೈಖರಿಗಳಿಗೂ, ಅಲಂಕಾರ ವೈಚಿತ್ರ್ಯಗಳಿಗೂ ಘನೋಪದೇಶಗಳಿಗೂ ಇದರಲ್ಲಿ ಅವಕಾಶವಿಲ್ಲ. ಆದರೆ ಅವು ಶುದ್ಧಾಂಗವಾಗಿ ಇಲ್ಲದಿಲ್ಲ; ಋಷ್ಯಾಶ್ರಮ (ಪು. ೯), ಸಾಯಂಕಾಲ (೧೬), ಶಯ್ಯಾಗೃಹ (೪೩), ವಾಸವದತ್ತೆ (೪೪) ಮುಂತಾದ ವರ್ಣನೆಗಳು ಮಿತವಾಗಿ ಎಷ್ಟೋ ಚೆನ್ನಾಗಿವೆ. ಭಾಗ್ಯಪಂಕ್ತಿಯನ್ನು ಚಕ್ರಾರಪಂಕ್ತಿಗೂ, ರಾಜನು ಬಿಟ್ಟುಹೋದ ಲಾವಾಣಕ ಗ್ರಾಮವನ್ನು ಚಂದ್ರನಕ್ಷತ್ರಗಳೊಂದೂ ಇಲ್ಲದ ಆಕಾಶಕ್ಕೂ, ಚಿಂತಿಸುತ್ತಿರುವ ಅವಂತಿಸುಂದರಿಯನ್ನು ಮಂಜುಮುಚ್ಚಿದ ಚಂದ್ರಲೇಖೆಗೂ

ಅಜೀರ್ಣದಿಂದ ನರಳುತ್ತಿರುವ ವಿದೂಷಕನ ಹೊಟ್ಟೆದೊಳಸನ್ನು ಕೋಗಿಲೆಯ ಕಣ್ಣೊಳಸಿಗೂ, ಸಾಯುವವರನ್ನು ಹಗ್ಗ ಕಿತ್ತುಹೋದ ಘಟಕ್ಕೂ ಹೋಲಿಸಿರುವ ಉಪಮಾನಗಳು ಸುಂದರವಾಗಿವೆ.

ಈ ನಾಟಕದಲ್ಲಿರುವುದು ಶೃಂಗಾರರಸ, ಆದರೆ ನಾಟಕದಲ್ಲಿ ಇಂತಹ ಶೃಂಗಾರರಸ ಅಪರೂಪ; ಇದು ಗಂಡಿನ ಕಡೆಯಾಗಲಿ ಹೆಣ್ಣಿನ ಕಡೆಯಾಗಲಿ ಕಾಮಪೀಡಿತದ್ದಲ್ಲ, ಮಾತ್ಸರ್ಯಕಲುಷಿತವಲ್ಲ. ವಿಷಯದೂಷಿತವಲ್ಲ. ವತ್ಸರಾಜನು "ಪಂಚೇಷುಗಾರಂಬುಗಳು" ಬಂದುವೆಂದು ಅರಚಿಕೊಂಡರೂ, ಅವನಿಗೆ ಪದ್ಮಾವತಿಯ ಮೇಲೆ ಸುಂದರಿಯಾದ ಚಿಕ್ಕ ಪುಟ್ಟ ಎರಡನೆಯ ಹೆಂಡತಿಯೆಂದು ಅಂಥಪ್ರಣಯವಿಲ್ಲ; ವಾಸವದತ್ತೆಯ ಮೇಲೆ ಅವಳು ಸತ್ತಳೆಂದು ತಿಳಿದರೂ ಮರೆಯದ ಗಾಢವಾದ ಪ್ರೇಮ. ವಾಸವದತ್ತೆಗೂ ವತ್ಸರಾಜನ ಮೇಲೆ ಅದೇ ವಿಧವಾದ ಪ್ರೇಮ. ಪದ್ಮಾವತಿಯಲ್ಲಿ ಅವಳೂ, ಅವಳಲ್ಲಿ ಪದ್ಮಾವತಿಯೂ ಹೇಗೆ ವರ್ತಿಸುತ್ತಿದ್ದರೆಂಬುದನ್ನು ಮೇಲೆ ವಿವರಿಸಿದೆ; ಇಬ್ಬರು ಹೆಂಗಸರು ಸೇರಿದರೆ, ಅವರು ಅಕ್ಕತಂಗಿಯರಾಗಲಿ, ತಾಯಿಮಕ್ಕಳಾಗಲಿ, ಸಣ್ಣಸಣ್ಣದಕ್ಕೆಲ್ಲಾ ಕಚ್ಚಾಡುವುದು ಸಾಧಾರಣವಾದದ್ದು. ಹೀಗಿರುವಾಗ, ತನ್ನ ಮೋಹದ ಗಂಡನನ್ನೇ ಕೊಟ್ಟುಬಿಡುವ ವಿಷಯದಲ್ಲಿ ವಾಸವದತ್ತೆಯು ಇಷ್ಟು ಸಂತೋಷವಾಗಿದ್ದು ಪದ್ಮಾವತಿಯನ್ನು ತಂಗಿಗಿಂತಲೂ, ಮಗಳಿಗಿಂತಲೂ ಹೆಚ್ಚಾಗಿ ನೋಡಿಕೊಳ್ಳುತ್ತಿರುವುದು ಅವರ ಪುಣ್ಯ; ಅವರ ಪುಣ್ಯಕ್ಕಿಂತಲೂ ಹೆಚ್ಚಾಗಿ ವತ್ಸರಾಜನ ಭಾಗ್ಯೋದಯ!

ಭಾಸನ ಕಾವ್ಯದಲ್ಲಿ ಕಂಡುಬರುವ ಈ ಮಧುಮಧುರವಾದ ಪರಿಶುದ್ಧವಾದ ಶೃಂಗಾರರಸವು ಕಾಳಿದಾಸ ಶ್ರೀಹರ್ಷರ ಕಾಲಕ್ಕೆ ಕ್ರಮೇಣ ಹುಳಿಹಿಡಿದು, ನೊರೆ ಬಂದು ವಾಸನೆಯಿಟ್ಟುಕೊಳ್ಳುತ್ತದೆ. 'ಶಾಕುಂತಲ' 'ರತ್ನಾವಳಿ'ಗಳ ಮಾತಿರಲಿ; ವೈರಾಗ್ಯಪ್ರಧಾನವಾದ 'ನಾಗಾನಂದ', ದಲ್ಲಿ ಕಂಡುಬರುವ ಶೃಂಗಾರಶ್ಲೋಕಗಳಂಥವು (III ೪, III ೬, ಇತ್ಯಾದಿ- ಅವುಗಳನ್ನು ಉದ್ಧಾರಮಾಡುವುದಕ್ಕೇ ಸಂಕೋಚವಾಗುತ್ತದೆ.) ಸ್ವಪ್ನವಾಸವದತ್ತದಲ್ಲಿ ಹುಡುಕಿದರೂ ಸಿಕ್ಕುವುದಿಲ್ಲ. ವತ್ಸರಾಜನ ಗೋಳಾಟದಲ್ಲಿ

ಕರುಣರಸ ಹುಟ್ಟುವುದಿಲ್ಲ. ಹತ್ತಿರದಲ್ಲಿಯೇ ಹೆಂಡಿತಿ ಇರುವುದರಿಂದಲೂ ಅವರು ಜಾಗ್ರತೆಯಾಗಿಯೇ ಸೇರುವರೆಂಬ ಧೈರ್ಯವಿರುವುದರಿಂದಲೂ ಅದು ಪ್ರೇಕ್ಷಕರಲ್ಲಿ ಅಷ್ಟು ಮರುಕವನ್ನುಂಟುಮಾಡುವುದಿಲ್ಲ. ಇನ್ನು ವಾಸವದತ್ತೆಯ ಸ್ಥಿತಿಯನ್ನು ನೋಡಿದರೆ "ಅಯ್ಯೋ ಪಾಪ!" ಎನ್ನಿಸುತ್ತದೆ. ವಿದೂಷಕನು ಅಲ್ಲಲ್ಲಿ ಸ್ವಲ್ಪ ಹಾಸ್ಯವನ್ನು ತರುತ್ತಾನೆ. ಇವನು ಭಾಸನ ಕಾಲಕ್ಕೆ ಆಗಲೇ ಸಂಸ್ಕೃತ ನಾಟಕದಲ್ಲಿ ಮನೆಮಾಡಿಕೊಂಡು ಬೇರೂರಿ ಹಳಬನಾಗಿರುವಂತೆ ತೋರುತ್ತದೆ; ಈಚಿನ ನಾಟಕಗಳಲ್ಲಿ ಬರುವ ಅವನ ಜ್ಞಾತಿಗಳಂತೆ ಅವನಲ್ಲಿಯೂ ಹೊಟ್ಟೆಬಾಕತನ, ದಡ್ಡತನ, ಹೇಡಿತನಗಳು ಕಂಡುಬರುತ್ತವೆ. ಆದರೆ ಈ ಗುಣಗಳಲ್ಲಿ ಸ್ವಲ್ಪ ನವೀನತೆಯಿದೆ.

ಈ ನಾಟಕದ ಕಥೆಯಾಗಲಿ, ರಸವಾಗಲಿ ಅಸಂಭಾವ್ಯವಾದ ಘಟನೆಗಳಿಂದಲೂ, ಆರ್ಭಟದ ವೃತ್ತಾಂತಗಳಿಂದಲೂ ಪೋಷಿತವಾಗಿ ಕಾಮನ ಹಬ್ಬದ ಕಿಚ್ಚಿನಂತೆ ಬೊಬ್ಬೆಯನ್ನೆಬ್ಬಿಸುವಂತಿಲ್ಲ. ಇರುವುವೆಲ್ಲಾ ಲಲಿತವಾದ ಮೃದುವಾದ ಸನ್ನಿವೇಶಗಳು; ಏನೆಂದರೆ, ಯಾರಿಗೆ ಮನಸ್ಸು ನೊಂದೀತೋ ಎಂಬಂತಹ ಸಾಧುಪ್ರಾಣಿಗಳು!

"ಸಾಯಂಕಾಲೇ ವನಾಂತೇ ಕುಸುಮಿತಸಮಯೇ ಸೈಕತೇ ಚಂದ್ರಿಕಾಯಾಂ" ಸುಳಿದಾಡುವುದಕ್ಕೆ ಅರ್ಹವಾದುವುಗಳು!

|| ಶ್ರೀಃ ||

ಕ ರ್ಣಾ ಟ ಕ

ಸ್ವಪ್ನವಾಸವದತ್ತ ನಾಟಕಂ

(ನಾಂದ್ಯಂತದಲ್ಲಿ ಸೂತ್ರಧಾರನು ಪ್ರವೇಶಿಸುವನು)

ಸೂತ್ರಧಾರ—

ಬಲಭದ್ರಬಾಹುದಂಡಯು |
ಗಳ ಮುದಯುನವೇಂದುವರ್ಣ ವಾಸವದತ್ತಾ ||
ಬಲಮದು ವಸಂತಕಮ್ರಂ
ಸಲಹುಗೆ! ಪದ್ಮಾವತೀರ್ಣಪೂರ್ಣಂ ಸಿಮ್ಮಂ* || ೧ ||

ಆರ್ಯಮಿಶ್ರರಲ್ಲಿ ಇದೊಂದು ವಿಜ್ಞಾಪನೆ— ಓಹೋ ! ಏನಿದು ? ನಾನು ವಿಜ್ಞಾಪಿಸಿಸುತ್ತಿರುವಷ್ಟರಲ್ಲಿ ಅತ್ತಲಾಗಿ ಏನೋ ಕೂ ಗಾ ಟ ವು ಕೇಳಿಸುತ್ತಿರುವುದು ! ಒಳ್ಳೆಯದಿರಲಿ ! ನೋಡುವೆನು.

ತೆರೆಯಲ್ಲಿ—ದಾರಿ ! ಅಯ್ಯಾ ಅತ್ತ ಸರಿಯಿರಿ !

ಸೂತ್ರ—ಓಹೋ ! ತಿಳಿಯಿತು !

ಜನಪತಿ ಮಗಧೇಂದ್ರನ ನ |
ಚ್ಚಿನ ಭೃತ್ಯರ್ ಕೆಲಬರೊರ್ವಕನ್ಯೆಯನೊಡಗೊಂ ||
ಡನುಗಮಿಸುತೀತಪೋವನ |
ಜನಮಂ ಕಠಿನಾಜ್ಞೆಯಿಂದೆ ಕೆಲಕೊತ್ತರಿಪರ್ || ೨ ||

[ಹೋಗುವನು]

ಇದು

ಸ್ಥಾ ಪ ನೆ.

---

* ಭಾಸಮಹಾಕವಿಯು ನಾಂದೀಶ್ಲೋಕದಲ್ಲಿ ಕಾವ್ಯಾರ್ಥಸೂಚನೆಗಾಗಿ, ಈ ನಾಟಕದಲ್ಲಿ ಮುಖ್ಯಪಾತ್ರಗಳಾದ ಉದಯನ, ವಾಸವದತ್ತೆ, ವಸಂತಕ, ಪದ್ಮಾವತಿಯರ

(ಇಬ್ಬರು ರಾಜಭಟರು ಪ್ರವೇಶಿಸುವರು)

ಭಟರು—ಅತ್ತ ಸರಿಯಿರಿ ! ಅತ್ತ ಸರಿಯಿರಿ ! ಪೂಜ್ಯರೆ, ಅತ್ತ ಸರಿಯಿರಿ ;

(ಪರಿವ್ರಾಜಕ ವೇಷದಿಂದ ಯೌಗಂಧರಾಯಣನೂ, ಆವಂತಿಕನ್ಯಾವೇಷದಿಂದ ವಾಸವದತ್ತೆಯೂ ಪ್ರವೇಶಿಸುವರು)

ಯೌಗಂಧ—(ಕಿವಿಗೊಟ್ಟು ಕೇಳಿ) ಏನಿದು ? ಇಲ್ಲಿಯೂ ನಿರ್ಬಂಧವೇ ?

ನಾರುಡೆಯುಟ್ಟು ವನ್ಯಫಲಮೂಲದೆ ತೃಪ್ತಿಯನಾಂತ ಮಾನ್ಯರಂ |
ಧೀರರನಾಶ್ರಮಸ್ಥಿತರನಂಜಿಸನಾವನೊ ! ನಿಷ್ಠುರಾಜ್ಞೆಯಿಂ ||
ಮೀರಿದ ದುರ್ಮದೋದ್ಧತನವಂ ಚಲಭಾಗ್ಯದೆ ಬೀಗಿ ತನ್ನ ಹಂ |
ಕಾರದೆ ಪಾವನಾಶ್ರಮಮಿದಂ ಪೊಲೆಪಳ್ಳಿಗೆ ಸಾಟಿಗೆಯ್ವನೇಂ || ೩ ||

ವಾಸವದತ್ತೆ—ಆರ್ಯನೆ ! ಹೀಗೆ ಇಲ್ಲಿಯ ಜನರನ್ನು ಒತ್ತರಿಸುತ್ತ ಬರುವವನು ಯಾರಿವನು ?

ಯೌಗಂಧ—ಪೂಜ್ಯಳೆ ! ಯಾವನು ಧರ್ಮವನ್ನು ಒತ್ತರಿಸಬೇಕೆಂದು ಬಯಸುವನೋ ಅಂತವನಲ್ಲದೆ ಬೇರೆ ಯಾರು ?

ವಾಸವದತ್ತೆ—ಆರ್ಯನೆ ! ನಾನು ಆ ವಿಚಾರವನ್ನು ಹೇಳುವುದಕ್ಕೆ ಬಂದವಳಲ್ಲ. ಆದರೆ ನಾನೂ ಹೀಗೆ ರಾಜಭಟರ ಕೈಯಿಂಧ ನೂಕಿಸಿಕೊಳ್ಳಬೇಕಾದ ಸ್ಥಿತಿಗೆ ಬಂದೆನಲ್ಲವೆ ?

ನಾಮನಿರ್ದೇಶವಾಗುವಂತೆ ಪದಯೋಜನೆಯನ್ನು ಮಾಡಿ ಮೇಲಣ ಶ್ಲೋಕವನ್ನು ರಚಿಸಿರುವುದರಿಂದ, ಕನ್ನಡದಲ್ಲಿಯೂ ಅದೇ ಸಮಾಸಪದಗಳನ್ನಲ್ಲದೆ ಬೇರೆ ಉಪಯೋಗಿಸಲು ಸಾಧ್ಯವಿಲ್ಲ. ಮೂಲಶ್ಲೋಕದಲ್ಲಿರುವ ವಿಶೇಷಣಗಳಿಗೂ ಬಹು ಕ್ಲಿಷ್ಟಕಲ್ಪನೆಯಿಂದಲೇ ಅರ್ಥವನ್ನು ಗ್ರಹಿಸಬೇಕಾಗಿದೆ. ಉದಯಿಸುವ ಚಂದ್ರನಂತೆ ಕಾಂತಿಯುಕ್ತವಾಗಿ, (ನವೇಂದುವರ್ಣಂ+ಆಸವದತ್ತಾಬಲಂ=ನವೇಂದು ವರ್ಣವಾಸವದತ್ತಾಬಲಂ), ಮದ್ಯಪಾನದಿಂದುಂಟಾದ ದುರ್ಬಲತೆಯುಳ್ಳುದಾಗಿ (ಅಥವಾ ಅಬಲೆಯರಿಗೆ ಮದ್ಯವನ್ನು ಕೊಡತಕ್ಕುದಾಗಿ), ವಸಂತಸಮಯಲ್ಲಿ ಮನೋಜ್ಞವಾಗಿ, ಪದ್ಮೆಯ [ಲಕ್ಷ್ಮಿಯ] ಅವತಾರದಿಂದ ಪೂರ್ಣವಾಗಿರುವ (ಅಥವಾ – ಕಾಂತಿಪೂರ್ಣವಾದ) ಬಲರಾಮನ ತೋಳುಗಳು ನಿಮ್ಮನ್ನು ಕಾಪಾಡಲಿ—ಎಂದರ್ಥವು.

ಯೌಗಂಧ—ಪೂಜ್ಯಳೆ, ನಿಜಸ್ಥಿತಿಯನ್ನು ಮರೆಸಿಕೊಂಡಿದ್ದಾಗ ದೇವತೆಗಳಿಗಾದರೂ ಇಂತಹ ತಿರಸ್ಕಾರಗಳು ತಪ್ಪಿದುವಲ್ಲ.

ವಾಸವದತ್ತೆ—ಈ ಪರಾಭವದಿಂದ ಈಗ ನನಗುಂಟಾದಷ್ಟು ಖೇದವು, ಇಷ್ಟು ದೂರ ದಾರಿನಡೆದ ಮಾರ್ಗಾಯಾಸದಿಂದಲೂ ತೋರಲಿಲ್ಲ.

ಯೌಗಂಧ—ಇವೆಲ್ಲಾ ನೀನೂ ಮೊದಲು ಅನುಭವಿಸಿ ಬಿಟ್ಟ ವೈಭವಗಳೇ ಅಲ್ಲವೆ ! ಅದಕ್ಕಾಗಿ ಚಿಂತಿಸಬಾರದು. ಏಕೆಂದರೆ—

ನೀನೆಳಸಿದಂತೆ ನಡೆದುದು |
ಮಾನಿನಿ ! ಮುನ್ನ ನಿನಗೆ ! ಮಗುಳೆ ಪತಿ ಜಯಮೊಂದಲ್ ||
ನೀನದನೆ ಪಡೆವೆ ! ಭಾಗ್ಯವಿ |
ತಾನಂ ಚಕ್ರಾರಪಙ್ಕ್ತಿಯಂತಿರೆ ಪೊರಳ್ಗುಂ || ೪ ||

ಭಟರು—ಅತ್ತ ಸರಿಯಿರಿ ! ಪೂಜ್ಯರೆ, ಅತ್ತ ಸರಿಯಿರಿ !

[ಕಾಂಚುಕೀಯನು (ಕಂಚುಕಿಯೊಬ್ಬನು) ಪ್ರವೇಶಿಸುವನು]

ಕಂಚುಕಿ—ಸಂಭಷಕ ! ಬೇಡ ಬೇಡ ! ಇಷ್ಟು ಕಠಿನವಾಗಿ ಇಲ್ಲಿಯ ಜನರನ್ನು ನಿರ್ಬಂಧಿಸಿ ಹೊರಡಿಸಬಾರದು.

ಅರಸಂ ಪಳಿಗೀಡಾಗದ |
ತೆರದಿಂ ನಡೆವುದು ! ಕಟೂಕ್ತಿ ತಗದೀಯೆಡೆಯೊಳ್ ||
ಪುರಪರಿಭವಕಂಜಿಯೆ ತಾ |
ನರಣ್ಯದೊಳ್ ವಸಿಪುದೀ ತಪಸ್ವಿಜನೌಘಂ || ೫ ||

ಭಟರು—ಸರಿ ! ನಿನ್ನಿಷ್ಟದಂತಾಗಲಿ ! (ಹೋಗುವರು)

ಯೌಗಂಧ—ಆಹಾ ! ಇವನು ಒಳ್ಳೆಯ ವಿವೇಕದೃಷ್ಟಿಯುಳ್ಳವನಂತೆ ತೋರುವುದು. ವತ್ಸೆ ! ಅವನ ಸಮಿಾಪಕ್ಕೆ ಹೋಗುವೆವು ಬಾ.

ವಾಸವದತ್ತೆ—ಹಾಗೆಯೇ ಆಗಲಿ,

ಯೌಗಂಧ—(ಮುಂದೆ ಹೋಗಿ) ಅಯ್ಯಾ! ಇಲ್ಲಿಯ ಜನರನ್ನು ಚದುರಿಸುತ್ತಿರುವ ಕಾರಣವೇನು ?

ಕಂಚುಕಿ—ಎಲೈ ತಪಸ್ವಿಯೆ, ಕೇಳು.

ಯೌಗಂಧ—(ತನ್ನಲ್ಲಿ) 'ತಪಸ್ವಿ'ಯೆಂದು ಕರೆಯಿಸಿಕೊಳ್ಳುವುದೇನೋ ನನಗೆ ಬಹಳ ಸಮ್ಮತವೇ! ಆದರೆ ಹಾಗೆ ಕರೆಯಿಸಿಕೊಂಡು ಬಳಕೆಯಿಲ್ಲವಾದುದರಿಂದ, ಆ ಶಬ್ದವು ಮನಸ್ಸಿಗೆ ಥಟ್ಟನೆ ಹಿಡಿಯುವ ಹಾಗಿಲ್ಲ.

ಕಂಚುಕಿ—ಅಯ್ಯಾ, ಕೇಳು! ಈಕೆ ನಮ್ಮ ಮಹಾರಾಜ ದರ್ಶಕನ ತಂಗಿ. ಇವಳ ಹೆಸರು ಪದ್ಮಾವತಿ. ಈಕೆ ಈ ಆಶ್ರಮದಲ್ಲಿ ವಸಿಸುತ್ತಿರುವ ತನ್ನ ತಾಯಿಯಾದ ಮಹಾದೇವಿಯನ್ನು ನೋಡಿಹೋಗುವುದಕ್ಕಾಗಿ ಬಂದಿದ್ದಳು. ಅವಳನ್ನು ಸಂದರ್ಶಿಸಿ ಅವಳ ಅನುಮತಿಯನ್ನು ಪಡೆದು ಈಗ ತನ್ನ ರಮನೆಗೆಹೊರಟಿರುವಳು. ಆದರೆ ತಾಯಿಯು ಈದಿನ ರಾತ್ರಿ ಈ ಆಶ್ರಮದಲ್ಲಿಯೇ ಇದ್ದು ಹೋಗಬೇಕೆಂದು ಬಯಸುವಳು. ಇವಳು ಇಲ್ಲಿರುವುದರಿಂದ ಈ ಆಶ್ರಮವಾಸಿಗಳಲ್ಲಿ ಯಾರಿಗೇನೂ ಅಡ್ಡಿಯಿಲ್ಲ.

ಮುನಿಗಳ್ ಯಥೇಷ್ಟಮಿಾಕಾ |
ನನದಿಂ ಕೊಂಡುಯ್ಗೆ ತೀರ್ಥಜಲಕುಸುಮಕುಶೇಂ ||
ಧನಮುನಿವಳ್ ಧರ್ಮಪ್ರಿಯೆ! |
ಮುನಿಪೀಡೆಗೆ ಮೆಚ್ಚಳೀಕೆಗಿದೆ ಕುಲಧರ್ಮಂ || ೬ ||

ಯೌಗಂಧ—(ಸ್ವಗತಂ) ಓಹೋ! ಇವಳೇ ಮಗಧರಾಜಪುತ್ರಿಯಾದ ಪದ್ಮಾವತಿಯೆಂಬುವಳೋ? ನಮ್ಮ ಮಹಾರಾಜನಿಗೆ ಮುಂದೆ ಅರಸಿಯಾಗುವಳೆಂದು ಪುಷ್ಪಕ, ಭದ್ರ ಮೊದಲಾದ ದೈವಜ್ಞರು ಹೇಳಿದ್ದುದು ಇವಳನ್ನೇ ಅಲ್ಲವೇ? ಆದುದರಿಂದ ಆಲೋಚಿಸಿದಲ್ಲಿ

ಅನುರಾಗದ್ವೇಷಂಗಳ್ |
ಜನಿಕುಂ ಸಂಕಲ್ಪಮಾತ್ರದಿಂ, ಮತ್ರಭುಗೀ ||
ವನಿತೆಯನರಸಿಯನಾಗಿಪ |
ಮನಮಿಾಕೆಯೊಳೆನಗೆ ಮಮತೆಯಂ ಪುಟ್ಟಿಸುಗುಂ || ೭ ||

ವಾಸವದತ್ತೆ—(ಸ್ವಗತಂ) ಇವಳು ರಾಜಕುಮಾರಿಯೆಂಬುದನ್ನು ಕೇಳಿ ನನಗೆ ಇವಳಲ್ಲಿ ಸೋದರೀಸ್ನೇಹವುಂಟಾಗುತ್ತಿರುವುದು.

(ಪರಿವಾರಸಹಿತಳಾದ ಪದ್ಮಾವತಿಯೂ, ಅವಳ ಚೇಟಿಯೂ ಪ್ರವೇಶಿಸುವರು)

ಚೇಟಿ—ಬಾ, ರಾಜಪುತ್ರೀ ! ಬಾ ! ಈ ಆಶ್ರಮವನ್ನು ಪ್ರವೇಶಿಸು.

(ಅನಂತರ ಕುಳಿತಿರುವಹಾಗೆಯೇ ತಾಪಸಿಯು ಪ್ರವೇಶಿಸುವಳು)

ತಾಪಸಿ—ರಾಜಪುತ್ರಿಗೆ ಸ್ವಾಗತವು.

ವಾಸವದತ್ತೆ—(ಸ್ವಗತಂ) ಇವಳೇ ಆ ರಾಜಕುಮಾರಿಯೇನು ? ಇವಳ ರೂಪವೂ ಕುಲೋನ್ನತಿಗೆ ತಕ್ಕಂತೆಯೇ ಇರುವುದು.

ಪದ್ಮಾ—ಪೂಜ್ಯಳೆ ! ವಂದಿಸುವೆನು.

ತಾಪಸಿ—ಚಿರಂಜೀವಿನಿಯಾಗು ! ಕುಮಾರೀ ! ಬಾ ! ಸಂಕೋಚವೇಕೆ ? ತಪೋವನವೆಂಬುದು ಅತಿಥಿಗಳಿಗೆ ಸ್ವಗೃಹದಂತೆಯೇ ಹೊರತು ಬೇರೆಯಲ್ಲ.

ಪದ್ಮಾ—ಅದಕ್ಕೆ ಅಡ್ಡಿಯೇನು ? ಈ ನಿನ್ನ ಪ್ರಿಯವಚನಗಳಿಂದಲೇ ನಾನು ಅನುಗೃಹೀತಳಾದೆನು.

ವಾಸವದತ್ತೆ—(ಸ್ವಗತಂ) ಇವಳ ರೂಪವು ಮಾತ್ರವೇ ಅಲ್ಲ ! ಈಕೆಯ ನುಡಿಯೂ ಅತ್ಯಂತ ಮಧುರವಾಗಿದೆ.

ತಾಪಸಿ—(ಚೇಟಿಯೊಡನೆ) ಭದ್ರೆ ! ಸೌಮ್ಯರೂಪನಾದ ನಮ್ಮ ಮಹಾರಾಜನಿಗೆ ಒಡಹುಟ್ಟಿದ ಈಕೆಯನ್ನು ವರಿಸಲು, ಇದುವರೆಗೆ ಅನುರೂಪನಾದ ರಾಜಕುಮಾರನೊಬ್ಬನೂ ಬರಲಿಲ್ಲವೇನು ?

ಚೇಟಿ—ಉಜ್ಜಯಿನೀಪತಿಯಾದ ಪ್ರದ್ಯೋತನನೆಂಬ ರಾಜನುಂಟು. ಅವನು ತನ್ನ ಮಗನಿಗಾಗಿ ದೂತರ ಮುಖದಿಂದ ಹೇಳಿಕಳುಹಿಸುತ್ತಿರುವನು.

ವಾಸವದತ್ತೆ—(ಸ್ವಗತಂ) ಓಹೋ ! ಹಾಗಿದ್ದರೆ ಈಗ ಅವಳು ನಮ್ಮವಳೇ ಆದಳು.

ತಾಪಸಿ—ಭದ್ರೆ ! ಅಂತಹ ಗೌರವಕ್ಕೆ ತಕ್ಕ ಆಕೃತಿಯೇ ಇದು ! ಅವೆರಡೂ ಪ್ರಸಿದ್ಧವಾದ ರಾಜವಂಶಗಳೆಂದು ಕೇಳಿದುದುಂಟು.

ಪದ್ಮಾ—(ಕಂಚುಕಿಯೊಡನೆ) ಆರ್ಯನೆ ! ಇಲ್ಲಿ ನಮ್ಮನ್ನು ಅನುಗ್ರಹಿಸುವುದಕ್ಕಾಗಿ ನಮ್ಮಿಂದೇನಾದರೂ ಸತ್ಕಾರವನ್ನಪೇಕ್ಷಿಸುವರುಂಟೇನು ? ಇಲ್ಲಿಯ ಮುನಿಜನಗಳಲ್ಲಿ ಅವರವರಿಗೆ ಅಭಿಲಷಿತವಾದುದೇನಿದ್ದರೂ ನಮ್ಮಿಂದ ಪಡೆಯಬಹುದೆಂದು ಒಬ್ಬೊಬ್ಬರಿಗೂ ತಿಳಿಸಿ ಬಾ.

ಕಂಚುಕಿ–ಅಮ್ಮಾ ! ನಿನ್ನ ಇಷ್ಟದಂತೆಯೇ ಆಗಲಿ ? (ಆಶ್ರಮದಕಡೆಗೆ ಬಂದು) ಓ ತಪೋವನವಾಸಿಗಳಾದ ಮಹರ್ಷಿಗಳಿರಾ ! ಲಾಲಿಸಿ ಕೇಳಬೆಕು. ಇದೋ ! ಇಲ್ಲಿ ಪೂಜ್ಯಳಾದ ಮಗಧರಾಜಪುತ್ರಿಯು ನಿಮ್ಮ ಪರಿಚಯದಿಂದ, ನಿಮ್ಮಲ್ಲಿ ತನಗೆ ಹುಟ್ಟಿದ ವಿಶ್ವಾಸಕ್ಕಾಗಿ, ನಿಮಗೆ ತನ್ನ ಸತ್ಕಾರಗಳನ್ನು ಸಲ್ಲಿಸಿ, ಅದರಿಂದ ತಾನು ಧರ್ಮಭಾಗಿನಿಯಾಗಬೇಕೆಂದು ಬಯಸುವಳು. ಆದುದರಿಂದ ನಿಮ್ಮಲ್ಲಿ

ಆರಾಗಳ್ಗಂಟಭಿಲಾಷೆ ತೀರ್ಥಘಟದೊಳ್, ವಸ್ತ್ರೇಚ್ಛೆಯಾರಾರ್ಗೆ, ಪು |
ತ್ತ್ರಾರಾನುಂ ಗುರುಗೀಯಲುಂಟೆ ಧನಮಂ ದೀಕ್ಷಾಂತದೊಳ್, ಪೇಳಿವಿಾ ||
ನಾರೀರತ್ನಮುದಾರಶೀಲೆ ! ಭವದೀಯಾನುಗ್ರಹಾಕಾಂಕ್ಷೆಯಿಂ |
ದಾರಾರ್ಗಾವುದಭೀಷ್ಟಮಿತ್ತಪೆನದಂ ತಾನೆಂದು ಪೇಳ್ದಟ್ಟಿದಳ್ || ೮ ||

ಯೌಗಂಧ—(ಕಿವಿಗೊಟ್ಟು ಕೇಳಿ ಸಂತೋಷದಿಂದ–ಸ್ವಗತಂ) ಭಲೆ ! ಇದೊಂದು ಉಪಾಯವು ಸಿಕ್ಕಿತು ! (ಪ್ರಕಾಶಂ) ಅಯ್ಯಾ ! ನನ್ನದೊಂದು ಕೋರಿಕೆಯುಂಟು.

ಪದ್ಮಾ—(ಸಂತೋಷದಿಂದ) ಆಹಾ ! ನಾನು ಈ ತಪೋವನಕ್ಕೆ ಬಂದುದು ಅದೃಷ್ಟವಶದಿಂದ ಈಗ ಸಾರ್ಥಕವಾಯಿತು.

ತಾಪಸಿ—ಆಹಾ ! ಏನಿದು ! ಈ ತಪೋವನವಾಸಿಗಳೆಲ್ಲರೂ ನಿತ್ಯತೃಪ್ತರು, ಯಾವುದನ್ನೂ ಕೋರುವಹಾಗಿಲ್ಲ. ಇವನು ಯಾವನೋ ಆಗಂತುಕನಾಗಿರಬೇಕು.

ಕಂಚುಕಿ—ಅಯ್ಯಾ ! ನಿನಗಾಗಿ ನಾವು ಮಾಡಬೇಕಾದುದೇನು ?

ಯೌಗಂಧ—ಇವಳು ನನ್ನ ತಂಗಿ. ಇವಳ ಪತಿಯು ಇವಳನ್ನು ಬಿಟ್ಟು ದೇಶಾಂತರಕ್ಕೆ ಹೋಗಿರುವನು. ಆದುದರಿಂದ ಕೆಲವು ಕಾಲದವರೆಗೆ ಇವಳನ್ನು ಪೂಜ್ಯಳಾದ ಈಕೆ ತನ್ನ ರಕ್ಷಣೆಯಲ್ಲಿ ಇಟ್ಟುಕೊಂಡು ಕಾಪಾಡುತ್ತಿರಬೇಕೆಂದು ನಾನು ಬಯಸುವೆನು. ಇಷ್ಟೇ ಹೊರತು,

ಧನಕನಕಾಶೆಯಿಲ್ಲೆನಗೆ, ವಸ್ತ್ರದಪೇಕ್ಷೆಯುಮಿಲ್ಲ, ಭೋಗದೊಳ್ |
ಮನಮಿನಿಸಿಲ್ಲ ! ಜೀವನಕೆ ಮಾರ್ಗಮಿದೆಂದುಡಲಿಲ್ಲ ಕಾವಿಯಂ ||
ಘನಗುಣಶೀಲೆ ಧರ್ಮಗತಿಯಂ ನೆರೆ ಬಲ್ಲವಳೀಕುಮಾರಿ ಯೆ |
ನ್ನನುಜೆಯ ಶೀಲಮಂ ಪೊರೆವಳೆಂಬುದಿದೆನ್ನ ಮನೋಭಿಕಾಂಕ್ಷಿತಂ || ೯ ||

ವಾಸವದತ್ತೆ—(ಸ್ವಗತಂ) ಓ ಹೋ ! ಆರ್ಯ ಯೌಗಂಧರಾಯಣನು ನನ್ನನ್ನು ಇವಳ ವಶದಲ್ಲಿಯೇ ಬಿಟ್ಟುಹೋಗುವಂತೆ ತೋರುವುದು. ಇರಲಿ ! ಅವನು ಯಾವ ಕಾರ್ಯವನ್ನೂ ವಿಚಾರವಿಲ್ಲದೆ ಮಾಡತಕ್ಕವನಲ್ಲ.

ಕಂಚುಕಿ—ಪೂಜ್ಯಳೆ, ಈತನ ಪ್ರಾರ್ಥನೆಯೇನೋ ನಮಗೆ ದುಸ್ಸಾಧ್ಯವಾಗಿ ತೋರುವುದು. ಏಕೆಂದರೆ, ನೋಡು !

ಧನವಿತ್ತಾವುದು ಸುಖಮರ್ಥಿಪ |
ಜನಕ್ಕೆ, ತನ್ನಸುವನೀವುದುಂ ಸುಖಮೆ ! ತಪೋ ||
ಧನವಿಾವುದುಂ ಸುಖಂ ! ಮ |
ತ್ತನಿತರೊಳಂ ನ್ಯಾಸರಕ್ಷೆಯೆಂಬುದು ಕಷ್ಟಂ || ೧೦ ||

ಇದಕ್ಕಾಗಿ ಈಗ ನಾವು ಹೇಳಬೇಕಾದ ಪ್ರತ್ಯುತ್ತರವೇನು ?

ಪದ್ಮಾ—ಆರ್ಯನೆ ! ಇದೇನು ಹೀಗೆ ಹೇಳುವೆ ! ಮೊದಲು ನಾವು ಎಲ್ಲರ ಮುಂದೆಯೂ ಘಂಟಾಘೋಷವಾಗಿ ಯಾರಿಗೇನು ಬೇಕಾದರೂ ಕೇಳಬಹುದೆಂದು ಹೇಳಿಬಂದಮೇಲೆ, ಈಗ ಆ ವಿಷಯದಲ್ಲಿ ವಿಚಾರ ಮಾಡುತ್ತಿರುವುದು ಯುಕ್ತವೇ ? ಅವನ ಕೋರಿಕೆಯಂತೆ ನಡೆಯಿಸು.

ಕಂಚುಕಿ—ಅಮ್ಮಾ ! ನಿನ್ನ ಗುಣಕ್ಕೆ ತಕ್ಕ ಮಾತನ್ನೇ ಆಡಿದೆ.

ಚೇಟಿ—ಸತ್ಯಸಂಧಳಾದ ನೀನು ಚಿರಂಜೀವಿನಿಯಾಗಿರಬೇಕು.

ತಾಪಸಿ—ವತ್ಸೆ ! ಬಹುಕಾಲದವರೆಗೆ ಸುಖದಿಂದ ಬಾಳು !

ಕಂಚುಕಿ—ಪೂಜ್ಯಳೆ, ಹಾಗೆಯೇ ಆಗಲಿ. (ಮುಂದೆ ಹೋಗಿ) ಅಯ್ಯಾ, ನಮ್ಮ ರಾಜಕುಮಾರಿಯು ನಿನ್ನ ಇಷ್ಟದಂತೆ ನಿನ್ನ ತಂಗಿಯನ್ನು ತನ್ನಲ್ಲಿಟ್ಟು ಕಾಪಾಡುವುದಕ್ಕೆ ಒಪ್ಪಿರುವಳು.

ಯೌಗಂಧ—ಅನುಗ್ರಹಿಸಲ್ಪಟ್ಟೆನು. ವತ್ಸೆ ! ಆ ಪೂಜ್ಯೆಯ ಬಳಿಗೆ ಹೋಗು.

ವಾಸವದತ್ತೆ—(ಆತ್ಮಗತಂ) ಮಂದಭಾಗ್ಯಳಾದ ನನಗೆ ಹೋಗದಿದ್ದರೆ ಬೇರೆ ಗತಿಯೇನು ?

ಪದ್ಮಾ—ಒಳ್ಳೆಯದು ! ಬಾರಮ್ಮಾ ! ಬಾ ! ಈಗ ನೀನು ನಮ್ಮವಳಾದೆ.

ತಾಪಸಿ—ಇವಳ ಈ ಆಕೃತಿಯನ್ನು ನೋಡಿದರೆ, ಇವಳೂ ಒಬ್ಬ ರಾಜ ಭೋಗಗಳನ್ನು ಅನುಭವಿಸುತ್ತಿದ್ದಳೆಂದೇ ನನಗೂ ತೋರುತ್ತಿದೆ.

ಯೌಗಂಧ—(ಸ್ವಗತಂ) ಆಹಾ ! ಈಗ ಅರ್ಧಭಾರವನ್ನಿಳಿಸಿದಂತಾಯಿತು. ನಾನು ಮೊದಲು ಮಂತ್ರಿಗಳೊಡನೆ ಆಲೋಚಿಸಿಬಂದ ಹಾಗೆಯೇ ಹಿಡಿದ ಕಾರ್ಯಗಳೆಲ್ಲಾ ಸುಲಭವಾಗಿ ಕೈಗೂಡಿ ಬರುತ್ತಿರುವುವು. ನಮ್ಮ ಮಹಾರಾಜನನ್ನು ತಿರಿಗಿ ಅವನ ರಾಜ್ಯದಲ್ಲಿ ಪ್ರತಿಷ್ಠಿತ ನನ್ನಾಗಿ ಮಾಡಿದ ಮೇಲೆ, ಅವನ ಸನ್ನಿಧಾನದಲ್ಲಿರತಕ್ಕ ನನಗೆ ಈ ಮಗಧ ರಾಜಪುತ್ರಿಯು ವಿಶ್ವಾಸಸ್ಥಾನಳಾಗಿ, ನಾನು ಈಗ ಮಾಡಿರುವ ಕೆಲಸಗಳಿಗೆಲ್ಲಾ ರಾಜನ ಮುಂದೆ ಇವಳೇ ಸಾಕ್ಷಿಯಾಗಿರುವಳು. ಏಕೆಂದರೆ,

ಭೂಪಾಲಾಗ್ರಣಿಗುತ್ತಮಾಂಗನೆಯೆನಿಪ್ಪಳ್ ಮುಂದೆ ಸಂದೇಹಮಿ |
ಲ್ಲೀ ಪದ್ಮಾವತಿ ! ಸಿದ್ಧರಿಂ ಮೊದಲೆ ನಾಂ ಕೇಳ್ದಿರ್ದವೋಲ್ ಭೂವರಂ ||
ಗಾಪತ್ತಾಯ್ತುಲೆ ! ನಂಬಿ ನಾನದನೆ ಕಾರ್ಯಂಗೆಯ್ದೆನೀಗಳ್ ! ವಿಧಿ |
ವ್ಯಾಪಾರಂ ಸುವಿಚಾರದಿಂದುಸಿರ್ದ ಸಿದ್ಧಾದೇಶಮಂ ಮೀರ್ಗುಮೇಂ ||೧೧||

(ಬ್ರಹ್ಮಚಾರಿ ಪ್ರವೇಶಿಸುವನು)

ಬ್ರಹ್ಮಚಾರಿ—(ಮೇಲೆ ನೋಡಿ) ಆಗಲೇ ಮಧ್ಯಾಹ್ನವಾಯಿತು. ನನಗೇನೋ ಬಹಳ ಆಯಾಸವು ತೋರುತ್ತಿದೆ. ಎಲ್ಲಿ ವಿಶ್ರಮಿಸಿಕೊಳ್ಳಲಿ ? (ಸುತ್ತಲೂ ನೋಡಿ) ಒಳ್ಳೆಯದು ! ಅದೋ ! ಅಲ್ಲಿ ಅನುಕೂಲವಾದ ಸ್ಥಳವು ಕಾಣಿಸುತ್ತಿರುವುದು. ಸುತ್ತಲೂ ನೋಡಿದರೆ ಇದೊಂದು ತಪೋವನದಂತೆ ತೋರುವುದು. ಏಕೆಂದರೆ,

ನಿರಪಾಯಸ್ಥಳಮೆಂದು ನಂಬಿ ಸುಳಿಗುಂ ನಿರ್ಭೀತಿಯಿಂ ಪುಲ್ಲೆಗಳ್ ।
ತರುಗಳ್ ಪ್ರೇಮವಿವರ್ಧಿತಂಗಳಿವು ಪಣ್ ಪೂಗೊಂಚಲಿಂದೊಪ್ಪುಗುಂ ॥
ಸಿರಿದುಂ ಗೋವ್ರಜಮಿಲ್ಲಿ ನೋಡೆ ಕಪಿಲಂ ! ಸುಕ್ಷೇತ್ರಶೂನ್ಯಂ ವನಾಂ ।
ತರದಿಂ ಸಂಶಯಮೇಕಿದಾಶ್ರಮಮಿದೆ ! ಕಾಣ್ಗುಂ ಹೋಮಧೂಮಾಳಿಯುಂ

ಇರಲಿ ! ಈ ಆಶ್ರಮವನ್ನು ಪ್ರವೇಶಿಸುವೆನು. (ಪ್ರವೇಶಿಸಿ) ಆಹಾ ! ಯಾರಿವನು ? ಆಶ್ರಮವಿರುದ್ಧವಾದ ವೇಷದಲ್ಲಿರುವನು ? (ಬೇರೊಂದು ಕಡೆಗೆ ತಿರುಗಿ) ಇಗೋ ? ಅಲ್ಲಿ ತಪಸ್ವಿಗಳೂ ಕೆಲವರು ಕಾಣಿಸುತ್ತಿರುವರು ! ಆದುದರಿಂದ ನಾನು ಅಲ್ಲಿ ಹೋಗುವುದರಿಂದ ತಪ್ಪೇನೂ ಇಲ್ಲ. ಓಹೋ ಇದೇನು ? ಇಲ್ಲಿ ಹೆಂಗುಸರೂ ಕಾಣಿಸುವರು !

ಕಂಚುಕಿ—ಅಯ್ಯಾ ! ಧಾರಾಳವಾಗಿ 'ಬರಬಹುದು ; ಇಂತಹ ಆಶ್ರಮಪ್ರದೇಶವು ಸರ್ವಸಾಧಾರಣವಾದುದಲ್ಲವೆ ? ಇಲ್ಲಿ ಯಾರಿಗೂ ಯಾವ ಅಡ್ಡಿಯೂ ಇಲ್ಲ.

ವಾಸವದತ್ತೆ—(ಅರ್ಧಾಂಗೀಕಾರದಿಂದ) ಊಂ !

ಪದ್ಮಾವತಿ—ಓಹೋ! ಪರಪುರುಷದರ್ಶನಕ್ಕೆ ಇವಳು ಬೇಸರಗೊಳ್ಳುವಂತಿದೆ. ಒಳ್ಳೆಯದು ! ನನ್ನಲ್ಲಿ ನ್ಯಾಸರೂಪವಾಗಿರುವ ಈಕೆಯ ಮನಸ್ಸು ನೋಯದಂತೆ ನೋಡಿಕೊಳ್ಳಬೇಕಾದುದು ನನ್ನ ಕರ್ತವ್ಯವು.

ಕಂಚುಕಿ—ಅಯ್ಯಾ ! ನಾವು ಇಲ್ಲಿಗೆ ಮೊದಲೇ ಬಂದವರು. ಈಗಲೇ ಅಭ್ಯಾಗತರಾಗಿ ಬಂದ ನೀವು ನಮ್ಮ ಆತಿಥ್ಯವನ್ನು ಕೈಕೊಳ್ಳಬೇಕು.

ಬ್ರಹ್ಮಚಾರಿ—(ಆಚಮನಮಾಡಿ) ಇರಲಿ ! ಇರಲಿ ! ನಮ್ಮ ಶ್ರಮವು ನೀಗಿತು. ತೃಪ್ತರಾದೆವು.

ಯೌಗಂಧ—ಅಯ್ಯಾ! ತಾವು ಎಲ್ಲಿಂದ ಬಂದವರು? ಮುಂದೆ ಎಲ್ಲಿಗೆ ಹೋಗತಕ್ಕವರು? ನಿಮ್ಮ ವಾಸಸ್ಥಳವಾವುದು?

ಬ್ರಹ್ಮಚಾರಿ—ಅಯ್ಯಾ ಕೇಳು! ನಾನು ಈಗಲೇ ರಾಜಗೃಹದಿಂದ ಬರುತ್ತಿರುವೆನು. ನಾನು ವೇದಗಳಿಗೆ ವಿಶೇಷಾರ್ಥಗಳನ್ನು ಅಧ್ಯಯನ ಮಾಡುವುದಕ್ಕಾಗಿ ವತ್ಸದೇಶಕ್ಕೆ ಸೇರಿದ ಲಾವಾಣಕವೆಂಬ ಗ್ರಾಮದಲ್ಲಿರುತ್ತಿದ್ದೆನು.

ವಾಸವದತ್ತೆ—(ತನ್ನಲ್ಲಿ ತಾನು ದುಃಖದಿಂದ) ಅಯ್ಯೋ! ಲಾವಾಣಕವೆ? ಈ ಲಾವಾಣಕವೆಂಬ ಹೆಸರನ್ನು ಕೇಳಿ ನನ್ನ ಸಂಕಟವು ಮರುಕೊಳಿಸುತ್ತಿರುವುದು.

ಯೌಗಂಧ—ತಮ್ಮ ಅಧ್ಯಯನವು ಮುಗಿಯಿತಲ್ಲವೆ?

ಬ್ರಹ್ಮಚಾರಿ—ಮುಗಿಯುವುದೆಲ್ಲಿ?

ಯೌಗಂಧ—ಹಾಗಿದ್ದರೆ ಅದನ್ನು ಮುಗಿಸುವುದಕ್ಕೆ ಮೊದಲೇ ಬಿಟ್ಟು ಇಲ್ಲಿಗೆ ಬರಲು ಕಾರಣವೇನು?

ಬ್ರಹ್ಮಚಾರಿ—ಅಲ್ಲಿ ಅತಿದಾರುಣವಾದ ಮಹಾವ್ಯಸನವೊಂದು ಪ್ರಾಪ್ತವಾಯಿತಷ್ಟೆ?

ಯೌಗಂಧ—ಏನದು! ಅಂತಹ ವ್ಯಸನವೇನು?

ಬ್ರಹ್ಮಚಾರಿ—ಅಲ್ಲಿ ಉದಯನನೆಂಬ ರಾಜನು ವಾಸಿಸುತ್ತಿದ್ದನು.

ಯೌಗಂಧ—ಹೌದು! ಪೂಜ್ಯನಾದ ಆ ಮಹಾರಾಜನ ಖ್ಯಾತಿಯನ್ನು ಕೇಳಿಬಲ್ಲೆವು. ಅವನಿಗೇನಾಯಿತು?

ಬ್ರಹ್ಮಚಾರಿ—ಅವನಿಗೆ ಅವಂತಿರಾಜಪುತ್ರಿಯಾದ ವಾಸವದತ್ತೆಯೆಂಬ ಪ್ರಿಯ ಪತ್ನಿಯೊಬ್ಬಳಿದ್ದಳು.

ಯೌಗಂಧ—ಇರಬಹುದು? ಆಮೇಲಾಮೇಲೆ?

ಬ್ರಹ್ಮಚಾರಿ—ಒಮ್ಮೆ ರಾಜನು ಬೇಟೆಗೆ ಹೋಗಿದ್ದ ಕಾಲದಲ್ಲಿ ಆ ಗ್ರಾಮಕ್ಕೆ ಬೆಂಕಿಬಿದ್ದು, ಅದರಲ್ಲಿ ಅವಳೂ ದಗ್ಧಳಾದಳು.

ವಾಸವದತ್ತೆ—(ಆತ್ಮಗತಂ) ಅಯ್ಯೋ! ಸುಳ್ಳು! ಸುಳ್ಳು! ಹಾ! ಮಂದ ಭಾಗಿನಿಯಾದ ನಾನು ಇನ್ನೂ ಜೀವಿಸಿರುವೆನಲ್ಲವೆ!

ಯೌಗಂಧ—ಆಮೇಲಾಮೇಲೆ?

ಬ್ರಹ್ಮಚಾರಿ—ಆಗ ಆ ವಾಸವದತ್ತಾದೇವಿಯನ್ನು ಅಪಾಯದಿಂದ ತಪ್ಪಿಸಬೇಕೆಂದು ಪ್ರಯತ್ನಿಸಿ, ಯೌಗಂಧರಾಯಣನೆಂಬ ಮಂತ್ರಿಯೂ ಆ ಅಗ್ನಿಯಲ್ಲಿಯೇ ಬಿದ್ದುಬಿಟ್ಟನು.

ಯೌಗಂಧ—(ಸ್ವಗತಂ) ಬಿದ್ದದ್ದೇನೋ ನಿಜವೇ! ಆಮೇಲೆ?

ಬ್ರಹ್ಮಚಾರಿ—ಇಷ್ಟರಲ್ಲಿ ಬೇಟೆಯಿಂದ ಹಿಂತಿರುಗಿ ಬಂದ ರಾಜನಿಗೆ ಈ ಅನರ್ಥಗಳೆಲ್ಲವೂ ತಿಳಿಯಬಂದುವು. ಅವನು ತನ್ನ ಪ್ರಿಯಭಾರ್ಯೆಯ ಮತ್ತು ಇಷ್ಟಮಂತ್ರಿಯ ವಿಯೋಗವನ್ನು ಸಹಿಸಲಾರದೆ, ತಾನೂ ಅದೇ ಬೆಂಕಿಯಲ್ಲಿ ಬಿದ್ದು ಪ್ರಾಣವನ್ನು ಕಳೆದುಕೊಳ್ಳಲು ಯತ್ನಿಸುವಷ್ಟರಲ್ಲಿ, ಸಮೀಪದಲ್ಲಿದ್ದ ಮಂತ್ರಿಗಳು ಬಹಳ ಪ್ರಯತ್ನದಿಂದ ಅವನನ್ನು ತಡೆದರು.

ವಾಸವದತ್ತೆ—(ಆತ್ಮಗತಂ) ಬಲ್ಲೆನು, ಬಲ್ಲೆನು! ಆರ್ಯಪುತ್ರನಿಗೆ ನನ್ನಲ್ಲಿರುವ ಕನಿಕರವೆಷ್ಟೆಂಬುದನ್ನು ನಾನೂ ಬಲ್ಲೆನು.

ಯೌಗಂಧ—ಆಮೇಲಾಮೇಲೆ?

ಬ್ರಹ್ಮಚಾರಿ—ಆ ಮೇಲೆ ರಾಜನು ತನ್ನ ಪ್ರಿಯೆಯ ಮೈಮೇಲಿನ ಆಭರಣಗಳಲ್ಲಿ ದಗ್ಧಶೇಷವಾಗಿದ್ದ ಕೆಲವನ್ನು ನೋಡಿ, ಅವುಗಳನ್ನೆತ್ತಿ ತನ್ನ ಎದೆಗೆ ಒತ್ತಿಕೊಂಡು ವ್ಯಸನವನ್ನು ತಡೆಯಲಾರದೆ ಮೂರ್ಛಿತನಾದನು.

ಎಲ್ಲರೂ—(ವ್ಯಸನದಿಂದ) ಹಾ! ಕಷ್ಟ, ಕಷ್ಟ!

ವಾಸವದತ್ತೆ—(ಸ್ವಗತಂ) ಆರ್ಯ ಯೌಗಂಧರಾಯಣನ ಕೋರಿಕೆ ತೀರಿತಲ್ಲವೆ! ಇನ್ನಾದರೂ ನೆಮ್ಮದಿಯಿಂದಿರಲಿ!

ಚೇಟಿ—ರಾಜಪುತ್ರೀ! ಈಕೆಯೇಕೊ ಬಹಳವಾಗಿ ಅಳುತ್ತಿರುವಳು ನೋಡು.

ಪದ್ಮಾವತಿ—ಹೌದು ! ಅವಳು ಬಹು ದುಃಖಪಡುವಂತೆ ತೋರುವುದು.

ಯೌಗಂಧ—ಹೌದಮ್ಮ, ಹೌದು ! ನಿಜ ! ಈ ನನ್ನ ತಂಗಿಯು ಸಹಜವಾಗಿಯೇ ದುಃಖವನ್ನು ತಡೆಯಲಾರಳು. ಆಮೇಲಾಮೇಲೆ ?

ಬ್ರಹ್ಮಚಾರಿ—ಆಮೇಲೆ ರಾಜನಿಗೆ ಮೆಲ್ಲಮೆಲ್ಲಗೆ ಪ್ರಜ್ಞೆ ಬಂದು ಚೇತರಿಸಿಕೊಂಡನು.

ಪದ್ಮಾವತಿ—ಹೇಗಾದರೂ ದೈವಕೃಪೆಯಿಂದ ಬದುಕಿರುವನಷ್ಟೆ ? ಅವನು ಮೂರ್ಛೆಬಿದ್ದನೆಂದು ಕೇಳಿದೊಡನೆ ನನ್ನ ಹೃದಯವು ಶೂನ್ಯಪ್ರಾಯವಾಗಿತ್ತು.

ಯೌಗಂಧ—ಆಮೇಲಾಮೇಲೆ ?

ಬ್ರಹ್ಮಚಾರಿ—ಆಮೇಲೆ ಆ ರಾಜನು ನೆಲದಮೇಲೆ ಬಿದ್ದುದರಿಂದ ಧೂಳಿಧೂಸರಿತವಾದ ದೇಹದೊಡನೆ ತಟ್ಟನೆ ಮೇಲೆದ್ದು "ಹಾ! ವಾಸವದತ್ತೇ! ಹಾ ! ಅವಂತಿರಾಜಪುತ್ರೀ ! ಹಾ ಪ್ರಿಯೇ ! ಹಾ ಪ್ರಿಯಶಿಷ್ಯೇ !" ಎಂದು ಏನೇನೋ ಬಹುವಿಧವಾಗಿ ಪ್ರಲಪಿಸುತ್ತಿದ್ದನು. ಹೆಚ್ಚು ಮಾತಿನಿಂದೇನು ? ಮುಖ್ಯವಾಗಿ—

ಆ ಪರಿ ದುರ್ನಿವಾರವಿರಹಾರ್ತರಥಾಂಗಮುಮಿಾಗಳಿಲ್ಲ ! ಮ |
ತ್ತಾ ಪರಿ ಕಾಮಿನೀಜನವಿಯೋಗದೆ ನೊಂದರುಮನ್ಯರಿಲ್ಲ ! ತ ||
ದ್ಭೂಪನದಾವಳಂ ನೆನೆವನಿಂತವಳೊರ್ವಳೆ ಧನ್ಯೆ ! ಪಾವಕೋ |
ದ್ದೀಪಿತೆಯಾಗಿ ಬೆಂದಳಿದುಮಾಪತಿ ಬೆಂದವಳಲ್ಲ ನಿಶ್ಚಯಂ || ೧೩ ||

ಯೌಗಂಧ—ಅಯ್ಯಾ, ಅದಿರಲಿ. ಆ ರಾಜನಿಗೆ ಇಂತಹ ಸ್ಥಿತಿಯಲ್ಲಿ ದುಃಖಶಮನಮಾಡುವುದಕ್ಕೆ ಮಂತ್ರಿಗಳಾದರೂ ಸಮಿಾಪದಲ್ಲಿರಲಿಲ್ಲವೇ ?

ಬ್ರಹ್ಮಚಾರಿ—ಇಲ್ಲದೆ ಏನು ? ರುಮಣ್ವಂತನೆಂಬ ಮಂತ್ರಿಯು ಅವನ ಸಮಿಾಪದಲ್ಲಿಯೇ ಇದ್ದು, ಅವನನ್ನು ಸಮಾಧಾನದಲ್ಲಿರಿಸುವುದಕ್ಕೆ ತನ್ನಿಂದಾದಷ್ಟು ಪ್ರಯತ್ನಗಳನ್ನೆಲ್ಲಾ ಮಾಡುತ್ತಿರುವನು. ಆ ಮಂತ್ರಿಯ ದುಃಖವನ್ನು ತಾನೇ ಏನೆಂದು ಹೇಳಲಿ ?

ಜನಪತಿಯಂತೆ ತಾನುಮತಿದೀನಕೃಶಾನನಾಗಿ, ಪಾನಭೋ |
ಜನ ನಿಜದೇಹಸಂಸ್ಕರಣವೊಂದುಮನೊಲ್ಲದಹರ್ನಿಶಂ ನಿಜೇ ||
ಶನ ಪರಿಚರ್ಯೆಗೆಯ್ಯುತವನೊಳ್ ಸುಖದುಃಖಸಮಾನಭಾಗಿಯೆಂ |
ದೆನಿಸಿಹನೊರ್ವ ರಾಜನಸುವಂ ಬಿಡೆ ಮಂತ್ರಿಗೆ ಮೃತ್ಯುಸಿಕ್ಷೆಯಂ || ೧೪ ||

ವಾಸವದತ್ತೆ—(ಸ್ವಗತಂ) ದೈವಕೃಪೆಯಿಂದ ಆರ್ಯಪುತ್ರನಿಗೆ ರಕ್ಷಕರೊದಗಿದರು.

ಯೌಗಂಧ—(ಸ್ವಗತಂ) ಈಗ ರುಮಣ್ವಂತನು ವಹಿಸಿರುವ ಭಾರವು ಬಹಳ ಮಹತ್ತರವಾದುದೇ ! ಏಕೆಂದರೆ—

ನಾಂ ತಳೆದ ಭಾರವಿದು ವಿ |
ಶ್ರಾಂತಿಪ್ರದಮುವನ ಭಾರಮಧಿಕತರಂ ! ಭೂ ||
ಕಾತಂ ಪಶನಾಗ್ಗಿಳೆಯಾ |
ದ್ಯಂತಮುಮಾತಂಗಧೀನವೆನಿಸಿಹುದಲ್ತೇ || ೧೫ ||

(ಪ್ರಕಾಶಂ) ಅಯ್ಯಾ, ಈಗ ರಾಜನು ನೆಮ್ಮದಿಯಿಂದಿರುವನಷ್ಟೆ ?

ಬ್ರಹ್ಮಚಾರಿ—ಈಗ ಹೇಗಿರುವನೆಂದು ನನಗೆ ತಿಳಿಯದು. ಆ ಗ್ರಾಮದಲ್ಲಿರುವವರೆಗೂ ಆ ರಾಜನು ಕ್ಷಣಕ್ಷಣಕ್ಕೂ ಅವಳನ್ನೇ ನೆನೆಸಿಕೊಂಡು "ಇಲ್ಲಿ ನಾನು ಅವಳೊಡನೆ ನಗುತ್ತಿದ್ದೆನು, ಇಲ್ಲಿ ಮಾತಾಡುತ್ತಿದ್ದೆನು, ಇಲ್ಲಿ ಅವಳೊಡನೆ ಕುಳಿತಿದ್ದೆನು, ಇಲ್ಲಿ ಆಕೆಯೊಡನೆ ಕೋಪಗೊಂಡಿದ್ದೆನು!" ಎಂದು ಪರಿಪರಿಯಾಗಿ ವಿಲಪಿಸುತ್ತಿದ್ದುದನ್ನು ನೋಡಿ ಮಂತ್ರಿಗಳು ಅವನನ್ನು ಬಹಳ ಪ್ರಯತ್ನಪೂರ್ವಕವಾಗಿ ಆ ಗ್ರಾಮದಿಂದ ಕರೆದುಕೊಂಡು ಹೊರಟುಹೋದರು. ರಾಜನು ಬಿಟ್ಟುಹೋದ ಮೇಲೆ ಆ ಗ್ರಾಮವು ಚಂದ್ರನಕ್ಷತ್ರಗಳೊಂದೂ ಇಲ್ಲದ ಆಕಾಶದಂತೆ ಕೇವಲ ಶೂನ್ಯಪ್ರಾಯವಾಗಿದ್ದುದನ್ನು ನೋಡಿ ನಾನೂ ಅದನ್ನು ಬಿಟ್ಟು ಇತ್ತಲಾಗಿ ಹೊರಟುಬಂದೆನು.

ತಾಪಸಿ—ಆಹಾ ! ಆ ಗ್ರಾಮಕ್ಕೆ ಆಗಂತುಕನಾಗಿ ಬಂದ ಈ ಬ್ರಹ್ಮಚಾರಿಯೂ ಹೀಗೆ ಪ್ರಶಂಸೆಮಾಡಬೇಕಾದರೆ, ಆ ರಾಜನು ಬಹಳ ಉತ್ತಮಗುಣವುಳ್ಳವನಾಗಿರಬೇಕಲ್ಲವೇ ?

ಚೇಟಿ—ರಾಜಪುತ್ರಿ ! ಅಂತಹ ಮಹನೀಯನನ್ನು ಬೇರೆ ಯಾವ ಪುಣ್ಯವತಿಯು ಕೈ ಹಿಡಿಯುವಳೋ ?

ಪದ್ಮಾವತಿ—(ತನ್ನಲ್ಲಿ ತಾನು) ನನ್ನ ಹೃದಯವೂ ಇದನ್ನೇ ಆಲೋಚಿಸುತ್ತಿರುವುದು.

ಬ್ರಹ್ಮಚಾರಿ—ಅಮ್ಮಾ ! ಇನ್ನು ನಾನು ಹೊರಡಬಹುವೆ ?

ಇಬ್ಬರೂ—ಹೊರಡಬಹುದು. ನಿನಗೆ ಕಾರ್ಯಸಿದ್ಧಿಯಾಗಲಿ !

ಬ್ರಹ್ಮಚಾರಿ—ಹೋಗಿ ಬರುವೆನು. (ಹೋಗುವನು.)

ಯೌಗಂಧ—(ಕಂಚುಕಿಯನ್ನು ನೋಡಿ) ಅಯ್ಯಾ ! ಈ ಪೂಜ್ಯಳ ಅನುಜ್ಞೆಯನ್ನು ಪಡೆದು ನಾನೂ ಹೋಗಬೇಕೆಂದಿರುವನು.

ಕಂಚುಕಿ—ಅಮ್ಮಾ ! ನೀನು ಅನುಜ್ಞೆಯನ್ನು ಕೊಟ್ಟರೆ ಇವನೂ ಹೊರಡುವನಂತೆ !

ಪದ್ಮಾವತಿ—ಆರ್ಯನನ್ನು ಕಾಣದಿದ್ದರೆ ಅವನ ಸಹೋದರಿಯು ಬಹಳ ವ್ಯಸನಪಡುವಳೋ ಏನೋ !

ಯೌಗಂಧ—ನಿಮ್ಮಂತಹ ಸಾಧುಗಳ ರಕ್ಷಣೆಯಲ್ಲಿರುವಾಗ ಅವಳಿಗೆ ವ್ಯಸನವೇನೂ ತೋರದು ! (ಕಂಚುಕಿಯನ್ನು ನೋಡಿ) ಅಯ್ಯಾ ! ನಾವು ಹೊರಡುವೆವು.

ಕಂಚುಕಿ—ಹೊರಡಬಹುದು ! ಆದರೆ ತಿರುಗಿ ಇಲ್ಲಿಗೆ ಬಂದು ನಮಗೆ ದರ್ಶನವನ್ನು ಕೊಡಬೇಕು.

ಯೌಗಂಧ—ಆಗಲಿ ! (ಹೋಗುವನು.)

ಕಂಚುಕಿ—ರಾಜಪುತ್ರೀ ! ಪರ್ಣಶಾಲೆಗೆ ಹೋಗಲು ನಮಗೂ ಸಮಯವಾಯಿತಲ್ಲವೇ ?

ಪದ್ಮಾವತಿ—ಆರ್ಯೆ ! ವಂದಿಸುವೆನು.

ತಾಪಸಿ—ವತ್ಸೆ ! ಅನುರೂಪನಾದ ಪತಿಯನ್ನು ಪಡೆ !

ವಾಸವದತ್ತೆ—ಆರ್ಯೆ ! ನಮಸ್ಕರಿಸುವೆನು.

ತಾಪಸಿ—ಶೀಘ್ರದಲ್ಲಿಯೇ ನಿನಗೆ ನಿನ್ನ ಪತಿಯೊಡನೆ ಸಮಾಗಮ ವುಂಟಾಗಲಿ !

ವಾಸವದತ್ತೆ—ಅನುಗೃಹಿತಳಾದೆನು.

ಕಂಚುಕಿ—ಅಮ್ಮಾ ! ಇನ್ನು ನಡೆಯಿರಿ, ಅದೋ ! ಆಗಲೇ ಸಂಧ್ಯಾಸಮಯ ವಾಯಿತು. ನೋಡಿರಿ ! ಈಗಲಾದರೋ,

ತಳರ್ದುವು ಪಕ್ಷಿಗಳ್ ನಿಜವಾಸಕೆ ! ತೀರ್ಥಜಲಾವಗಾಹನ |
ಕ್ಕೆಳಸುದು ಮೌನಿವೃಂದಮಿದೊ ! ಧೂಮಮನೆಳ್ಬಿಸಿ ಹೋಮವಹ್ನಿಯು ||
ಜ್ಜ್ವಲತೆಯಿನಾಂತುದೆಲ್ಲೆಡೆಯೊಳಂ ! ರವಿ ಮೆಲ್ಲನೆ ಪಶ್ಚಿಮಾಚಲ |
ಕ್ಕೆಳಸಿದನಿದೋ ! ಮರಳ್ಚಿ ರಥಮಂ ನಿಜರಶ್ಮಿಯನೀಳ್ವ ದೂರದಿಂ || ೧೬ ||

[ಎಲ್ಲರೂ ಹೋಗುವರು]

ಇದು

ಪ್ರಥಮಾಂಕಂ

— ದ್ವಿ ತೀ ಯಾ ಂ ಕ ಂ —

[ಚೇಟಿಯು ಪ್ರವೇಶಿಸುವಳು]

ಚೇಟಿ—ಕುಂಜರಿಕೆ ! ಕುಂಜರಿಕೆ ! ಎಲ್ಲಿ ? ರಾಜಕುಮಾರಿ, ಪದ್ಮಾವತಿ ಎಲ್ಲಿರುವಳು ? ಏನು ಹೇಳುವೆ ? ಮಾಧವೀಲತಾಮಂಟಪದ ಪಕ್ಕದಲ್ಲಿ ರಾಜಪುತ್ರಿಯು ಚೆಂಡಾಡುತ್ತಿರುವಳೆಂದೋ ? ಸರಿ ! ಅಲ್ಲಿಗೇ ಹೋಗುವೆನು. (ಮುಂದೆ ಹೋಗಿನೋಡಿ) ಇದೋ ! ರಾಜಕುಮಾರಿಯು ಚೆಂಡನ್ನು ಪುಟಹಾರಿಸುತ್ತಾ ಇತ್ತಲಾಗಿಯೇ ಬರುತ್ತಿರುವಳು. ಆಹಾ ! ಮೇಲಕ್ಕೆ ಒತ್ತರಿಸಿಟ್ಟ ಕರ್ಣಾವತಂಸದಿಂದಲೂ ಚಿತ್ರಿಸಿದಂತೆ ತೋರುವ ಸ್ವೇದಬಿಂದುಗಳಿಂದಲೂ ಕೂಡಿದ ಇವಳ ಮುಖವು ಚೆಂಡಾಟದ ಶ್ರಮದಿಂದ ಒಂದು ಅಪೂರ್ವಸೌಂದರ್ಯವನ್ನು ಬೀರುತ್ತ ಎಷ್ಟು ಮನೋಹರವಾಗಿರುವುದು ! ಇರಲಿ ! ಸಮೀಪಕ್ಕೆ ಹೋಗುವೆನು.

(ಹೋಗುವಳು)

ಇದು

ಪ್ರವೇಶಕವು

(ಅನಂತರದಲ್ಲಿ ಪದ್ಮಾವತಿಯು ಸಪರಿವಾರಳಾಗಿ ವಾಸವದತ್ತೆಯೊಡನೆ ಚೆಂಡಾಡುತ್ತ ಪ್ರವೇಶಿಸುವಳು.)

ವಾಸವದತ್ತೆ—ಸಖಿ ! ಇದೋ ನೋಡು ಇಲ್ಲಿ ! ನಿನ್ನ ಚೆಂಡು.

ಪದ್ಮಾವತಿ—ಆರ್ಯೆ ! ಈಗ್ಗೆ ಈ ಆಟವು ಸಾಕು.

ವಾಸವದತ್ತೆ—ಸಖಿ ! ಬಹಳ ಹೊತ್ತಿನಿಂದ ಚೆಂಡನ್ನು ಹೊಡೆದು ರಾಗಯುಕ್ತವಾದ ನಿನ್ನಕೈಗಳು ನಿನ್ನ ಸ್ವಾಧೀನ ತಪ್ಪಿದಂತೆ ತೋರುವುವು.

ಚೇಟಿ—ರಾಜಕುಮಾರೀ ! ಆಡು ! ಆಡು ! ಈಗಲೇ ನಿನ್ನ ಮನಸ್ಸಿಗೆ ತೃಪ್ತಿಯಾಗುವವರೆಗೆ ಆಡಿಬಿಡು ! ಆಡುವುದಕ್ಕೆ ಅನುಕೂಲವಾದ ಇಂತಹ ಸಮಯವು, ನಿನ್ನ ಕನ್ಯಾಭಾವವು ಕಳೆದುಹೋದಮೇಲೆ ದೊರೆಯಲಾರದು.

ಪದ್ಮಾವತಿ—ಏನಮ್ಮ ! ನೀವು ನನ್ನನ್ನು ಪರಿಹಾಸ್ಯ ಮಾಡುವಂತಿದೆ ?

ವಾಸವದತ್ತೆ—ಸಖಿ ! ಇಲ್ಲ ! ಇಲ್ಲ ! ನಾವೇನೂ ನಿನ್ನನ್ನು ಪರಿಹಾಸ ಮಾಡಲಿಲ್ಲ. ಈ ದಿನವೇನೋ ನೀನು ನಮ್ಮ ಕಣ್ಣಿಗೆ ಒಂದು ವಿಧವಾದ ಅಪೂರ್ವ ಸೌಂದರ್ಯದಿಂದ ಕಾಣಿಸುತ್ತಿರುವೆ. ನಿನ್ನ ಅಕ್ಕಪಕ್ಕಗಳಲ್ಲಿ ಯಾವಕಡೆ ನೋಡಿದರೂ ನಿನ್ನ ವರಮುಖವೇ ಕಾಣಿಸುವಂತಿರುವುದು.

ಪದ್ಮಾವತಿ—ಇರಲಿ ! ಸುಮ್ಮನೆ ಹೋಗು ! ನೀನೇನೂ ನನ್ನನ್ನು ಹಾಸ್ಯಮಾಡಬೇಡ !

ವಾಸವದತ್ತೆ—ಆಗಲಮ್ಮ ! ಮಹಾಸೇನನ ಸೊಸೆಯೆ ! ಹಾಗೆಯೇ ಆಗಲಿ ! ಇನ್ನು ನಾನು ಬಾಯನ್ನೇ ಎತ್ತುವುದಿಲ್ಲ.

ಪದ್ಮಾವತಿ—ಏನು ? ಏನು ? ಯಾರವನು ಮಹಾಸೇನನೆಂಬವನು ?

ವಾಸವದತ್ತೆ—ಉಜ್ಜಯಿನಿಯಲ್ಲಿ ಪ್ರದ್ಯೋತನೆಂಬ ರಾಜನಿರುವನಷ್ಟೆ ? ಅವನಿಗಿರತಕ್ಕ ಸೇನಾಸಮೃದ್ಧಿಯಿಂದ ಅವನಿಗೇ ಮಹಾಸೇನನೆಂಬ ಈ ನಾಮಾಂತರವು ಪ್ರಸಿದ್ಧವಾಗಿರುವುದು.

ಚೇಟಿ—ನಮ್ಮ ರಾಜಕುಮಾರಿಗೆ ಆ ಸಂಬಂಧವೇನೂ ಅಷ್ಟೊಂದು ಪ್ರಿಯವಲ್ಲ.

ವಾಸವದತ್ತೆ—ಹಾಗಿದ್ದರೆ ಇವಳಿಗೆ ಇಷ್ಟವಾದ ಸಂಬಂಧವಾವುದು ?

ಚೇಟಿ—ಉದಯನನೆಂಬ ವತ್ಸರಾಜನಿರುವನು ; ಅವನ ಗುಣಾತಿಶಯಗಳನ್ನು ಕೇಳಿ ಇವಳು ಅವನಲ್ಲಿ ಅನುರಕ್ತಳಾಗಿರುವಳು,

ವಾಸವದತ್ತೆ—(ಆತ್ಮಗತಂ) ಓಹೋ ! ಈಕೆಯು ಆರ್ಯಪುತ್ರನನ್ನೇ ಆಶಿಸುತ್ತಿರುವಳು. (ಪ್ರಕಾಶಂ) ಕಾರಣವೇನು ?

ಚೇಟಿ—ಅವನು ಬಹು ದಯಾಳು ! ಮತ್ತು ಪ್ರಣಯ ಸ್ವಭಾವವುಳ್ಳವನೆಂದು.

ವಾಸವದತ್ತೆ—(ಸ್ವಗತಂ) ಬಲ್ಲೆನು, ಬಲ್ಲೆನು. ಅವನ ವಿಷಯದಲ್ಲಿ ನನಗೆ ಇಷ್ಟೊಂದು ಹುಚ್ಚು ಹಿಡಿದಿರುವುದಕ್ಕೂ ಅದೇ ಕಾರಣವು.

ಚೇಟಿ—ರಾಜಪುತ್ರಿ ! ಒಂದುವೇಳೆ ಅವನು ಕುರೂಪಿಯಾಗಿದ್ದರೆ ?

ವಾಸವದತ್ತೆ—ಛೀ, ಛೀ, ಎಂದಿಗೂ ಇಲ್ಲ ! ವಾಸ್ತವದಲ್ಲಿ ಅವನು ಬಹಳ ರೂಪವಂತನು.

ಪದ್ಮಾವತಿ—ಅಮ್ಮಾ ! ನೀನು ಅದನ್ನು ಹೇಗೆ ಬಲ್ಲೆ ?

ವಾಸವದತ್ತೆ—(ಭಯದಿಂದ ಸ್ವಗತಂ) ಅಯ್ಯೋ ! ಇದೇನು ! ಆರ್ಯಪುತ್ರನಲ್ಲಿರುವ ಪಕ್ಷಪಾತದಿಂದ ಮೈಮರೆತು ಹದ್ದುಮೀರಿ ಮಾತಾಡಿಬಿಟ್ಟೆನಲ್ಲಾ ! ಇನ್ನೇನು ಗತಿ ! ಇರಲಿ ! (ಪ್ರಕಾಶಂ) ಸಖಿ ! ಉಜ್ಜಯಿನೀ ನಗರದ ಜನರು ಹೀಗೆಂದು ಮಾತಾಡಿಕೊಳ್ಳುತ್ತಿದ್ದುದನ್ನು ಕೇಳಿದ್ದೆನು.

ಪದ್ಮಾವತಿ—ಸರಿ ! ಇರಬಹುದು ! ಉಜ್ಜಯಿನಿಯಲ್ಲಿರತಕ್ಕವರಿಗೆ ಅವನು ಆಗಾಗ ಕಾಣಿಸಿಕೊಳ್ಳುತ್ತಲೇ ಇರಬೇಕಲ್ಲವೇ ? ಸೌಂದರ್ಯವೆಂಬುದು ಎಂಥವರ ಮನಸ್ಸನ್ನಾದರೂ ಆಕರ್ಷಿಸದಿರಲಾರದು.

[ಧಾತ್ರಿಯು ಪ್ರವೇಶಿಸುವಳು]

ಧಾತ್ರಿ—ರಾಜಪುತ್ರಿಗೆ ಜಯವಾಗಲಿ ! ಭರ್ತೃದಾರಿಕೆ ! ಆಗಲೇ ನಿನ್ನನ್ನು ಕೊಟ್ಟಾಯಿತು.

ವಾಸವದತ್ತೆ—ಅಯ್ಯೋ ! ಯಾರಿಗೆ ?

ಧಾತ್ರಿ—ವತ್ಸರಾಜನಾದ ಉದಯನನಿಗೆ !

ವಾಸವದತ್ತೆ—ಹಾಗಿದ್ದರೆ ಆ ಮಹಾರಾಜನು ಕ್ಷೇಮದಿಂದಿರುವನೇ ?

ಧಾತ್ರಿ—ಅವನು ಕ್ಷೇಮದಿಂದ ಇಲ್ಲಿಗೆ ಬಂದುದು ಮಾತ್ರವಲ್ಲ. ನಮ್ಮ ರಾಜಕುಮಾರಿಯನ್ನು ಪ್ರತಿಗ್ರಹಿಸಿಯೂ ಆಯಿತು !

ವಾಸವದತ್ತೆ—ಆಹಾ ! ಏನನನ್ಯಾಯವಿದು ?

ಧಾತ್ರಿ—ಇಲ್ಲಿ ಅನ್ಯಾಯವೇನಿರುವುದು ?

ವಾಸವದತ್ತೆ—ಅಂತದೇನೂ ಇಲ್ಲ ! ಆದರೆ, ತನ್ನ ಪ್ರಥಮ ಪತ್ನಿಗಾಗಿ ಅಷ್ಟೊಂದು ಪರಿತಪಿಸುತ್ತಿದ್ದ ಆ ರಾಜನು, ಅಕಸ್ಮಾತ್ತಾಗಿ ಹೀಗೆ ಅವಳ ವಿಷಯದಲ್ಲಿ ಉದಾಸೀನನಾಗಿಬಿಟ್ಟನಲ್ಲವೆ !

ಧಾತ್ರಿ—ಅಮ್ಮಾ ! ಮಹಾಪುರುಷರ ಸ್ವಭಾವವೇ ಇದು ! ಅವರ ಹೃದಯವು ಶಾಸ್ತ್ರಬೋಧೆಗಳಿಗೂ, ಸ್ನೇಹಿತರ ಹಿತವಾದಗಳಿಗೂ ಬಹು ಸುಲಭವಾಗಿ ಈಡಾಗುವುದರಿಂದ. ಅಂತಹ ಧೀರರ ಮನಸ್ಸನ್ನು ಸಮಾಧಾನಕ್ಕೆ ತರುವುದೇನೂ ಕಷ್ಟವಲ್ಲ.

ವಾಸವದತ್ತೆ—ಅಮ್ಮಾ ! ಅದು ಹೋಗಲಿ ! ಆ ಮಹಾರಾಜನು ನಿಮ್ಮ ರಾಜಪುತ್ರಿಯನ್ನು ತಾನಾಗಿಯೇ ಆಸೆಪಟ್ಟು ಬಂದು ಕೇಳಿದನೇನು ?

ಧಾತ್ರಿ—ಇಲ್ಲವಮ್ಮಾ ! ವತ್ಸರಾಜನು ಏನೋ ಕಾರ್ಯಾಂತರದ ಮೇಲೆ ಇಲ್ಲಿಗೆ ಬಂದಿದ್ದಾಗ, ಅವನ ಕುಲ, ರೂಪ, ವಯಸ್ಸು, ಜ್ಞಾನ, ಇವುಗಳನ್ನೆಲ್ಲಾ ನೋಡಿ ನಮ್ಮ ಮಹಾರಾಜನು ತಾನಾಗಿಯೇ ಇವಳನ್ನು ಅವನಿಗೆ ವಾಗ್ದಾನಮಾಡಿಬಿಟ್ಟನು.

ವಾಸವದತ್ತೆ—(ಆತ್ಮಗತಂ) ಹಾಗಿದ್ದರೆ ಈ ವಿಚಾರವಾಗಿ ಆರ್ಯಪುತ್ರನಲ್ಲಿ ತಪ್ಪೆಣಿಸುವಹಾಗಿಲ್ಲ.

[ಬೇರೊಬ್ಬ ಚೇಟಿಯು ಸಂಭ್ರಮದಿಂದ ಪ್ರವೇಶಿಸುವಳು]

ಚೇಟಿ—ಅಮ್ಮಾ! ಹೊರಡು! ಹೊರಡು! ಈಗಲೇ ಒಳ್ಳೆಯ ಶುಭ ಮುಹೂರ್ತವಂತೆ! ಈ ಗ ಲೇ ವಿವಾಹಮಹೋತ್ಸವವು ನಡೆದು ಹೋಗಬೇಕೆಂದು ಮಹಾರಾಣಿಯವರ ಆಜ್ಞೆಯಾಗಿಡೆ.

ವಾಸವದತ್ತೆ—(ಸ್ವಗತಂ) ಈ ವಿವಾಹಕಾರ್ಯವನ್ನು ತ್ವರೆಗೊಳಿಸಿದಷ್ಟೂ ನನ್ನ ಹೃದಯವು ಶೂನ್ಯಪ್ರಾಯವಾಗಿ ಕಳವಳಿಸುತ್ತಿದೆ!

ಧಾತ್ರಿ—ರಾಜಪುತ್ರಿ! ನಡೆ! ನಡೆ! ಹೋಗುವೆವು.

(ಎಲ್ಲರೂ ಹೋಗುವರು)

ಇದು

ದ್ವಿತೀಯಾಂಕಂ

— ತೃತೀಯಾಂಕಂ —

[ಚಿಂತಾಕುಲೆಯಾದ ವಾಸವದತ್ತೆ ಪ್ರವೇಶಿಸುವಳು]

ವಾಸವದತ್ತೆ—ವಿವಾಹೋತ್ಸವದ ಸಡಗರದಿಂದ ತುಂಬಿದ ಅಂತಃಪುರದ ತೊಟ್ಟಿಯಲ್ಲಿ ಪದ್ಮಾವತಿಯನ್ನು ಬಿಟ್ಟು, ನಾನು ಕಣ್ಮರೆಯಾಗಿ ಈ ಪ್ರಮದವನಕ್ಕೆ ಬಂದುಬಿಟ್ಟೆನು. ಮಂದಭಾಗ್ಯಳಾದ ನನ್ನ ಮನಸ್ಸಂಕಟವನ್ನು ಇಲ್ಲಿಯಾದರೂ ಆದಷ್ಟುಮಟ್ಟಿಗೆ ಪರಿಹರಿಸಿಕೊಳ್ಳುವೆನು. ಆಹಾ ! ಏನನ್ಯಾಯವಿದು ! ಹಾಗಿದ್ದ ಆರ್ಯಪುತ್ರನೂ ಕೂಡ ಪರಾಧೀನನಾಗಿಬಿಟ್ಟನಲ್ಲವೇ ? ಇರಲಿ ! ಇಲ್ಲಿ ಕುಳ್ಳಿರುವೆನು ; ಆಹಾ ! ಲೋಕದಲ್ಲಿ ಚಕ್ರವಾಕಸ್ತ್ರೀಯಲ್ಲವೇ ಧನ್ಯೆ ! ಪ್ರಿಯವಿರಹವುಂಟಾದಾಗ ಅದು ಆ ಸಂಕಟವನ್ನು ಅನುಭವಿಸುವ ಕಷ್ಟವಿಲ್ಲದೆ ಬೇಗನೆ ಸಾಯುವುದು, ಮಂದಭಾಗ್ಯಳಾದ ನಾನು ಸಾಯುವುದಕ್ಕೂ ಇಲ್ಲದಂತಾಯಿತು. ಆರ್ಯಪುತ್ರನನ್ನು ತಿರಿಗಿ ಎಂದಾದರೂ ನೋಡದೆ ಹೋಗುವೆನೇ! ಎಂಬಆಶೋತ್ತರದಿಂದ ಪ್ರಾಣವನ್ನಿರಿಸಿಕೊಂಡಿದ್ದೆನು.

(ಪುಷ್ಪಗಳನ್ನು ತೆಗೆದುಕೊಂಡು ಚೇಟಿಯು ಪ್ರವೇಶಿಸುವಳು)

ಚೇಟಿ—ಆ ಅವಂತಿಸುಂದರಿಯು ಎಲ್ಲಿ ಹೋದಳೋ ತಿಳಿಯಲಿಲ್ಲವಲ್ಲಾ ! (ಅಲ್ಲಲ್ಲಿ ತಿರಿಗಿನೋಡಿ) ಅಬ್ಬಾ ! ಮಂಜುಮುಚ್ಚಿದ ಚಂದ್ರಲೇಖೆಯಂತೆ ಚಿಂತಾಶೂನ್ಯಹೃದಯಳಾಗಿ, ಅಲಂಕಾರವಿಲ್ಲದಿದ್ದರೂ ಸಹಜ ಸುಂದರವಾದ ರೂಪದೊಡನೆ ಇದೋ ! ಈ ಗಂಧಫಲೀವೃಕ್ಷದ ಕಲ್ಲುಕಟ್ಟೆಯ ಮೇಲೆ ಕುಳಿತಿರುವಳು. ಇರಲಿ ! ಸಮೀಪಕ್ಕೆ ಹೋಗುವೆನು. ಅಮ್ಮಾ ! ಅವಂತಿಕೆ ! ಚೆನ್ನಾಯಿತು ! ಚೆನ್ನಾಯಿತು ! ಎಷ್ಟು ಹೊತ್ತಿನಿಂದ ನಿನ್ನನ್ನು ಹುಡುಕುತ್ತಿರುವೆನು ಬಲ್ಲೆಯಾ ?

ವಾಸವದತ್ತೆ—ಏತಕ್ಕೆ ?

ಚೇಟಿ—ಅಮ್ಮಾ ಕೇಳು! ನಮ್ಮ ಮಹಾರಾಣಿಯವರು ಸದ್ವಂಶಪ್ರಸೂತಳೂ, ನಮ್ಮಲ್ಲಿ ಅಂತರ್ಯವಾದ ಪ್ರೇಮವುಳ್ಳವಳೂ ಮತ್ತು ಮಾಲೆಕಟ್ಟುವ

ಕೆಲಸದಲ್ಲಿ ಚತುರಳೂ ಆದ ನಿನ್ನ ಕೈಯಿಂದಲೇ ವರಣಮಾಲಿಕೆಯನ್ನು ಕಟ್ಟಿಸಿ ತರಬೇಕೆಂದು ಈ ಬಿಡು ಹೂಗಳನ್ನು ಕಳುಹಿಸಿಕೊಟ್ಟಿರುವಳು! ತೆಗೆದುಕೋ! ಇದನ್ನು ಕಟ್ಟಿಕೊಡು!

ವಾಸವದತ್ತೆ—ಯಾರಿಗಾಗಿ ಈಗ ಮಾಲೆಯನ್ನು ಕಟ್ಟಬೇಕು?

ಚೇಟಿ—ನಮ್ಮ ರಾಜಕುಮಾರಿ ಪದ್ಮಾವತಿಗಾಗಿ!

ವಾಸವದತ್ತೆ—(ಸ್ವಗತಂ) ಏನಿದು! ನಾನೂ ಇದನ್ನು ಮಾಡಬೇಕಾಗಿ ಬಂತೇ? ಹಾ! ಮುಖ್ಯವಾಗಿ ನನ್ನಲ್ಲಿ ಯಾವ ದೇವತೆಗಳಿಗೂ ಸ್ವಲ್ಪವೂ ಕನಿಕರವಿಲ್ಲ.

ಚೇಟಿ—ಆರ್ಯೆ! ಬೇಗನೆ ಕಟ್ಟಿಕೊಡು! ಬೇರೆ ಕೆಲಸವನ್ನು ಚಿಂತಿಸುತ್ತ ಕುಳಿತಿರುವುದಕ್ಕೆ ಇದು ಸಮಯವಲ್ಲ! ಈಗಾಗಲೇ ರತ್ನಖಚಿತವಾದ ಸ್ನಾನಶಾಲೆಯಲ್ಲಿ ವರನಿಗೆ ಮಂಗಳಸ್ನಾನವು ನಡೆಯುತ್ತಿರುವುದು, ಮಾಲೆಯು ಸಿದ್ಧವಾಗಲಿ! ಹೊತ್ತು ಮೀರುವುದು!

ವಾಸವದತ್ತೆ—(ಸ್ವಗತಂ) ಇನ್ನು ಚಿಂತಿಸತಕ್ಕುದೇನಿದೆ? ಅಥವಾ ಚಿಂತಿಸಿ ತಾನೆ ಫಲವೇನು? (ಪ್ರಕಾಶಂ) ಸಖಿ! ನೀನು ವರನನ್ನು ನೋಡಿದೆಯಾ?

ಚೇಟಿ—ಹೌದು! ನೋಡಿಬಂದೆನು. ರಾಜಕುಮಾರಿಯಲ್ಲಿ ನನಗಿರತಕ್ಕ ಸ್ನೇಹವೂ, ಈ ವಿಷಯದಲ್ಲಿ ನಮ್ಮಂತವರಿಗೆ ಸಹಜವಾಗಿರತಕ್ಕ ಕುತೂಹಲವೂ, ನಮ್ಮನ್ನು ಸುಮ್ಮನೆ ಇರಿಸುವುದೇ?

ವಾಸವದತ್ತೆ—ವರನು ಹೇಗಿರುವನು?

ಚೇಟಿ—ಅಮ್ಮಾ! ಕೇಳಬೇಕೆ? ಅಂತವನನ್ನು ನಾವು ಇದುವರೆಗೆ ಹಿಂದೆ ಯಾವಾಗಲೂ ನೋಡಿದುದೇ ಇಲ್ಲ.

ವಾಸವದತ್ತೆ—ಸಖಿ! ಹೇಳು! ಹೇಳು! ನೋಡುವುದಕ್ಕೆ ಚೆನ್ನಾಗಿರುವನೆ?

ಚೇಟಿ—ಅಮ್ಮಾ! ಅವನನ್ನು ಧನುರ್ಬಾಣಗಳಿಲ್ಲದ ಕಾಮದೇವನೆಂದೇ ಹೇಳಬಹುದು!

ವಾಸವದತ್ತೆ—ಇಷ್ಟೆ ಸಾಕು! ಬಿಡು?

ಚೇಟಿ—ಏಕಮ್ಮಾ! ಅದೇಕೆ ಅಷ್ಟರಲ್ಲಿಯೇ ಸಾಕೆಂದು ನನ್ನನ್ನು ತಡೆಯುವೆ?

ವಾಸವದತ್ತೆ—ಬೇರೇನೂ ಇಲ್ಲ. ಪರಪುರುಷರ ವರ್ಣನೆಯನ್ನು ಕೇಳುತ್ತಿರುವುದು ನಮಗೆ ಉಚಿತವಲ್ಲ!

ಚೇಟಿ—ಹಾಗಿದ್ದರೆ ಇನ್ನು ನೀನು ಬೇಗನೆ ಈ ಮಾಲೆಯನ್ನು ಕಟ್ಟಿಕೊಡುವೆಯಷ್ಟೆ?

ವಾಸವದತ್ತೆ—ಇದೋ! ಈಗಲೇ ಕಟ್ಟಿಕೊಡುವೆನು. ಎಲ್ಲಿ! ಹೂಗಳನ್ನು ಇಲ್ಲಿಡು.

ಚೇಟಿ—ಇದೋ! ಇಟ್ಟಿರುವೆನು.

ವಾಸವದತ್ತೆ—(ಪಕ್ಕದಲ್ಲಿ ಕುಳಿತು ಹೂಗಳನ್ನು ಚೆನ್ನಾಗಿ ನೋಡಿ) ಸಖಿ! ಇದೇನು? ಇದರಲ್ಲಿ ಕಾಣುವ ಈ ಮೂಲಿಕೆ ಯಾವುದು?

ಚೇಟಿ—ಇದನ್ನು "ಅವಿಧವಾಕರಣ" ವೆಂದು ಹೇಳುವರು. ಇದಿದ್ದರೆ ಸ್ತ್ರೀಯರಿಗೆ ವೈಧವ್ಯವು ತಪ್ಪುವುದಂತೆ!

ವಾಸವದತ್ತೆ—(ಸ್ವಗತಂ) ಹಾಗಿದ್ದರೆ ಇದನ್ನು ಹೆಚ್ಚಾಗಿ ಸೇರಿಸಿ ಕಟ್ಟಬೇಕಾದುದು ಆವಶ್ಯಕವು. ಇದರಿಂದ ಪದ್ಮಾವತಿಗೂ, ನನಗೂ ಕ್ಷೇಮವುಂಟು. (ಪ್ರಕಾಶಂ) ಸಖಿ! ಮತ್ತೊಂದು ಜಾತಿಯ ಮೂಲಿಕೆಯಿರುವುದಲ್ಲಾ! ಇದಾವುದು?

ಚೇಟಿ—ಇದನ್ನು "ಸಪತ್ನೀಮರ್ದನ" ವೆಂದು ಹೇಳುವರು. ಇದು ಸವತಿಯರನ್ನು ನಿಗ್ರಹಿಸುವ ಶಕ್ತಿಯುಳ್ಳದಂತೆ!

ವಾಸವದತ್ತೆ—ಹಾಗಿದ್ದರೆ ಇದೇನೂ ಬೇಡ! ಇದನ್ನು ನಾನು ಮಾಲೆಗೆ ಸೇರಿಸುವುದಿಲ್ಲ.

ಚೇಟಿ—ಏಕೆ ?

ವಾಸವದತ್ತೆ—ವರನಿಗೆ ಬೇರೆ ಹೆಂಡಿತಿಯಿದ್ದರಲ್ಲವೇ ಈ ಮೂಲಿಕೆಗೆ ಪ್ರಯೋಜನವುಂಟು. ರಾಜನ ಮೊದಲನೇ ಹೆಂಡತಿಯು ಆಗಲೇ ತೀರಿಹೋಗಿರುವಳಲ್ಲವೇ ?

(ಮತ್ತೊಬ್ಬ ಚೇಟಿಯು ಪ್ರವೇಶಿಸುವಳು)

ಚೇಟಿ—ಅಮ್ಮಾ, ತ್ವರೆಮಾಡು ! ತ್ವರೆಮಾಡು ! ಆಗಲೇ ಸುಮಂಗಲಿಯರು ವರನನ್ನು ವಿವಾಹಮಂಗಳಗೃಹಕ್ಕೆ ಕರೆತರುತ್ತಿರುವರು. ಮಾಲಿಕೆಯೆಲ್ಲಿ ?

ವಾಸವದತ್ತೆ—ಆಗಲೇ ಹೇಳಿದೆನಲ್ಲವೆ ? ಇದನ್ನು ತೆಗೆದುಕೊಂಡುಹೋಗೆಂದು.

ಚೇಟಿ—ಒಳ್ಳೆಯದು ! ಆರ್ಯೆ ! ಇನ್ನು ನಾವು ಹೋಗಿಬರುವೆವು.

(ಇಬ್ಬರೂ ಹೋಗುವರು)

ವಾಸವದತ್ತೆ—ಹೊರಟೇಹೋದಳೆ ? ಆಹಾ ! ಏನೀ ವಿಪರೀತವು ? ಆರ್ಯಪುತ್ರನು ಈಗ ನನಗೆ ಪರಕೀಯನಾದನಲ್ಲವೆ ? ಹಾಸಿಗೆಯಲ್ಲಿ ಬಿದ್ದುಕೊಂಡು ಸ್ವಲ್ಪ ದುಃಖಸಮಾಧಾನವನ್ನು ಮಾಡಿಕೊಳ್ಳುವೆನು.— ನಿದ್ರೆಯಾದರೂ ಬರುವುದಾದರೆ !

(ಹೋಗುವಳು)

ಇದು

ತೃತೀಯಾಂಕಂ

— ಚ ತು ರ್ಥಾ ೦ ಕ ೦ —

(ವಿದೂಷಕನು ಪ್ರವೇಶಿಸುವನು)

ವಿದೂ—(ಹರ್ಷದೊಡನೆ) ಭಲೆ ! ಭಲೆ ! ಅದೃಷ್ಟವಶದಿಂದ ನಮ್ಮ ಮಿತ್ರನಾದ ವತ್ಸರಾಜನಿಗೆ ಅನುರೂಪಳೂ, ಇಷ್ಟಳೂ ಆದ ಕನ್ಯೆಯು ದೊರೆತು, ಅವನ ವಿವಾಹಮಹೋತ್ಸವದ ಸಂಭ್ರಮಗಳನ್ನೆಲ್ಲಾ ಕಣ್ಣಾರೆ ನೋಡಿ ಆನಂದಿಸುವ ಭಾಗ್ಯವು ನನಗೆ ಲಭಿಸಿತು. ಆಹಾ ! ಅಂತಹ ಮಹಾನರ್ಥವೆಂಬ ಪ್ರವಾಹದ ಸುಳಿಯಲ್ಲಿ ಮುಳುಗಿಯೇ ಹೋಗಿದ್ದ ನಾವು, ತಿರುಗಿ ಹೀಗೆ ಮೇಲೆದ್ದು ಬರುವೆವೆಂದೂ, ಮತ್ತೆ ನಮಗೆ ಈ ಅರಮನೆಯ ಉಪ್ಪರಿಗೆಗಳಲ್ಲಿ ವಾಸವೂ, ಅಂತಃಪುರದ ಬಾವಿಗಳಲ್ಲಿ ಸ್ನಾನವೂ, ಒಳ್ಳೇ ರುಚಿರುಚಿಯಾಗಿಯೂ, ಬಾಯಿಗೆ ಮೃದುವಾಗಿಯೂ ಇರುವ ಕಡುಬು ಮುಂತಾದ ಭಕ್ಷ್ಯಗಳ ಯಥೇಚ್ಛ ಭೋಜನವೂ ಲಭಿಸುವುದೆಂದು ಯಾರು ತಾನೇ ಕಂಡಿದ್ದರು ? ಮುಖ್ಯವಾಗಿ ಈಗ ನಾನು ಅಪ್ಸರಸಿಯರಿಲ್ಲದ ಉತ್ತರಕುರು (ಸ್ವರ್ಗ) ವಾಸವನ್ನೇ ಅನುಭವಿಸುತ್ತಿರುವೆನು. ಆದರೆ ಈಗ ನನಗೆ ಒಂದು ಮಾತ್ರ ದೊಡ್ಡ ಕೊರತೆಯಿದೆ ! ಆಹಾರವು ಸರಿಯಾಗಿ ಜೀರ್ಣವಾಗುವುದಿಲ್ಲ ! ಮೆತ್ತಗೆ ಹಾಸಿದ ಹಾಸುಗೆಯಲ್ಲಿ ಮಲಗಿದರೂ ಕಣ್ಣಿಗೆ ನಿದ್ರೆ ಹತ್ತುವುದಿಲ್ಲ ! ಅಜೀರ್ಣವಾತವು ಅಂಗಾಂಗದಲ್ಲಿ ಕೀಲು ಕೀಲುಗಳನ್ನೆಲ್ಲಾ ವ್ಯಾಪಿಸಿದಂತಿದೆ. ಏನು ಮಾಡಲಿ ! ಛೀ ! ಹೀಗೆ ಅಜೀರ್ಣಕ್ಕೆ ಹೆದರಿ ಬಾಯಿಗೆ ಬೇಕಾದ ಆಹಾರಪದಾರ್ಥಗಳನ್ನು ಪುಷ್ಕಲವಾಗಿ ತಿನ್ನುವುದಕ್ಕಿಲ್ಲದೆ, ಬಾಯಿಕಟ್ಟಿ ಬದುಕುವ ಈ ಬಾಳು ಸುಖವಲ್ಲ !

(ಚೇಟಿಯು ಪ್ರವೇಶಿಸುವಳು)

ಚೇಟಿ—ಆರ್ಯವಸಂತಕನೆಲ್ಲಿ ಹೋಗಿರುವನೋ ಕಾಣೆನಲ್ಲಾ ! (ಸುತ್ತನೋಡಿ) ಓಹೋ ! ಇಲ್ಲಿಯೇ ಇರುವನು. ಆರ್ಯವಸಂತಕ ! ಎಷ್ಟು ಹೊತ್ತಿನಿಂದ ನಿನ್ನನ್ನು ಹುಡುಕುವುದು ?

ವಿದೂ—ಏಕಪ್ಪ ? ನನ್ನನ್ನು ನೀನು ಹುಡುಕಬೇಕಾದ ಕಾರ್ಯವೇನು ?

ಚೇಟಿ—ನಮ್ಮ ಮಹಾರಾಣಿಯು ಅಳಿಯನಿಗೆ ಸ್ನಾನವಾಯಿತೋ ! ಇಲ್ಲವೋ ! ತಿಳಿದು ಬಾ ಎಂದು ಹೇಳಿ ಕಳುಹಿಸಿರುವಳು.

ವಿದೂ—ಏತಕ್ಕಾಗಿ ಅವಳು ಹಾಗೆ ಕೇಳಿರುವಳು ?

ಚೇಟಿ—ಬೇರೇನಿದೆ ? ಅವನ ದೇಹಾಲಂಕಾರಣಾರ್ಥವಾಗಿ ಗಂಧಪುಷ್ಪಾದಿಗಳನ್ನು ಕಳುಹಿಸಿಕೊಡುವುದಕ್ಕೆ !

ವಿದೂ—ಹಾಗಿದ್ದರೆ ರಾಜನಿಗೆ ಸ್ನಾನವಾಯಿತೆಂದು ತಿಳಿಸು ಹೋಗು ! ಹೂವೋ, ಗಂಧವೋ ಯಾವುದಿದ್ದರೆ ಅವೆಲ್ಲವನ್ನೂ ತಂದೊಪ್ಪಿಸು. ಆದರೆ ಭೋಜನವನ್ನು ಮಾತ್ರ ತರಬೇಡ !

ಚೇಟಿ—ಅದೇಕೆ ? ಭೋಜನವನ್ನು ಮಾತ್ರ ತರಬಾರದೆಂಬುದೇಕೆ ?

ವಿದೂ—ಭದ್ರೆ ! ನಾನೇನು ಹೇಳಲಿ ? ಮಂದಭಾಗ್ಯನಾದ ನನಗೆ ಅಜೀರ್ಣವಾಗಿದೆ ! ಅದರಮೇಲೆ ಕೋಗಿಲೆಗಳ ಕಣ್ಣುಗಳಂತೆ ಹೊಟ್ಟೆಯು ಬಹಳವಾಗಿ ತೊಳಸುತ್ತಿದೆ.

ಚೇಟಿ—ನಿನಗೆ ಹಾಗೆಯೇ ಆಗಬೇಕು. ಯಾವಾಗಲೂ ಹಾಗೆಯೇ ಇರು.

ವಿದೂ—ಇನ್ನು ನೀನು ಹೋಗು ! ನಾನೂ ರಾಜನ ಬಳಿಗೆ ಹೋಗುವೆನು.

(ಹೋಗುವರು)

ಇದು

ಪ್ರವೇಶಕವು

(ಪದ್ಮಾವತಿಯು ತನ್ನ ಚೇಟಿಯರೊಡನೆಯೂ, ಅವಂತಿಕನ್ಯಾವೇಷವುಳ್ಳ ವಾಸವದತ್ತೆಯೊಡನೆಯೂ ಪ್ರವೇಶಿಸುವಳು)

ಚೇಟಿ—ರಾಜಪುತ್ರಿ ! ನೀನು ಈಗ ಈ ಉದ್ಯಾನವನಕ್ಕೆ ಬಂದ ಕಾರಣವು ಏನೋ ತಿಳಿಯಲಿಲ್ಲವಲ್ಲಾ !

ಪದ್ಮಾವತಿ—ನಮ್ಮ ತೋಟದಲ್ಲಿದ್ದ ಶೇಫಾಲಿಕಾಲತೆಯು ಪುಷ್ಪಿಸಿತೋ ಇಲ್ಲವೋ ನೋಡಬೇಕೆಂದು ಬಂದೆನು.

ಚೇಟಿ—ರಾಜಪುತ್ರಿ ! ಅವು ಚೆನ್ನಾಗಿ ಪುಷ್ಪಿಸಿ, ನಡುನಡುವೆ ಹವಳಗಳನ್ನು ಪೋಣಿಸಿದ ಮುತ್ತಿನ ಹಾರದಂತೆ ಕಾಣಿಸುತ್ತಿವೆ.

ಪದ್ಮಾವತಿ—ಹಾಗಿದ್ದರೆ ತಡವೇಕೆ ? ಅವುಗಳನ್ನು ಬೇಗನೆ ಕುಯ್ದು ತರಬಾರದೇ ?

ಚೇಟಿ—ಇದೋ ಈಗಲೇ ಕುಯ್ದು ತರುವೆನು. ಸ್ವಲ್ಪಹೊತ್ತು ಈ ಶಿಲಾತಲದ ಮೇಲೆ ಕುಳಿತಿರು !

ಪದ್ಮಾವತಿ—ಪೂಜ್ಯಳೆ ! ಇಲ್ಲಿ ಕುಳಿತು ಸ್ವಲ್ಪ ವಿಶ್ರಮಿಸಿಕೊಳ್ಳುವೆವೆ ?

ವಾಸವದತ್ತೆ—ಆಗಲಿ.

(ಇಬ್ಬರೂ ಕುಳ್ಳಿರುವರು).

ಚೇಟಿ—(ಹೂಗಳನ್ನು ಕುಯ್ದು ತಂದು) ರಾಜಕುಮಾರೀ ! ಇದೋ ! ಮಣಿಶಿಲೆಯ ಹರಳುಗಳಂತೆ ನನ್ನ ಕೈಯಲ್ಲಿರುವ ಈ ಹೂಗಳನ್ನು ನೋಡು.

ಪದ್ಮಾವತಿ—ಆಹಾ ! ಇವು ಎಷ್ಟು ವಿಚಿತ್ರವಾಗಿರುವುವು ! ಆರ್ಯೆ ! ನೋಡಿದೆಯಾ ಈ ಹೂಗಳನ್ನು ?

ವಾಸವದತ್ತೆ—(ನೋಡಿ) ಆಹಾ ! ಇವು ಎಷ್ಟು ಮನೋಹರವಾಗಿರುವುವು !

ಚೇಟಿ—ರಾಜಕುಮಾರೀ ! ನಿನಗಾಗಿ ಇನ್ನಷ್ಟು ಹೂಗಳನ್ನು ಕುಯ್ದು ತಂದುಕೊಡಲೇನು ?

ಪದ್ಮಾವತಿ—ಸಖಿ ! ಬೇಡ ! ಇಷ್ಟೇ ಸಾಕು ! ಇನ್ನು ಆ ಗಿಡದಲ್ಲಿ ಹೂಗಳನ್ನು ಕುಯ್ಯಬೇಡ !

ವಾಸವದತ್ತೆ—ಸಖಿ ! ಅದೇಕೆ ಬೇಡವೆನ್ನುವೆ ?

ಪದ್ಮಾವತಿ—ಆರ್ಯೆ ! ನನ್ನ ಪ್ರಿಯನು ಇಲ್ಲಿಗೆ ಬಂದಾಗ ಆ ಪುಷ್ಪಸಮೃದ್ಧಿಯನ್ನು ನೋಡಿ ಸಂತೋಷಪಟ್ಟರೆ ಅದೇ ನನಗೆ ಒಂದು ದೊಡ್ಡ ಬಹುಮಾನವಲ್ಲವೆ ?

ವಾಸವದತ್ತೆ—ಸಖೀ ! ಈಗಾಗಲೇ ನಿನಗೆ ನಿನ್ನ ಕಾಂತನಲ್ಲಿ ಅಷ್ಟೊಂದು ಪ್ರೇಮವಿಶೇಷವೇ ?

ಪದ್ಮಾವತಿ—ಆರ್ಯೆ ! ಅದೇನೋ ಕಾಣೆನು. ಅವನನ್ನು ಸ್ವಲ್ಪಹೊತ್ತು ಕಾಣದಿದ್ದರೂ ನನ್ನ ಮನಸ್ಸು ತಪಿಸುವುದು !

ವಾಸವದತ್ತೆ—(ಸ್ವಗತಂ) ಇವಳೇ ಹೀಗೆ ಹೇಳಬೇಕಾದರೆ, ಈಗ ನಾನು ನಡೆಸುತ್ತಿರುವುದು ಅತಿದುಷ್ಕರವಾದ ಕಾರ್ಯವಲ್ಲವೆ ?

ಚೇಟಿ—ರಾಜಪುತ್ರಿಯು ತನ್ನ ಕಾಂತನು ತನಗೆ ಅತ್ಯಂತ ಪ್ರಿಯನೆಂದು ಹೇಳುವುದು ಅವಳ ಗುಣಕ್ಕೆ ಉಚಿತವೇ ಅಲ್ಲವೇ ?

ಪದ್ಮಾವತಿ—ಆದರೆ ನನಗೆ ಮಾತ್ರ ಒಂದು ಸಂದೇಹವುಂಟು.

ವಾಸವದತ್ತೆ—ಏನದು ? ಸಂದೇಹವೇನು ?

ಪದ್ಮಾವತಿ—ಈಗ ನನ್ನ ಪ್ರಿಯನು ನನ್ನ ವಿಷಯದಲ್ಲಿ ಹೇಗಿರುವನೋ ಹಾಗೆಯೇ ಮೊದಲು ಪ್ರಥಮಭಾರ್ಯೆಯಾದ ವಾಸವದತ್ತೆಯ ವಿಷಯದಲ್ಲಿಯೂ ಪ್ರೀತಿಯನ್ನು ತೋರಿಸುತ್ತಿದ್ದಿರಬಹುದೆ ?

ವಾಸವದತ್ತೆ—ಇದಕ್ಕಿಂತಲೂ ಹೆಚ್ಚಾಗಿ ಅವಳನ್ನು ಪ್ರೀತಿಸುತ್ತಿದ್ದನು.

ಪದ್ಮಾವತಿ—ಅದನ್ನು ನೀನು ಹೇಗೆ ಬಲ್ಲೆ ?

ವಾಸವದತ್ತೆ—(ಸ್ವಗತಂ) ಅಯ್ಯೋ ! ಈಗೇನುಮಾಡಲಿ ! ಕಾಂತನಲ್ಲಿರುವ ಪಕ್ಷಪಾತದಿಂದ ನಾನು ನನ್ನ ಸ್ಥಿತಿಯನ್ನು ಯೋಚಿಸದೆ ಹದ್ದುಮೀರಿ ಮಾತಾಡಿಬಿಟ್ಟೆನಲ್ಲಾ ! ಇರಲಿ ! ಈಗ ಹೀಗೆಂದು ಹೇಳುವೆನು, (ಪ್ರಕಾಶಂ) ಸಖಿ ! ಈಗಲೂ ರಾಜನು ಪ್ರಥಮ ಭಾರ್ಯೆಯನ್ನು ಕುರಿತು ದುಃಖಿಸುವುದರಿಂದಲೇ ಊಹಿಸಬಹುದಲ್ಲವೆ ? ಪ್ರೇಮವು ಅಲ್ಪವಾಗಿದ್ದರೆ ಅವಳಿಗಾಗಿ ಇಷ್ಟೊಂದು ದುಃಖಿಸುತ್ತಿದ್ದನೇನು ?

ಪದ್ಮಾವತಿ—ಸರಿಯೆ ! ಇರಬಹುದು !

ಚೇಟಿ—ರಾಜಪುತ್ರೀ ! ಈಗ ನೀನೂ ನಿನ್ನ ಕಾಂತನನ್ನು "ನನಗೂ ವೀಣೆಯನ್ನು ಕಲಿಸಿಕೊಡು" ಎಂದು ಮೆಲ್ಲಗೆ ಕೇಳಬಾರದೇಕೆ ?

ಪದ್ಮಾವತಿ—ಸಖಿ ! ನಾನು ಆಗಲೇ ಕೇಳಿದೆನು.

ವಾಸವದತ್ತೆ—ಅದಕ್ಕವನೇನು ಹೇಳಿದನು ?

ಪದ್ಮಾವತಿ—ಮಾತಾಡದೆ, ಸ್ವಲ್ಪ ದೊಡ್ಡದಾಗಿ ನಿಟ್ಟುಸಿರನ್ನು ಮಾತ್ರ ಬಿಟ್ಟು ಸುಮ್ಮನಿದ್ದನು.

ವಾಸವದತ್ತೆ—ಅದಕ್ಕೇನು ಕಾರಣವಿರಬಹುದೆಂದು ನೀನು ಊಹಿಸುವೆ ?

ಪದ್ಮಾವತಿ—ಈಗ ಅವನಿಗೆ ಪೂಜ್ಯಳಾದ ವಾಸವದತ್ತಾದೇವಿಯ ಗುಣಗಳು ನೆನಪಿಗೆ ಬರಲು, ಅದರಿಂದ ದುಃಖಾವಿಷ್ಟನಾಗಿರಬಹುದು. ಆ ವಿಚಾರವನ್ನು ಕುರಿತು ನನ್ನ ಮುಂದೆ ಪ್ರಸ್ತಾಪಿಸುವುದು ಸರಿಯಲ್ಲ ವೆಂದು ತಿಳಿದು ಹೇಗೋ ಆ ದುಃಖವನ್ನು ತನ್ನಲ್ಲಿಯೇ ಅಡಗಿಸಿ ಕೊಂಡು ಮಾತಾಡದೆ ಸುಮ್ಮನಿದ್ದನೆಂದು ನಾನು ಊಹಿಸಿರುವೆನು.

ವಾಸವದತ್ತೆ—(ಸ್ವಗತಂ) ಇದು ನಿಜವಾಗಿದ್ದರೆ ನಾನಲ್ಲವೇ ಧನ್ಯಳು !

ವಿದೂ—ಹಿ ! ಹಿ ! ಹಿ ! ಹಿ ! ಸಮೃದ್ಧವಾಗಿ ಉದುರಿಬಿದ್ದಿರುವ ಬಂದು ಗೆಯ ಹೂಗಳಿಂದ ಈ ವನಭೂಮಿಯು ಎಷ್ಟು ವಿಚಿತ್ರವಾಗಿ ಕಾಣುತ್ತಿರುವುದು ! ಮಹಾರಾಜನೆ ಇತ್ತ ದಯಮಾಡಿಸಬೇಕು !

ರಾಜಂ—ಮಿತ್ರವಸಂತಕಾ ! ಇದೋ ! ಬರುತ್ತಲೇ ಇರುವೆನಷ್ಟೆ ! ಅದಿರಲಿ ಮಿತ್ರನೆ !

ಅಂದಾನುಜ್ಞಯಿಸೀಪುರಕ್ಕೆ ಪಯಣಂಗೆಯ್ವಲ್ಲಿ ಭೂಭೃತ್ಸುತಾ ।
ಸೌಂದರ್ಯಾಹೃತಚಿತ್ತನಾದ ಪದದೊಳ್ ತನ್ನೈದುಬಾಣಂಗಳಿಂ ॥
ಕಂದರ್ಪಂ ಬಿಡದೆಚ್ಚುದೆನ್ನೆರ್ದೆಯೊಳಿನ್ನುಂ ನಾಂಟಿರಲ್ಕೀಗಳ ।
ನ್ನೊಂದಂಬಂ ಮಗುಳ್ದೆಚ್ಚನೆಂತೊದವಿತೋ ಪಂಚೇಷುಗಾರಂಬುಗಳ್ ॥

ವಿದೂ—ಪೂಜ್ಯಳಾದ ಪದ್ಮಾವತಿಯು ಈಗ ಎಲ್ಲಿರಬಹುದು ? ಒಂದುವೇಳೆ ಲತಾಮಂಟಪಕ್ಕೆ ಹೋಗಿರಬಹುದು. ಅಲ್ಲದಿದ್ದರೆ ಅಲ್ಲಲ್ಲಿ ವಿಶೇಷ ವಾಗಿ ಉದುರಿ ಬಿದ್ದ ಬಂದುಗೆ ಹೂಗಳಿಂದ ಹುಲಿಯ ಚರ್ಮವನ್ನು ಹಾಸಿದಂತೆ ಕಾಣಿಸುವ "ಪರ್ವತ ತಿಲಕ" ವೆಂಬ ಕಲ್ಲು ಬಂಡೆಯ ಬಳಿಗೆ ಹೋಗಿರಬಹುದು ! ಅಥವಾ ಬಹಳ ಒಗರು ವಾಸನೆಯುಳ್ಳ

ಏಳಿಲೆ ಬಾಳೆಯ ತೋಟಕ್ಕೆ ಹೋಗಿದ್ದರೂ ಇರಬಹುದು. ಅದೂ ಇಲ್ಲದಿದ್ದರೆ ನಾನಾ ಜಾತಿಯ ಮೃಗಪಕ್ಷಿಗಳ ಆಕೃತಿಗಳಿಂದ ಚಿತ್ರಿಸಲ್ಪಟ್ಟಿರುವ ''ದಾರುಪರ್ವತ'' ವೆಂಬ ಕೃತ್ರಿಮವಾದ ಮರದ ಗುಡ್ಡದ ಮೇಲೆ ಏರಿ ಕುಳಿತಿರಬಹುದು. (ಮೇಲೆನೋಡಿ ಸಂತೋಷದಿಂದ) ಹಿ! ಹಿ! ಹಿ! ಹಿ! ಮಿತ್ರನೆ! ನೋಡು! ನೋಡು! ಅದೋ ಮೇಲೆ ನೋಡಿದೆಯಾ; ಶರತ್ಕಾಲ ನಿರ್ಮಲವಾದ ಆಕಾಶದಲ್ಲಿ ಉದ್ದಕ್ಕೆ ನೀಡಿದ ಬಲದೇವನ ಬಾಹುದಂಡದಂತೆ ದರ್ಶನೀಯವಾಗಿ ಈ ಸಾರಸಪಕ್ಷಿಗಳು ಸಾಲಾಗಿ ಹಾರುತ್ತಿರುವುವು ನೋಡು!

ರಾಜಂ—ಮಿತ್ರನೆ! ನಾನೂ ಅದನ್ನೇ ನೋಡುತ್ತಿರುವೆನು. ಕೇಳು—

ಸರಳಂ ದೀರ್ಘಮುಮುನ್ನತಾವನತಮುಂ ಸಪ್ತರ್ಷಿತಾರಾಳಿಯಂ |
ತಿರೆ ವಕ್ರಾಕೃತಿ ದಾರಿಯಂ ತಿರುಗುವಂದೀಸಾರಸಶ್ರೇಣಿ, ಮೈ ||
ಪರೆಯುಚ್ಚೈರ್ನಿರ್ದ್ದ ಫಣೀಂದ್ರಭೋಗಕೆಣೆವರ್ಪೀ ನಿರ್ಮಲಾಕಾಶದೊಳ್ |
ಕುರಿಪಿಟ್ಟರ್ದ್ಧ ವಿಭಾಗರೇಖೆಯಿದೆ ತಾನೆಂಬಂದದಿಂದೊಪ್ಪುಗುಂ || ೧೮ ||

ಚೇಟಿ—ರಾಜಕುಮಾರೀ! ನೋಡು! ನೋಡು! ನೈದಿಲೆ ಹೂವಿನಮಾಲಿಯಂತೆ ಮನೋಹರವಾದ ಈ ಸಾರಸಪಕ್ಷಿಗಳ ಸಾಲು ಯಥೇಚ್ಛವಾಗಿ ಹಾರಿಹೋಗುತ್ತಿರುವುದು! (ಮುಂದೆ ಹೋಗುತ್ತ) ಓಹೋ! ಮಹಾರಾಜನು!

ಪದ್ಮಾವತಿ—ಏನು? ಆರ್ಯಪುತ್ರನೆ! ಹೌದು! ಇಲ್ಲಿಯೇ ಬರುತ್ತಿರುವನು. ಆರ್ಯೆ! ನೀನಿರುವಾಗ, ನಾನು ಇಲ್ಲಿ ಆರ್ಯಪುತ್ರನನ್ನು ಕಾಣಿಸಿಕೊಳ್ಳುವುದು ಸರಿಯಲ್ಲ! ಆದುದರಿಂದ ನಿನಗಾಗಿ ನಾನೂ ಮರೆಸಿಕೊಳ್ಳುವೆನು. ಇದೋ! ಈ ಮಾಧವೀ ಮಂಟಪದೊಳಕ್ಕೆ ಹೋಗುವೆವೆ?

ವಾಸವದತ್ತೆ—ಸರಿ! ಹಾಗೆಯೇ ಆಗಲಿ. (ಇಬ್ಬರೂ ಹೋಗುವರು.)

ವಿದೂ—ಪೂಜ್ಯಳಾದ ಪದ್ಮಾವತಿಯು ಇಲ್ಲಿಗೆ ಬಂದು ಹೋಗಿರಬಹುದು.

ರಾಜಂ—ನೀನು ಹೇಗೆ ಬಲ್ಲೆ?

ವಿದೂ—ಇದೋ ? ಈ ಶೇಫಾಲಿಕಾಲತೆಯ ಕುಡಿಗಳನ್ನು ನೋಡು. ಇದರಲ್ಲಿ ಹೂಗಳನ್ನು ಕುಯ್ದುಂತಿದೆ.

ರಾಜಂ—ಆಹಾ ! ಏನೀಪುಷ್ಪಗಳ ವೈಚಿತ್ರ್ಯವು ! ವಸಂತಕ !

ವಾಸವದತ್ತೆ—(ಸ್ವಗತಂ) ಈ ವಸಂತಕ ಶಬ್ದೋಚ್ಚಾರಣದಿಂದ ಈಗ ನಾನು ತಿರುಗಿ ಉಜ್ಜಯಿನಿಯಲ್ಲಿಯೇ ಇರುವ ಹಾಗೆ ಭಾವಿಸುವೆನು.

ರಾಜಂ—ವಸಂತಕ ! ಈ ಶಿಲಾತಲದಲ್ಲಿಯೇ ಕುಳಿತು ಪದ್ಮಾವತೀದೇವಿಯನ್ನು ನಿರೀಕ್ಷಿಸುವೆವು.

ವಿದೂ—ಹಾಗೆಯೇ ಆಗಲಿ. (ಕುಳಿತು ಒಡನೆಯೇ ಮೇಲೆದ್ದು) ಅಬ್ಬಬ್ಬ ! ಈ ಶರತ್ಕಾಲದ ಬಿಸಿಲಿನ ತಾಪದಿಂದ ಕಲ್ಲು ಬಹಳವಾಗಿ ಕಾದಿರುವುದು. ಆದುದರಿಂದ ಇದೋ ಇಲ್ಲಿ ಕಾಣುವ ಮಾಧವೀ ಮಂಟಪವನ್ನು ಪ್ರವೇಶಿಸುವೆವು.

ರಾಜಂ—ಒಳ್ಳೆಯದು, ಮುಂದೆ ನಡೆ !

ವಿದೂ—ಸರಿ. ಹಾಗೆಯೇ ಆಗಲಿ. (ಇಬ್ಬರೂ ಮುಂದೆ ಹೋಗುವರು)

ಪದ್ಮಾವತಿ—ಅಯ್ಯೋ ! ಇನ್ನೇನು ಗತಿ ! ಈ ಆರ್ಯವಸಂತಕನು ಯಾವ ಭಾಗದಲ್ಲಿಯೂ ಸಿಕ್ಕನ್ನೇ ತಂದಿಡುವನಲ್ಲ ! ಈಗೇನು ಮಾಡುವುದು ?

ಚೇಟಿ—ರಾಜಕುಮಾರಿ ? ದುಂಬಿಗಳಿಂದ ತುಂಬಿ ತೂಗಾಡುತ್ತಿರುವ ಈ ಒಳ್ಳಿಯನ್ನು ಆಡಿಸಿ, ಭ್ರಮರಗಳನ್ನೆಬ್ಬಿಸುವುದರಿಂದ ಈಗ ರಾಜನು ಒಳಕ್ಕೆ ಬಾರದಂತೆ ಮಾಡಿಬಿಡಲೇನು ?

ಪದ್ಮಾವತಿ—ಸರಿ ! ಹಾಗೆಯೇ ಮಾಡು ಒಳ್ಳೆಯ ಉಪಾಯವೇ.

ವಿದೂ—ಅಯ್ಯೋ ! ಕೆಟ್ಟೆನು ! ಮಿತ್ರನೇ, ನಿಲ್ಲು ! ನಿಲ್ಲು !

ರಾಜಂ—ಏಕೆ ?

ವಿದೂ—ಈ ಹಾಳು ದುಂಬಿಗಳು – ತೊತ್ತಿನ ಮಕ್ಕಳು – ಮೇಲೆ ಬಿದ್ದು ಪೀಡಿಸುವುವು !

ರಾಜಂ—ಮಿತ್ರನೆ! ಇರಲಿ! ಹೆದರಬೇಡ! ಹೆದರಬೇಡ! ಈಗ ನಾವು ಈ ದುಂಬಿಗಳನ್ನು ಹೆದರಿಸಿ ಓಡಿಸುವುದು ಸರಿಯಲ್ಲ! ನೋಡು-

ಮದಿಸಿ ಮಧುಪಾನದಿಂ ಮೋ |
ಹದಿನಪ್ಪಿದ ಸತಿಯರೊಡನೆ ನಲಿವಳಿಗಳ್ ನಾಂ ||
ಪದಮಿಡಲಂಜುತುಮೆಮ್ಮಂ |
ದದೆ ನಿಜದಯಿತಾವಿಯೋಗಮೊಂದುಗುಮಲ್ತೆ! || ೧೯ ||

ಆದುದರಿಂದ ನಾವು ಇಲ್ಲಿಯೇ ಹೊರಗೆ ನಿಲ್ಲುವೆವು.

ವಿದೂ—ಆಗಲಿ. [ಇಬ್ಬರೂ ಕುಳ್ಳಿರುವರು]

ಚೇಟಿ—ರಾಜಪುತ್ರಿ! ಈಗ ನಾವು ಒಳಗೆ ಸಿಕ್ಕಿಬಿದ್ದೆವಲ್ಲಾ! ಏನು ಮಾಡುವುದು ?

ಪದ್ಮಾವತಿ—ಅದೃಷ್ಟವಶದಿಂದ ಆರ್ಯಪುತ್ರನು (ಒಳಕ್ಕೆ ಬಾರದೆ) ಅಲ್ಲಿಯೇ ಕುಳಿತನು.

ವಾಸವದತ್ತೆ—(ರಾಜನನ್ನು ಚೆನ್ನಾಗಿ ದೃಷ್ಟಿಸಿನೋಡಿ-ಸ್ವಗತಂ) ದೈವಯೋಗದಿಂದ ಆರ್ಯಪುತ್ರನ ದೇಹವು ಸ್ವಲ್ಪವಾದರೂ ಕಂದಿಲ್ಲದೆ ಸಹಜಸ್ಥಿತಿಯಲ್ಲಿರುವುದು.

ಚೇಟಿ—ರಾಜಪುತ್ರೀ! ನೋಡು! ನೋಡು! ಇದೇನು! ಈ ಪೂಜ್ಯಳು ಕಣ್ಣೀರು ಬಿಡುತ್ತಿರುವಳು. ಕಾರಣವೇನಿರಬಹುದು!

ವಾಸವದತ್ತೆ—ಸಖಿ! ಮತ್ತೇನೂ ಇಲ್ಲ. ಈ ಹಾಳು ದುಂಬಿಗಳ ಹಾರಾಟದ ಸಂಭ್ರಮದಿಂದ ಕಾಶಪುಷ್ಪಗಳು ಕದಲಿ, ಅವುಗಳ ಪರಾಗಗಳು ನನ್ನ ಕಣ್ಣಿಗೆ ಬಿದ್ದುದರಿಂದ ಕಣ್ಣೀರು ಬಂದಿತು.

ಪದ್ಮಾವತಿ—ಇರಬಹುದು.

ವಿದೂ—ಈಗ ಈ ಉದ್ಯಾನವನದಲ್ಲಿ ಬೇರೆ ಯಾರೂ ಇಲ್ಲ. ರಹಸ್ಯವಾಗಿ ನಿನ್ನನ್ನು ಕೇಳಬೇಕಾದ ಒಂದು ಸಂಗತಿಯುಂಟು. ಕೇಳಲೇ?

ರಾಜಂ—ಅದಕ್ಕೆ ತಡೆಯೇನು ? ಧಾರಾಳವಾಗಿ ಕೇಳಬಹುದು.

ವಿದೂ—ನಿನಗೆ ಯಾರಲ್ಲಿ ಹೆಚ್ಚಿನ ಪ್ರೀತಿ? ಆಗಿನ ವಾಸವದತ್ತೆಯಲ್ಲಿಯೋ? ಈಗಿನ ಪದ್ಮಾವತಿಯಲ್ಲಿಯೋ?

ರಾಜಂ—ನೀನು ಒಳ್ಳೇ ಧರ್ಮಸಂಕಟದಲ್ಲಿ ನನ್ನನ್ನು ತಂದು ಸಿಕ್ಕಿಸಿಬಿಡುವೆಯಲ್ಲ!

ಪದ್ಮಾವತಿ—ಸಖೀ! ರಾಜನು ಈಗ ಎಂತಹ ತೊಡರಿನಲ್ಲಿ ಸಿಕ್ಕಿಬಿದ್ದಿರುವನು ನೋಡು!

ವಾಸವದತ್ತೆ—(ಸ್ವಗತಂ) ಮಂದಭಾಗಿನಿಯಾದ ನಾನೂ ಇದೇ ಅವಸ್ಥೆಯಲ್ಲಿ ಸಿಕ್ಕಿರುವೆನು. ಆರ್ಯಪುತ್ರನು ಏನನ್ನುವನೋ!

ವಿದೂ—ಮಿತ್ರನೇ! ಸಂಕೋಚವೇಕೆ? ಮನಸ್ಸನ್ನು ಧಾರಾಳವಾಗಿ ಬಿಚ್ಚಿ ಹೇಳು; ಭಯಕ್ಕೆ ಕಾರಣವಿಲ್ಲ! ಒಬ್ಬಳಂತೂ ಆಗಲೇ ಮೃತಳಾದಳು! ಮತ್ತೊಬ್ಬಳೇನೋ ಇಲ್ಲಿಲ್ಲ.

ರಾಜಂ—ಇಲ್ಲ! ಇಲ್ಲ! ನಾನು ನಿನ್ನಲ್ಲಿ ಮಾತ್ರ ಖಂಡಿತವಾಗಿಯೂ ಹೇಳುವುದಿಲ್ಲ. ನೀನು ಬಹಳ ಬಾಯಾಳಿ!

ಪದ್ಮಾವತಿ—ಇನ್ನೇನು? ಇದರಿಂದಲೇ ಹೇಳಿದಂತಾಯಿತು!

ವಿದೂ—ಮಿತ್ರನೆ! ನನ್ನಾಣೆಗೂ ಬೇರೊಬ್ಬರೊಡನೆ ನಾನು ಬಾಯೆತ್ತುವುದಿಲ್ಲ. ಇದೋ! ನನ್ನ ನಾಲಗೆಯನ್ನು ಕಚ್ಚಿಕೊಂಡಿರುವೆನು.

ರಾಜಂ—ಹೇಳುವುದಕ್ಕೆ ನನಗೆ ಮನಸ್ಸಿಲ್ಲ.

ಪದ್ಮಾವತಿ—ಆಹಾ! ಇವನು ಎಷ್ಟು ಕಿರುಕುಳದ ಸ್ವಭಾವದವನು! ಇಷ್ಟರಿಂದಲೇ ಆರ್ಯಪುತ್ರನ ಹೃದಯವನ್ನು ತಿಳಿದುಕೊಳ್ಳಲಾರದೇ ಹೋದನೇ?

ವಿದೂ—ಮಹಾರಾಜನೆ! ನೀನು ನನಗೆ ಹೇಳುವುದಿಲ್ಲವಷ್ಟೆ? ಹಾಗಿದ್ದರೆ ಈ ಶಿಲಾತಲದಿಂದ ನೀನು ಮುಂದೆ ಒಂದು ಹೆಜ್ಜೆಯನ್ನೂ ಇಡಲಾರೆ. ಇಲ್ಲಿಯೇ ನಿನ್ನನ್ನು ತಡೆದುಬಿಡುವೆನು.

ರಾಜಂ—ಏನು? ಬಲಾತ್ಕಾರದಿಂದಲೇ?

ವಿದೂ—ಹೌದು ! ಬಲಾತ್ಕಾರದಿಂದ !

ರಾಜಂ—ಹಾಗಾದರೆ ನೋಡುವೆನು !

ವಿದೂ—ಮಿತ್ರನೇ ಪ್ರಸನ್ನನಾಗು ! ಪ್ರಸನ್ನನಾಗು ! ನೀನು ನಿಜವನ್ನು ಹೇಳದಿದ್ದರೆ ನಮ್ಮ ಸ್ನೇಹದಮೇಲಾಣೆ !

ರಾಜಂ—ಇನ್ನೇನು ಗತಿ ! ಹೇಳದೆ ವಿಧಿಯಿಲ್ಲ ! ಮಿತ್ರನೆ ಕೇಳು !

ಎನಗಭಿಮತೆ ಪದ್ಮಾವತಿ |
ಯನುಪಮಗುಣರೂಪವಿಭವದಿಂದಾದೊಡೆ ಮ ||
ನ್ಮನಮಂ ವಾಸವದತ್ತೆಯೊ |
ಳನುಲಗ್ನಮನೆಳೆಯಲಾಕೆಗಸದಳಮಲ್ತೆ || ೨೦ ||

ವಾಸವದತ್ತೆ—(ಸ್ವಗತಂ) ಒಳ್ಳೆಯದು ! ನನ್ನ ಕಷ್ಟಕ್ಕೆ ಬಹುಮಾನವು ಈಗ ಉಂಟು.

ಚೇಟಿ—ರಾಜಪುತ್ರಿ! ನೋಡಿದೆಯಾ ನಿನ್ನ ಕಾಂತನು ಎಷ್ಟು ನಿರ್ದಯನು?

ಪದ್ಮಾವತಿ—ಸಖಿ ! ಛಿ ! ಛಿ ! ಹಾಗೆಣಿಸಬೇಡ. ಈಗಲೂ ಆ ವಾಸವದತ್ತೆಯಲ್ಲಿ ಅಷ್ಟೊಂದು ಪ್ರೀತಿಯನ್ನಿಟ್ಟು, ಆಕೆಯ ಗುಣಗಳನ್ನು ಪ್ರಶಂಸೆ ಮಾಡುತ್ತಿರುವ ಆರ್ಯಪುತ್ರನನ್ನು ನಿರ್ದಯನನೆಂದು ಹೇಗೆ ಹೇಳಬಹುದು ? ಅವನೇನೋ ಬಹು ದಯಾಳುವೇ !

ಚೇಟಿ—ರಾಜಕುಮಾರೀ! ನಿನ್ನ ವಂಶಗೌರವಕ್ಕೆ ತಕ್ಕ ಮಾತನ್ನೇ ಆಡುವೆ!

ರಾಜಂ—ಮಿತ್ರಾ ! ನಾನೇನೋ ನನ್ನ ಅಂತರಂಗವನ್ನು ತಿಳಿಸಿಬಿಟ್ಟೆನು. ಈಗ ನೀನು ಹೇಳು. ನೀನು ಯಾರನ್ನು ಮೆಚ್ಚುವೆ ? ಆಗಿನ ವಾಸವದತ್ತೆಯನ್ನೇ ? ಈಗಿನ ಪದ್ಮಾವತಿಯನ್ನೇ ?

ಪದ್ಮಾವತಿ—ಓಹೋ ! ಈಗ ಆರ್ಯಪುತ್ರನು ವಸಂತಕನ ಹಾಗೆ ತಿರುಗಿಬಿಟ್ಟನು.

ವಿದೂ—ಮಿತ್ರನೆ! ನನ್ನ ಹರಟೆಯನ್ನು ಕೇಳಿ ನಿನಗಾಗುವುದೇನು? ನನಗೆ ಅವರಿಬ್ಬರಲ್ಲಿಯೂ ಒಂದೇ ವಿಧವಾದ ಬಹುಮಾನವುಂಟು.

ರಾಜಂ—ಛೀ ಮೂರ್ಖ! ಮೊದಲು ನನ್ನನ್ನು ಅಷ್ಟೊಂದು ನಿರ್ಬಂಧಿಸಿ ನನ್ನ ಬಾಯಿಂದಾಡಿಸಿಬಿಟ್ಟು ಈಗ ನೀನು ಮಾತ್ರ ಸರಿಯಾದ ಉತ್ತರವನ್ನು ಹೇಳದಿರುವೆಯಾ?

ವಿದೂ—ಹಾಗಿದ್ದರೆ ನೀನೂ ನನ್ನನ್ನು ಬಲಾತ್ಕರಿಸುವೆಯೇನು?

ರಾಜಂ—ಹೌದು! ಬಲಾತ್ಕರಿಸದೆ ಬಿಡುವೆನೆ?

ವಿದೂ—ಹಾಗಿದ್ದರೆ ನನ್ನಿಂದ ನೀನು ಕೇಳಲಾರೆ.

ರಾಜಂ—ಮನ್ನಿಸು! ಮನ್ನಿಸು! ಮಹಾಬ್ರಾಹ್ಮಣಾ! ಮನ್ನಿಸು! ನಿರ್ಭಯವಾಗಿ ನಿನ್ನ ಅಂತರಂಗವನ್ನು ನನಗೆ ತಿಳಿಸು.

ವಿದೂ—ಹಾಗಿದ್ದರೆ ಕೇಳು! ಪೂಜ್ಯಳಾದ ವಾಸವದತ್ತೆಯೇನೋ ನನಗೆ ಬಹಳ ಇಷ್ಟಳು. ಪೂಜ್ಯಳಾದ ಪದ್ಮಾವತಿಯೂ ಒಳ್ಳೇ ಯುವತಿ! ರೂಪವತಿ! ಅವಳಿಗೆ ಕೋಪವಿಲ್ಲ! ಅಹಂಕಾರವಿಲ್ಲ! ಯಾವಾಗಲೂ ಪ್ರಿಯವನ್ನೇ ನುಡಿಯತಕ್ಕವಳು. ಬಹಳ ದಾಕ್ಷಿಣ್ಯ ಪ್ರಕೃತಿ!* ಎಲ್ಲಕ್ಕಿಂತಲೂ ಮೇಲೆ ಮತ್ತೊಂದು ವಿಶೇಷಗುಣವೇನೆಂದರೆ, ಒಳ್ಳೇ

---

* ಇಲ್ಲಿ ವಿದೂಷಕನು ತನಗೆ ಹೆಚ್ಚಾಗಿ ಭೋಜನವಿಕ್ಕುವ ಗುಣಾತಿಶಯವನ್ನು ಪದ್ಮಾವತಿಯಲ್ಲಿಯೇ ಆರೋಪಿಸಿದಂತೆ ಅರ್ಥಭೇದವನ್ನಿಟ್ಟುಕೊಂಡರೆ, ಅವರ ಮುಂದಿನ ಸಂಭಾಷಣಗಳಲ್ಲಿರುವ ಅಭಿಪ್ರಾಯವು ಇನ್ನೂ ಚೆನ್ನಾಗಿ ಹೊಂದಿಬರುವುದೆಂದು ತೋರುವುದು. ಆಗ ಮುಂದಿನ ವಾಕ್ಯಗಳಿಗೆ ಈ ಕೆಳಗೆ ಕಂಡ ಅರ್ಥಭೇದವನ್ನು ಗ್ರಹಿಸಬೇಕು. ಹೇಗೆಂದರೆ,

ವಾಸವ—ಇರಲಿ! ಇರಲಿ! ವಸಂತಕಾ! ಇದನ್ನು (ನನ್ನಮೇಲಿನ ಈ ದೋಷಾರೋಪವನ್ನು) ನೀನು ನೆನಪಿನಲ್ಲಿಟ್ಟಿರು

ರಾಜಂ—ವಸಂತಕಾ; ಒಳ್ಳೇದಿರಲಿ! ಇದನ್ನೆಲ್ಲ ನಾನು ವಾಸವದತ್ತೆಗೆ ತಿಳಿಸದೆ ಬಿಡುವೆನೆ?

[ಹೀಗೆ ಇವೆರಡೂ ವಸಂತಕನನ್ನು ಹೆದರಿಸುವಹಾಗೆ ಗ್ರಹಿಸಬೇಕು.]

ರಸವತ್ತಾದ ಭೋಜನಗಳಿದ್ದಾಗ ವಾಸವದತ್ತೆಯು "ಆರ್ಯವಸಂತಕನೆಲ್ಲಿ !" ಎಂದು ನನ್ನನ್ನು ಹುಡುಕಿಕೊಂಡು ಬರುವಳು.

ವಾಸವದತ್ತೆ—ಒಳ್ಳೆಯದು ! ವಸಂತಕಾ ಈಗ ನನ್ನನ್ನು ನೆನಪಿನಲ್ಲಿಡು !

ರಾಜಂ—ವಸಂತಕಾ ! ಒಳ್ಳೆಯದೊಳ್ಳೆಯದು ! ಇದನ್ನೇ, ನಾನು ವಾಸವದತ್ತಾದೇವಿಗೆ ತಿಳಿಸುವೆನು.

ವಿದೂ—ಅಯ್ಯೋ ವಾಸವದತ್ತೆಯೆ ! ಇನ್ನು ವಾಸವದತ್ತೆಯೆಲ್ಲಿರುವಳು ! ವಾಸವದತ್ತೆಯು ಸತ್ತು ಎಷ್ಟೋ ಕಾಲವಾಯಿತು ;

ರಾಜಂ—(ವ್ಯಸನದೊಡನೆ) ಮಿತ್ರನೆ ! ಹೌದು ! ನಿಜವಾಗಿಯೂ ವಾಸವದತ್ತೆಯು ಯಾವಾಗಲೋ ಮೃತಳಾದಳು. ಆದರೆ–

ನಿನ್ನಯ ಹಾಸ್ಯೋಕ್ತಿಗಳಿಂ |
ದೆನ್ನಮನಂ ಕಲಗಿ ಮೋಹಗೊಂಡಿರ್ದುದರಿಂ ||
ಮುನ್ನಿನ ಬಳಕೆಯೊಳೀನುಡಿ |
ತನ್ನಿಂ ತಾನೊಗೆದುದೆನ್ನ ವದನದಿನೀಗಳ್ || ೩೧ ||

ಪದ್ಮಾವತಿ—ಆಹಾ ! ಒಳ್ಳೆಯ ಪ್ರಿಯವಾದ ಮಾತುಗಳು ನಡೆಯುತ್ತಿದ್ದಾಗ ಕೇಡಿಗನಾದ ಈ ವಸಂತಕನು ನಡುವೆ ಏನೋ ಅಡ್ಡಮಾತನ್ನು ತಂದೊಡ್ಡಿದನು.

ವಾಸವದತ್ತೆ—(ತನ್ನಲ್ಲಿ ತಾನು) ಒಳ್ಳೆಯದಿರಲಿ ! ಈಗ ಮನಸ್ಸಿಗೆ ನೆಮ್ಮದಿಯಾಯಿತು! ಪರೋಕ್ಷದಲ್ಲಿಯೂ ಆರ್ಯಪುತ್ರನ ಬಾಯಿಂದ ಇಂತಹ ಮಾತುಗಳನ್ನು ಕೇಳುವುದು ನನಗೆ ಎಷ್ಟೋ ಪ್ರಿಯವು !

ವಿದೂ—ಮಿತ್ರನೆ ! ಸೈರಿಸು ! ಸೈರಿಸು ! ದುಃಖವನ್ನು ತಡೆದುಕೊಳ್ಳಬೇಕು. ವಿಧಿಯೋಗವನ್ನು ಮೀರುವುದಕ್ಕಾದೀತೇ ? ಇದು ಹೀಗಾಗಬೇಕಾಗಿದ್ದಿತು ; ಯಾರೇನು ಮಾಡಬಲ್ಲರು ?

ರಾಜಂ—ಮಿತ್ರನೆ ! ಈಗ ನಾನು ಅನುಭವಿಸುವ ಅವಸ್ಥೆಯನ್ನು ನೀನು ಕಾಣೆ ! ಏಕೆಂದರೆ, ಕೇಳು–

* ಮನದನುರಾಗಮೆಂಬ ಲತೆ ಬೇರಿಳಿಯಲ್ ಕಳೆಯಲ್ಕೆ ಸಾಧ್ಯಮೆ |
ನೆನೆನೆನೆದಂತೆ ದುಃಖಮದೆ ತಾಂ ಪೊಸತಪ್ಪುದು! ಮೇಲೆ ಮೇಲೆ ಕ ||
ಣ್ಬನಿಗರೆಯಲ್ಕದೊಂದೆಯುಪಶಾಂತಿ ಮನಕ್ಕದರಿಂದೆ ಬುದ್ಧಿ ತಾ |
ನನೃಣತೆಯಾಂತು ನಾಡೆ ತಿಳಿಪೊಂದುಗುಮಿಂತಿದೆ ಲೋಕರೀತಿ ಕೇಳ್ ||

ವಿದೂ—ಮಿತ್ರನೆ! ಕಣ್ಣೀರಿಂದ ತೊಯ್ದು ನಿನ್ನ ಮುಖವು ಕಂದಿರುವುದು. ಇದೋ ಈಗಲೇ ಹೋಗಿ ಮುಖವನ್ನು ತೊಳೆಯುವುದಕ್ಕೆ ನೀರನ್ನು ತರುವೆನು.

(ಹೋಗುವನು)

ಪದ್ಮಾವತಿ—ಆರ್ಯೆ! ಕಾಂತನ ಕಣ್ಣುಗಳಲ್ಲಿ ನೀರು ತುಂಬಿ ಕೈವಸ್ತ್ರವನ್ನು ಮುಖಕ್ಕೆ ಮರೆಮಾಡಿಕೊಂಡಿರುವನು. ನಾವು ಅವನ ಕಣ್ಣಿಗೆ ಬೀಳದೆ ತಪ್ಪಿಸಿಕೊಂಡು ಹೋಗುವುದಕ್ಕೆ ಇದೇ ಸಮಯವು. ಬಾ ಹೋಗುವೆವು.

ವಾಸವದತ್ತೆ—ಆಗಲಿ. ಅಥವಾ ನೀನು ಇಲ್ಲಿರು. ಈ ವ್ಯಸನಸಮಯದಲ್ಲಿ ಕಾಂತನನ್ನು ಬಿಟ್ಟು ಹೋಗುವುದು ಸರಿಯಲ್ಲ. ನಾನು ಮಾತ್ರ ಹೋಗುವೆನು.

ಚೇಟಿ—ಹೌದು. ಈಕೆ ಹೇಳುವುದು ನ್ಯಾಯವು. ನೀನು ಸಮೀಪಕ್ಕೆ ಹೋಗಿ ನಿನ್ನ ಪ್ರಿಯನನ್ನು ಸಂತೈಸು.

---

* ಮೂಲದಲ್ಲಿ "ದುಃಖಂ ತ್ಯಕ್ತುಂ ಬದ್ಧಮೂಲೋಽನುರಾಗಃ" ಎಂದಿದೆ. ಇದಕ್ಕೆ ಕೆಲವು ವ್ಯಾಖ್ಯಾನಗಳಲ್ಲಿ "ಹಳೆಯ ದುಃಖವನ್ನು ಮರೆಯಿಸುವುದಕ್ಕಾಗಿ ಹೊಸ ಕನ್ಯೆಯಲ್ಲಿ ದೃಢವಾದ ಅನುರಾಗವನ್ನು ಹಿಡಿದಾಯಿತು" ಎಂದು ಅರ್ಥವನ್ನು ಮಾಡಿದೆ. ಅದಕ್ಕನುಸಾರವಾಗಿ ಈ ಕೆಳಗಣ ಪಾಠವನ್ನು ಓದಬಹುದು.

ಮನದನುತಾಪಮಂ ಕಳೆಯಲನ್ಯೆಯೊಳಾನನುರಾಗಮಾಂತೊಡಂ |
ನೆನೆನೆನೆದೆನ್ನ ಮುನ್ನಿನಳಲಂ ವ್ಯಸನಂ ಪೊಸತಪ್ಪುದಲ್ತೆ! ಕ ||
ಣ್ಬನಿಗರೆಯಲ್ಕದೊಂದೆಯುಪಶಾಂತಿ ಮನಕ್ಕದರಿಂದ ಬುದ್ಧಿ ತಾ |
ನನೃಣತೆಯಾಂತು ನಾಡೆ ತಿಳಿಪೊಂದುಗುಮಿಂತಿದೆ ಲೋಕರೀತಿ ಕೇಳ್ || ೨೨ ||

ಪದ್ಮಾವತಿ—ಹಾಗಿದ್ದರೆ ನಾನು ಪೋಗಲೇ ?

ವಾಸವದತ್ತೆ—ನಡೆ ! ನಡೆ ! (ಎಂದು ಹೇಳಿ ಹೊರಟುಹೋಗುವಳು)

[ವಿದೂಷಕನು ತಾವರೆಯೆಲೆಯಲ್ಲಿ ನೀರನ್ನು ತುಂಬಿ ತಂದು]

ವಿದೂ—ಓಹೋ ! ಪೂಜ್ಯಳಾದ ಪದ್ಮಾವತಿ ಇಲ್ಲಿಯೇ ಇರುವಳು !

ಪದ್ಮಾವತಿ—ಆರ್ಯ ವಸಂತಕ ! ಇದೇನು ?

ವಿದೂ—ಮತ್ತೇನು ? ಅದೇ ಇದು ! ಇದೇ ಅದು !

ಪದ್ಮಾವತಿ—ಆರ್ಯನೆ ! ಹೇಳು ಹೇಳು ! ಅದೇನು ಹೇಳು !

ವಿದೂ—ಪೂಜ್ಯಳೇ ! ಈ ನಮ್ಮ ಮಹಾರಾಜನ ಕಣ್ಣಿಗೆ ಕಾಶಪುಷ್ಪದ ದೂಳು ಬಿದ್ದು ಕಣ್ಣಲ್ಲಿ ನೀರು ಸುರಿಯಿತು. ಮುಖವನ್ನು ತೊಳೆಯುವುದಕ್ಕಾಗಿ ಈ ನೀರನ್ನು ತಂದೆನು. ಇದೋ ! ಇದನ್ನು ನೀನೇ ತೆಗೆದುಕೊಂಡು ಹೋಗಿ ಕೊಡು.

ಪದ್ಮಾವತಿ—(ತನ್ನಲ್ಲಿ) ಆಹಾ ! ರಾಜನ ಸುಗುಣಗಳೇ ಪರಿಜನಕ್ಕೂ ಬರುವುವು, (ಮುಂದೆಹೋಗಿ) ಆರ್ಯಪುತ್ರನಿಗೆ ಜಯವಾಗಲಿ. ಇದೋ ! ಮುಖವನ್ನು ತೊಳೆದುಕೊಳ್ಳುವುದಕ್ಕೆ ನೀರು !

ರಾಜಂ—(ನೋಡಿ ವಿಸ್ಮಯದಿಂದ) ಓಹೋ ! ಪದ್ಮಾವತಿ (ಮರೆಯಾಗಿ) ವಸಂತಕ ! ಏನಿದು !

ವಿದೂ—ರಾಜನ ಕಿವಿಯಲ್ಲಿ .... ಇಷ್ಟೇ.

ರಾಜಂ—ಭಲೆ ! ವಸಂತಕ ಭಲೆ ! (ಬಾಯನ್ನು ತೊಳೆದುಕೊಂಡು) ಪದ್ಮಾವತಿ ! ಇಲ್ಲಿ ಕುಳ್ಳಿರು.

ಪದ್ಮಾವತಿ—ಆರ್ಯಪುತ್ರನ ಆಜ್ಞೆ.

[ಕುಳಿತುಕೊಳ್ಳುವಳು]

ರಾಜಂ—ಪದ್ಮಾವತಿ.

ವನಿತಾಮಣಿ ! ಶಾರದ ಚಂ |
ದ್ರನ ರುಚಿಯಂ ಪೋಲ್ವ ಕಾಶಕುಸುಮಪರಾಗಂ ||
ಅನಿಲಾಹೃತವೆನ್ನ ವಿಲೋ |
ಚನದೊಳ್ ಬಿಳ್ದುದರಿನೆನಗೆ ಬಂದುದು ಬಾಷ್ಪಂ || ೨೩ ||

[ತನ್ನಲ್ಲಿ]

ಅರಯೆ ನವೋಢೆಯಿಾಸುಕು |
ಮಾರಿ ! ದಿಟಂ ನುಡಿಯೆ ನಾಡೆ ನೊಂದಪಳಿದರಿಂ ||
ಧೀರೆಯವಳೆನಿಸಿದೊಡಮೇಂ |
ನಾರಿಯರೆಂದುಂ ಸ್ವಭಾವಭೀರುಗಳಲ್ತೆ ? || ೨೪ ||

ವಿದೂ—ಪದ್ಧತಿಯ ಮೇರೆಗೆ ಮಗಧರಾಜನು ನಿನ್ನನ್ನು ಮುಂದಿಟ್ಟು ಕೊಂಡು ಹೋಗಿ ತನ್ನ ಬಂಧುಮಿತ್ರರನ್ನು ನೋಡಿಕೊಂಡು ಬರುವುದಕ್ಕೆ ಈಗ ತಕ್ಕ ಸಮಯವಾಗಿದೆ. ಇದೋ ! ಆಗಲೇ ಮಧ್ಯಾಹ್ನವಾಯಿತು, ಏಳು, ಹೊರಡುವೆವು. ಸತ್ಕಾರದಿಂದ ಪಡೆದ ಪ್ರತಿಸತ್ಕಾರವು ಮನಸ್ಸಿಗೆ ಹಿತಕರವಾಗುವುದು.

ರಾಜಂ—ಹೌದು, ಮೊದಲು ಇದನ್ನು ನಡೆಯಿಸಬೇಕು. (ಎದ್ದುನಿಂತು)

ಧೀರಗುಣೋತ್ಕರದಿಂ |
ಸತ್ಕಾರದಿನಿತರಜನರುಮನಾದರಿಪ ಮಹೋ ||
ದಾರರ್ ಸುಲಭರ್ ಧರಣಿಯೊ |
ಳಾರಯಲದನರಿವ ಜನಮೆ ದುರ್ಲಭಮಲ್ತೇ ? || ೨೫ ||

(ಎಲ್ಲರೂ ಹೋಗುವರು)

ಇದು

ಚತುರ್ಥಾಂಕಂ

— ಪಂಚಮಾಂಕಂ —

(ಪದ್ಮಿನಿಕೆ ಪ್ರವೇಶಿಸುವಳು)

ಪದ್ಮಿನಿಕೆ—ಮಧುಕರಿಕೆ, ಮಧುಕರಿಕೆ! ಬಾ, ಬೇಗ ಬಾ!

ಮಧುಕರಿಗೆ—(ಪ್ರವೇಶಿಸಿ) ಸಖೀ, ಇದೊ ಬಂದೆನು. ಏನು?

ಪದ್ಮಿನಿಕೆ—ಸಖೀ, ರಾಜಕುಮಾರಿಯಾದ ಪದ್ಮಾವತಿಯು ತಲೆನೋವಿನಿಂದ ಬಾಧೆಪಡುತ್ತಿರುವಳೆಂದು ನಿನಗೆ ತಿಳಿಯದೇ?

ಮಧುಕರಿಕೆ—ಸಖೀ, ನೀನು ಬೇಗಹೋಗಿ ಪೂಜ್ಯೆಯಾದ ಆವಂತಿಕಾದೇವಿಯನ್ನು ಕರೆ. ಪದ್ಮಾವತಿಗೆ ತಲೆನೋವೆಂದು ಹೇಳಿದರೆ ಸಾಕು! ಅವಳು ತಾನಾಗಿಯೇ ಬರುವಳು.

ಮಧುಕರಿಕೆ—ಅವಳು ಬಂದು ಏನನ್ನು ಮಾಡುವಳು?

ಪದ್ಮಿನಿಕೆ—ಅವಳು ಬಂದರೆ ಏನಾದರೂ ಕಥೆಗಳನ್ನು ಹೇಳುತ್ತ, ರಾಜಕುಮಾರಿಗೆ ತಲೆನೋವಿನ ಬಾಧೆಯನ್ನು ಅಷ್ಟಾಗಿ ತೋರದಂತೆ ಮಾಡಿ ವಿನೋದಪಡಿಸುವಳು.

ಮಧುಕರಿಕೆ—ಹೌದು, ಸರಿಯೆ; ಸಖೀ! ನಮ್ಮ ರಾಜಪುತ್ರಿಯನ್ನು ಎಲ್ಲಿ ಮಲಗಿಸಿರುವೆ?

ಪದ್ಮಿನಿಕೆ—ಸಮುದ್ರಗೃಹದಲ್ಲಿ! ನೀನು ಬೇಗ ಹೊರಡು. ನಾನೂ ಮಹಾರಾಜನಿಗೆ ತಿಳಿಸುವುದಕ್ಕಾಗಿ ಆರ್ಯವಸಂತಕನನ್ನು ಹುಡುಕುವೆನು,

ಮಧುಕರಿಕೆ—ಸರಿ. ಹಾಗೆಯೇ ಆಗಲಿ. (ಹೊರಡುವಳು)

ಪದ್ಮಿನಿಕೆ—ಈಗ ಆರ್ಯವಸಂತಕನು ಎಲ್ಲಿರುವನೋ!

(ವಿದೂಷಕನು ಪ್ರವೇಶಿಸುವನು)

ವಿದೂ—ಆಹಾ! ಮೊದಲೇ ದೇವೀವಿಯೋಗದಿಂದ ಮನಸ್ಸಿಗೆ ಯಾವುದೂ ಬೇಡವಾಗಿದ್ದ ನಮ್ಮ ಮಹಾರಾಜನಿಗೆ, ಈಗ ಪದ್ಮಾವತಿಯೊಡನೆ

ವಿವಾಹವಾಗಿ, ಅದರಲ್ಲಿ ಮನಸ್ಸಿಗೆ ಉಲ್ಲಾಸಕರವಾದ ಉತ್ಸವ ಸಂಭ್ರಮಗಳೆಲ್ಲವೂ ನಡೆದಮೇಲೆ, ತಿರುಗಿ ವಿಷಯಾಸಕ್ತಿ ಹೆಚ್ಚಿ ಮನ್ಮಥ ತಾಪವು ಅತಿ ಪ್ರಬಲವಾಗಿ ಉರಿಯಲಾರಂಭಿಸಿದೆ. ಏನು ಮಾಡಲಿ! (ಮುಂದೆ ನೋಡಿ) ಓಹೋ! ಪದ್ಮಿನಿಕೆ ಬರುತ್ತಿರುವಳು. ಪದ್ಮಿನಿಕೆ ಏನದು? ನಿನಗೆ ತಿಳಿಯದೇನು?

ಪದ್ಮಿನಿಕೆ—ಆರ್ಯವಸಂತಕ! ರಾಜಕುಮಾರಿಯಾದ ಪದ್ಮಾವತಿಗೆ ತಲೆ ನೋವೆಂದು ನಿನಗೆ ತಿಳಿಯದೇನು?

ವಿದೂ—ಹಾಗೇನು! ನಿಜವಾಗಿಯೂ ನನಗೆ ತಿಳಿಯದು.

ಪದ್ಮಿನಿಕೆ—ಈಗಲಾದರೂ ನೀನು ಬೇಗ ಹೋಗಿ ಅದನ್ನು ಮಹಾರಾಜನಿಗೆ ತಿಳಿಸು. ನಾನು ಶಿರೋಲೇಪನವನ್ನು ತೆಗೆದುಕೊಂಡು ಪದ್ಮಾವತಿಯ ಬಳಿಗೆ ಹೋಗುವೆನು.

ವಿದೂ—ಅಸ್ವಸ್ಥಳಾದ ಪದ್ಮಾವತಿ ಈಗ ಎಲ್ಲಿ ಮಲಗಿರುವಳು?

ಪದ್ಮಿನಿಕೆ—ಸಮುದ್ರಗೃಹದಲ್ಲಿ.

ವಿದೂ—ಹಾಗಾದರೆ ನೀನು ಹೋಗು, ನಾನು ಮಹಾರಾಜನಲ್ಲಿಗೆ ಹೋಗಿ ತಿಳಿಸುವೆನು.

(ಇಬ್ಬರೂ ಹೋಗುವರು)

ಇದು

ಪ್ರವೇಶಕವು

ರಾಜಂ— (ರಾಜನು ಪ್ರವೇಶಿಸುವನು)

ಲಲನಾರತ್ನಮವಂತಿರಾಜನ ಗುಣಕ್ಕೊಪ್ಪಿರ್ದ ಸತ್ಪುತ್ರಿ! ಕೋ।
ಮಲೆ! ಲಾವಾಣಕವಹ್ನಿಯಿಂ ಹಿಮಹತಾಬ್ಜಶ್ರೀಯವೋಲ್ ನಾಡೆ ಬೆಂ॥
ದಳಿದೀಗಳ್ ಪಲಕಾಲವಾಯ್ತು! ಪೆರತೊರ್ವಳ್ ಸೂರೆಗೊಂಡಿರ್ದುಮೆ।
ನ್ನೊಲವಂ ಮನ್ಮನಮಿನ್ನು ಮಾಸತಿಯನೇಕಾಸಕ್ತಿಯಿಂ ಚಿಂತಿಕುಂ॥ ೨೬॥

[ವಿದೂಷಕನು ಪ್ರವೇಶಿಸಿ]

ವಿದೂ—ಮಿತ್ರನೆ! ತ್ವರೆಮಾಡು! ತ್ವರೆಮಾಡು!

ರಾಜಂ—ಏಕೆ ?

ವಿದೂ—ಪದ್ಮಾವತಿಯು ತಲೆನೋವಿನಿಂದ ಬಾಧೆಪಡುತ್ತಿರುವಳಂತೆ.

ರಾಜಂ—ಯಾರು ಹೇಳಿದರು ?

ವಿದೂ—ಪದ್ಮಿನಿಕೆ.

ರಾಜಂ—ಹಾ ! ಕಷ್ಟ !

ಮುನ್ನಿನನರ್ಥದಿಂದ ನೆರೆ ನೊಂದೊಡಮೆನ್ನೆರ್ದೆ ; ದಿವ್ಯರೂಪಸಂ |
ಪನ್ನೆಯುಮೊಳ್ಗುಣಕ್ಕೆಡೆಯುಮಾದ ಪರಾಂಗಿಯ ಲಾಭದಿಂದಮಿಂ ||
ದೆನ್ನಯ ದುಃಖಮೊಂದಿನಿಸು ಶಾಂತಿಯನಾಂತವೊಲಿದ್ದುದಾದಿಯಿಂ |
ಬನ್ನದೆ ನೊಂದ ನಾಂ ಬೆದರ್ವೆನೀಕೆಯೊಳಂ ತದಪಾಯಶಂಕೆಯಿಂ || ೨೭ ||

ಈಗ ಪದ್ಮಾವತಿ ಎಲ್ಲಿರುವಳು ?

ವಿದೂ—ಸಮುದ್ರಗೃಹದಲ್ಲಿ.

ರಾಜಂ—ಹಾಗಿದ್ದರೆ ಅಲ್ಲಿಗೆ ನಡೆ, ಹೋಗುವೆವು.

ವಿದೂ—ಇತ್ತ ದಯಮಾಡಿಸಬೇಕು. (ಇಬ್ಬರೂ ನಡೆಯುವರು)

ವಿದೂ—ಇದೇ ಸಮುದ್ರಗೃಹವು. ಪ್ರವೇಶಿಸು ?

ರಾಜಂ—ನೀನು ಮೊದಲು ಹೋಗು.

ವಿದೂ—ಅಪ್ಪಣೆ, (ಎಂದು ಮುಂದೆ ಹೋಗಿ) ಅಯ್ಯೊ ! ಅಯ್ಯೊ ! ರಾಜನೆ ! ನಿಲ್ಲು, ನಿಲ್ಲು !

ರಾಜಂ—ಏಕೆ ?

ವಿದೂ—ಇದೋ ಇಲ್ಲಿ ಒಂದು ಹಾವು ಹರಿದಾಡುತ್ತಿರುವುದು ; ದೀಪದ ಬೆಳಕಿನಲ್ಲಿ ನೋಡು, ಕಾಣುವುದು.

ರಾಜಂ—(ಮುಂದೆ ನೋಡಿ ನಗುತ್ತ) ಈ ಮೂಢನು ಇದನ್ನು ನೋಡಿ ಸರ್ಪವೆಂದು ಭ್ರಮಿಸಿರುವನು. (ವಿದೂಷಕನನ್ನು ನೋಡಿ) ವಸಂತಕ !

ತಲೆವಾಗಿಲ ತೋರಣದಿಂ |
ನೆಲಕ್ಕೆ ಜೋಲ್ಬುರುಳ್ವ ನೀಳ್ದ ಮಾಲೆಯನಹಿಗೆ ||

ತ್ರೈಲೆ ಮರುಳೆ ! ಬೆದರ್ವೆ ! ಮೆಲ್ಲೆಲ |
ರಲೆಪದಿಸಿದು ಚಲನವೊಂದುತಾಡುವುದಹಿವೋಲ್ || ೨೮ ||

ವಿದೂ—(ಚೆನ್ನಾಗಿ ನೋಡಿ) ಮಿತ್ರನೆ ! ಚೆನ್ನಾಗಿ ಹೇಳಿದೆ ! ನಿಜ ! ಇದು ಹಾವಲ್ಲ ! (ಮುಂದೆ ಹೋಗಿ ನೋಡಿ) ಪೂಜ್ಯಳಾದ ಪದ್ಮಾವತಿಯು ಇಲ್ಲಿಗೆ ಬಂದು ಹೊರಟುಹೋಗಿರಬೇಕು.

ರಾಜಂ—ಬಂದೇ ಇರಲಾರಳು !

ವಿದೂ—ನಿನಗೆ ಹೇಗೆ ತಿಳಿಯುವುದು ?

ರಾಜಂ—ಇಲ್ಲಿ ತಿಳಿಯಬೇಕಾದುದೇನಿದೆ ? ನೋಡು !

ಶಯನಂ ಕುಗ್ಗಿರ್ಪಲ್ಲ! ಮೇಲ್ದು ಪ್ಪಟಮಿದುಮಿನಿಸುಂ ಮಾಸಿದಂತಿಲ್ಲ! ಶೀರ್ಷಾ|
ಶ್ರಯದೊಳ್ ತಚ್ಛೀರ್ಷಲೇಪೌಷಧಿಯ ಕಲೆಗಳಂಟಿಲ್ಲ! ಮತ್ತೀಕ್ಷಿಸಲ್ ರೋ||
ಗಿಯ ಕಣ್ಗಿಂಪೀವ ಶೋಭಾರಚನೆಯಿದರೊಳೊಂದಾದೊಡಂ ಕಾಣದಿನ್ನಾ |
ರಯೆ ರೋಗಾರ್ತಗ್ಗ‌ದೇಂ ಸಾಧ್ಯಮೆ ಇನಿತರೊಳೇ ಶಯ್ಯೆಯಿಂದೆಳ್ದು
ಪೋಗಲ್ || ೨೯ ||

ವಿದೂ—ಹಾಗಿದ್ದರೆ ನೀನು ಈ ಹಾಸುಗೆಯ ಮೇಲೆಯೇ ಸ್ವಲ್ಪ ಹೊತ್ತು ಕುಳಿತು ಅವಳನ್ನು ನಿರೀಕ್ಷಿಸುತ್ತಿರು.

ರಾಜಂ—ಆಗಲಿ ! (ಕುಳಿತು) ವಯಸ್ಯ ! ನಿದ್ರೆ ಬರುವಂತಿದೆ. ಏನಾದರೂ ಒಂದು ವಿನೋದವಾದ ಕಥೆಯನ್ನು ಹೇಳು.

ವಿದೂ—ಹೇಳುವೆನು. ಆದರೆ ನೀನು (ಪ್ರತಿ ಮಾತಿಗೂ) 'ಹುಂ' ಕೊಡುತ್ತಿರಬೇಕು.

ರಾಜಂ—ಆಗಲಿ !

ವಿದೂ—ಉಜ್ಜಯಿನಿಯೆಂಬ ನಗರವೊಂದುಂಟು – 'ಹುಂ' ಎನ್ನು – ಅಲ್ಲಿ ಅತಿರಮಣೀಯಗಳಾದ * ಸ್ನಾನಘಟ್ಟಗಳುಂಟೆಂಬುದನ್ನು ಕೇಳಿ ಬಲ್ಲೆಯಷ್ಟೆ ?

---

* ಇಲ್ಲಿ "ಉದಯಜ್ಞಾನ" ವೆಂಬ ಪಾಠಾಂತರವುಂಟು. "ಉದಯಜ್ಞಾನ" ವೆಂದರೆ ಗ್ರಹ ನಕ್ಷತ್ರ ಗತಿ ವಿಶೇಷಗಳನ್ನು ನೋಡಿ ತಿಳಿಯತಕ್ಕ ನಕ್ಷತ್ರಶಾಲೆ (Observatory) ಎಂದರ್ಥವು.

ರಾಜಂ—ಏನೇನು ? ಉಜ್ಜಯಿನಿಯ ವಿಷಯವೇ ?

ವಿದೂ—ಈ ಕಥೆಯು ನಿನಗೆ ಇಷ್ಟವಿಲ್ಲದಿದ್ದರೆ ಬೇರೆ ಕಥೆಯನ್ನು ಹೇಳುವೆನು.

ರಾಜಂ—ಮಿತ್ರನೇ ! ನನಗೆ ಆ ಕಥೆಯಲ್ಲಿ ಇಷ್ಟವಿಲ್ಲದೆ ಇಲ್ಲ. ಆದರೆ–

ಪುರದಿಂಪಾಂ ಪೊರಮಡುವವ |
ಸರದೊಳ್ ತನ್ನ ವರನಗಲಲಾರದವಂತೀ ||
ಶ್ವರಸುತೆ ಕಣ್ಬನಿಗರೆದೆ |
ನ್ನುರವುಂ ತೊಯ್ಸಿದುದವಸೀಗಳುಂ ನೆನೆದಪೆನಾಂ || ೩೦ ||

ಅಷ್ಟೇ ಅಲ್ಲ ! ಕೇಳು–

ತರಲಾಕ್ಷಿ ವೀಣೆಗಲ್ಸವ |
ಸರದೊಳ್ ನೇಹದೆ ಪಲರ್ಮೆ ನೋಡುತ್ತೆನ್ನಂ ||
*
ಕರದಿಂ ಸಾರಗೆ ಜಗುಳ್ದೊಡ |
ಮರಿಯದೆ ಬರುಗೈಯನೊಯ್ಯನಾಡಿಸುತಿರ್ದಳ್ || ೩೧ ||

ವಿದೂ—ಹೋಗಲಿ ! ಇನ್ನೊಂದನ್ನು ಹೇಳುವೆನು. ಬ್ರಹ್ಮದತ್ತವೆಂಬ ಒಂದು ನಗರವುಂಟು. ಅಲ್ಲಿ ಕಾಂಪಿಲ್ಯನೆಂಬ ರಾಜನು ಆಳುತ್ತಿದ್ದನು.

ರಾಜಂ—ಏನು, ಏನು ? ಏನು ಹೇಳಿದೆ ?

ವಿದೂ—(ಅದನ್ನೇ ತಿರುಗಿ ಹೇಳುವನು)

ರಾಜಂ—ಮೂರ್ಖ ! ರಾಜನು ಬ್ರಹ್ಮದತ್ತನೆಂದೂ, ನಗರವು ಕಾಂಪಿಲ್ಯವೆಂದೂ ಹೇಳು.

ವಿದೂ—ಏನು ? ರಾಜನು ಬ್ರಹ್ಮದತ್ತನೇ ? ನಗರವು ಕಾಂಪಿಲ್ಯವೇ ?

ರಾಜಂ—ಹೌದು.

ವಿದೂ—ಹಾಗಾದರೆ ಸ್ವಲ್ಪ ತಾಳು. ಅದನ್ನು ಚೆನ್ನಾಗಿ ಬಾಯಿಪಾಠಮಾಡುವೆನು. "ಬ್ರಹ್ಮದತ್ತರಾಯ, ಕಾಂಪಿಲ್ಯನಗರ; ಬ್ರಹ್ಮದತ್ತರಾಯ ಕಾಂಪಿಲ್ಯನಗರ" (ಹೀಗೆ ಹಲವುಸಾರಿ ಹೇಳುತ್ತಾ) ರಾಜನೆ ಈಗ ಕೇಳು

ಅಯ್ಯೋ! ರಾಜನು ಮಲಗಿಯೇಬಿಟ್ಟನು. ಈಗಲೇನೋ ಬಹಳ ಚಳಿಯಾಗುವಂತಿದೆ. ಹೋಗಿ ಕಂಬಳಿಯನ್ನು ತರುವೆನು.

(ಹೋಗುವನು)

[ಅವಂತಿಕಾವೇಷದಿಂದ ವಾಸವದತ್ತೆಯೂ ಚೇಟಿಯೂ ಪ್ರವೇಶಿಸುವರು.]

ಚೇಟಿ—ಆರ್ಯೆ, ಇತ್ತ ಬಾ. ರಾಜಕುಮಾರಿಯಾದ ಪದ್ಮಾವತಿಯು ಶಿರೋವೇದನೆಯಿಂದ ಬಹಳವಾಗಿ ಬಾಧೆಪಡುತ್ತಿರುವಳು.

ವಾಸವದತ್ತೆ—ಅಯ್ಯೋ ಕಷ್ಟ! ಅವಳ ಹಾಸಿಗೆಯೆಲ್ಲಿ?

ಚೇಟಿ—ಸಮುದ್ರಗೃಹದಲ್ಲಿ ಎಂದು ಹೇಳಿದೆನಲ್ಲವೇ?

ವಾಸವದತ್ತೆ—ಹಾಗಾದರೆ ಮುಂದೆ ನಡೆ! (ಇಬ್ಬರೂ ಮುಂದೆ ಬರುವರು)

ಚೇಟಿ—ಆರ್ಯೆ! ಇದೇ ಸಮುದ್ರಗೃಹವು. ಒಳಗೆ ಹೋಗು! ನಾನೂ ಈಗಲೇ ಹೋಗಿ ತಲೆಗೆ ಹಾಕುವ ಲೇಪನವನ್ನು ತರುವೆನು.

[ಹೋಗುವಳು]

ವಾಸವದತ್ತೆ—ಆಹಾ! ದೇವತೆಗಳಿಗೆ ನನ್ನಲ್ಲಿ ಸ್ವಲ್ಪವೂ ಕರುಣೆಯಿಲ್ಲ! ವಿಯೋಗ ದುಃಖಿತನಾದ ಆರ್ಯಪುತ್ರನಿಗೆ ಆಗಾಗ ಸ್ವಲ್ಪ ಮಾತ್ರವಾದರೂ ವಿಶ್ರಾಂತಿಯನ್ನು ಕೊಟ್ಟು ಈ ಪದ್ಮಾವತಿಯು ಮನಸ್ಸಿಗೆ ಉಲ್ಲಾಸವನ್ನು ಕೊಡಬಹುದೆಂದರೆ, ಅವಳೂ ಹೀಗೆ ಅಸ್ವಸ್ಥಳಾಗಿ ಮಲಗಿಬಿಟ್ಟಳಲ್ಲಾ! ಒಳಗೆ ಹೋಗುವೆನು. (ಹೋಗಿ ನೋಡಿ) ಆಹಾ! ಏನಿದು, ಪರಿಜನರ ಅಜಾಗರೂಕತೆ! ಅಸ್ವಸ್ಥೆಯಾದ ಈ ಪದ್ಮಾವತಿಯ ಮುಂದೆ ಒಂದು ದೀಪವನ್ನು ಮಾತ್ರ ಇಟ್ಟು, ಒಬ್ಬರಾದರೂ ಇಲ್ಲಿರದೆ ಹೊರಟುಹೋಗಿರುವರಲ್ಲಾ! ಅಯ್ಯೋ ಪಾಪ! ಇವಳಿಗೆ ಚೆನ್ನಾಗಿ ನಿದ್ರೆಹತ್ತಿದೆ. ಎಚ್ಚರವಾಗುವವರೆಗೆ ನಾನಾದರೂ ಇಲ್ಲಿಯೇ ಕಾವಲಾಗಿ ಕುಳಿತಿರುವೆನು. ದೂರದಲ್ಲಿ ಬೇರೆಯಾಗಿ ಕುಳಿತರೆ, ತನ್ನಲ್ಲಿ ನನಗೆ ಸ್ನೇಹವು ಕಡಿಮೆಯೆಂದು ತಿಳಿಯಬಹುದು. ಆದಕ್ಕಾಗಿ ಅವಳ ಹಾಸುಗೆಯ ಮೇಲೆಯೇ ಒಂದು ಪಕ್ಕದಲ್ಲಿ ಕುಳ್ಳಿರುವೆನು. (ಹಾಗೆ ಕುಳಿತು) ಏನಾಶ್ಚರ್ಯವಿದು! ಈ ಹಾಸುಗೆಯ ಮೇಲೆ ಕುಳಿತೊಡನೆ ನನ್ನ ಮನಸ್ಸಿಗೆ ಅಪೂರ್ವವಾದ ಆಹ್ಲಾದವು ತೋರುತ್ತಿರುವುದು! ಇವಳ ಉಸಿ

ರಾಟದಲ್ಲಿ ಅಂತಹ ದುಡುಕೇನೂ ಕಾಣುವುದಿಲ್ಲ ! ಸುಖವಾಗಿಯೇ ಉಸಿರಾಡುತ್ತಿರುವುದು. ದೈವಕೃಪೆಯಿಂದ ಇವಳ ತಲೆನೋವು ನಿಂತಿರಬೇಕು. ಇವಳು ಅರ್ಧಹಾಸುಗೆಯನ್ನು ಬಿಟ್ಟು, ಒಂದು ಪಕ್ಕವಾಗಿ ಮಲಗಿರುವುದನ್ನು ನೋಡಿದರೆ, ಆ ಅರ್ಧಭಾಗದಲ್ಲಿ ನಾನೂ ಅವಳ ಸಂಗಡ ಮಲಗಿ ಅವಳನ್ನು ಆಲಿಂಗಿಸಿಕೊಳ್ಳಬೇಕೆಂದು ಸೂಚಿಸುವಂತಿದೆ. ಹಾಗೆಯೇ ಮಾಡುವೆನು.

[ಮಲಗುವುದನ್ನು ನಟಿಸುವಳು]

ರಾಜಂ—(ಕನವರಿಸುತ್ತ) ಹಾ ! ವಾಸವದತ್ತೆ !

ವಾಸವದತ್ತೆ—(ತಟ್ಟನೆ ಮೇಲೆದ್ದು) ಆಹಾ ! ಏನಿದು ಆರ್ಯಪುತ್ರನಂತಿದೆ ! ಇವಳು ಪದ್ಮಾವತಿಯಲ್ಲ. ಆರ್ಯಪುತ್ರನು ನನ್ನನ್ನು ಕಂಡುಬಿಟ್ಟನೇನು ? ಹಾಗಿದ್ದರೆ, ಆರ್ಯ ಯೌಗಂಧರಾಯಣನ ಮಹಾಪ್ರತಿಜ್ಞಾಭಾರವು ನಿಷ್ಫಲವಾಗಿ ಹೋಯಿತಲ್ಲವೇ ?

ರಾಜಂ—ಹಾ ! ಅವಂತಿರಾಜಪುತ್ರಿ !

ವಾಸವದತ್ತೆ—ಅದೃಷ್ಟವಶದಿಂದ ನನ್ನನ್ನು ಆರ್ಯಪುತ್ರನು ನೋಡಿಲ್ಲ ! ಇದು ಕನಸು ! ಆರ್ಯಪುತ್ರನು ಕನವರಿಸುತ್ತಿರುವನು. ಇರಲಿ ! ಇಲ್ಲಿ ಬೇರೆ ಯಾರೂ ಇಲ್ಲ. ಆದುದರಿಂದ ನಾನು ಮುಹೂರ್ತಕಾಲದವರೆಗೆ ಇಲ್ಲಿಯೇ ನಿಂತು ನೋಡುತ್ತ, ನನ್ನ ನೇತ್ರಗಳನ್ನೂ ಹೃದಯವನ್ನೂ ಆನಂದಗೊಳಿಸುತ್ತಿರುವೆನು.

ರಾಜಂ—ಹಾ ! ಪ್ರಿಯೆ ! ಹಾ ! ಪ್ರಿಯಶಿಷ್ಯೆ ! ನನಗೆ ಪ್ರತ್ಯುತ್ತರವನ್ನು ಕೊಡು.

ವಾಸವದತ್ತೆ—ಪ್ರಾಣಕಾಂತಾ ! ಉತ್ತರವನ್ನು ಕೊಡುತ್ತಲೇ ಇರುವೆನಲ್ಲವೆ ?

ರಾಜಂ—ಪ್ರಿಯೆ ! ನಿನಗೆ ಕೋಪವೇನು ?

ವಾಸವದತ್ತೆ—ಇಲ್ಲ ! ಇಲ್ಲ ! ನನಗೆ ಕೋಪವಿಲ್ಲ ! ದುಃಖಿಸುತ್ತಿರುವೆನು.

ರಾಜಂ—ಕೋಪವಿಲ್ಲದಿದ್ದರೆ ನಿನ್ನ ಮೈಮೇಲೆ ಅಲಂಕಾರವೇನೂ ಇಲ್ಲದೆ ಇರಲು ಕಾರಣವೇನು ?

ವಾಸವದತ್ತೆ—ಬೇರೆ ಕಾರಣವೇನಿದೆ ?

ರಾಜಂ—ನಿನಗೆ ಸಪತ್ನೀ ಪ್ರಾಯಳಾಗಿದ್ದ ಆ ವಿರಚಿಕೆಯೇನಾದರೂ ಈಗ ನಿನ್ನ ನೆನಪಿಗೆ ಬಂದಳೇನು ?

ವಾಸವದತ್ತೆ—(ಕೋಪದಿಂದ) ಕಾಂತ ! ಸಾಕು ಬಿಡು ! ಇಲ್ಲಿಯೂ ನಿನಗೆ ಆ ವಿರಚಿಕೆಯ ಚಿಂತೆಯೆ ?

ರಾಜಂ—ನಿನಗೆ ಅವಳ ವಿಷಯವಾಗಿ ನನ್ನ ಮೇಲೆ ಕೋಪವಿದ್ದರೆ, ಇದೋ! ಕೈಮುಗಿದು ನಿನ್ನ ಮನ್ನಣೆಯನ್ನು ಕೇಳಿಕೊಳ್ಳುವೆನು. (ಕೈಗಳನ್ನು ಮೇಲೆ ನೀಡುವನು.)

ವಾಸವದತ್ತೆ—ಅಯ್ಯೋ ! ಇದೇನು ? ನಾನು ಬಹಳ ಹೊತ್ತಿನಿಂದ ಇಲ್ಲಿ ನಿಂತುಬಿಟ್ಟೆನು. ಯಾರಾದರೂ ಇಲ್ಲಿಗೆ ಬಂದು ನನ್ನನ್ನು ನೋಡಿದರೆ ಪ್ರಮಾದವು ! ಹೊರಡುವೆನು. ಆಹಾ ! ಹಾಸುಗೆಯಿಂದ ಹೊರಕ್ಕೆ ನೀಡಿ ಜೋಲಾಡುತ್ತಿರುವ ಆರ್ಯಪುತ್ರನ ಈ ತೋಳುಗಳನ್ನು ಸರಿಯಾಗಿ ಇರಿಸಿ ಹೋಗುವೆನು. (ಹಾಗೆಮಾಡಿ ಹೋಗುವಳು.)

ರಾಜಂ—(ದಿಗ್ಗನೆ ಮಂಚದಿಂದೆದ್ದು) ವಾಸವದತ್ತೇ ! ನಿಲ್ಲು ! ನಿಲ್ಲು ! ಹಾ !

ಅತಿಸಂಭ್ರಮದಿಂ ಹೊರಗೆ |
ಯ್ದುತೆ ನಾನೀದ್ವಾರಬಂಧಘಟ್ಟನವಿನಿವಾ ||
ರಿತನಾದೆನದರಿನಿದು ಮ |
ನ್ಮತಿಯೊಳ್ ಕಲ್ಪಿತಮೊ ! ನಿಜದೆ ನಡೆದುದೊ ಕಾಣೆಂ ||೩೨||

(ವಿದೂಷಕನು ಪ್ರವೇಶಿಸುವನು)

ವಿದೂ—ಓಹೋ ! ಮಹಾರಾಜನು ಆಗಲೇ ಎಚ್ಚರಗೊಂಡಿರುವನು.

ರಾಜಂ—ಮಿತ್ರನೆ ! ಮಿತ್ರನೆ ! ಒಂದು ಪ್ರಿಯವೃತ್ತಾಂತವನ್ನು ತಿಳಿಸುವೆನು. ವಾಸವದತ್ತಾ ದೇವಿಯು ಜೀವಿಸಿರುವಳು.

ವಿದೂ—ಅಯ್ಯೋ ! ವಾಸವದತ್ತೆಯೆ ! ಇನ್ನೂ ಅವಳೆಲ್ಲಿರುವಳು ; ! ವಾಸವದತ್ತೆಯು ಆಗಲೇ ಹೋದಳಲ್ಲವೆ ?

ರಾಜಂ—ಹಾಗೆನ್ನಬೇಡ !

ಎಲೆ ಮಿತ್ರನೆ ! ಕೇಳ್ ಶಯ್ಯಾ |
ತಲದೊಳ್ ಮಲಗಿದನನೆನ್ನ ನೆಳ್ಚಿಸಿ ಪೋದಳ್ ||
ಲಲನೆಯಪಳಗ್ನಿಯೊಳ್ ಬೆಂ |
ದಳೆಂದು ವಂಚಿಸಿದನೆನ್ನ ಮೈಸೆ ! ರುಮಣ್ವಂ || ೩೩ ||

ವಿದೂ—ಮಿತ್ರನೆ ! ಚೆನ್ನಾಯಿತು ! ಇನ್ನೂ ವಾಸವದತ್ತೆಯು ಬದುಕಿರುವುದೆಂದರೇನು ? ಎಂದಿಗೂ ಇದು ಸಂಭಾವ್ಯವಲ್ಲ ! ಒಂದುವೇಳೆ ಸ್ವಲ್ಪ ಮೊದಲು ನಾವು ಉಜ್ಜಯಿನಿಯ ಸ್ನಾನಘಟ್ಟದ ವಿಚಾರವನ್ನು ಕುರಿತು ಮಾತಾಡುತ್ತಿದ್ದುದರಿಂದ, ಅದರ ಮೇಲೆ ನಿನಗೆ ಅವಳ ಭಾವನೆಯು ಮನಸ್ಸಿನಲ್ಲಿದ್ದು, ಸ್ವಪ್ನದಲ್ಲಿಯೂ ಅವಳನ್ನು ಕಂಡಿರಬಹುದೋ ಏನೊ !

ರಾಜಂ—ಹೇಗಾದರೇನು ? ಒಂದುವೇಳೆ (ನೀನು ಊಹಿಸುವಂತೆ) ಅದು ಸ್ವಪ್ನವೇ ಆಗಿರಲಿ ! ಹಾಗಿದ್ದಪಕ್ಷದಲ್ಲಿ—

ಅದು ಕನಸಾಗಿರ್ದೊಡೆ ತನ |
ಗದರಿಂದೆಚ್ಚರಮನೊಂದದಿರೆ ಲೇಸಕ್ಕುಂ ||
ಮದನೋನ್ಮಾದಮದಾದೊಡ |
ಮದೆ ವಿಕಲತೆ ಸುಚಿರಮಿರ್ಕೆ ಮನ್ಮಾನಸದೊಳ್ || ೩೪ ||

ವಿದೂ—ಮಿತ್ರನೆ ! ಈ ನಗರದಲ್ಲಿ ಅವಂತಿಸುಂದರಿಯೆಂಬ ಯಕ್ಷಿಣಿಯೊಬ್ಬಳು ವಾಸಿಸುವಳು. ಒಂದುವೇಳೆ ಅವಳು ನಿನ್ನ ಕಣ್ಣಿಗೆ ಬಿದ್ದಿರಬಹುದೇನೋ !

ರಾಜಂ—ಇಲ್ಲ ! ಇಲ್ಲ ! ಕೇಳು—

ಕನಸಿಂದೆಚ್ಚರುಗೊಂಡೊಡ |
ನೆನಗಾ ಸೌಶೀಲ್ಯವತಿಯ ಲಂಬಾಲಕಮಂ ||
ಜನರಹಿತವಿಲೋಚನಮಾ |
ನನಪದ್ಮಂ ಕಣ್ಣ ಮುಂದೆ ತೋರಿತ್ತಾಗಳ್ || ೩೫ ||

ಅಲ್ಲದೆ ವಯಸ್ಯನೆ ! ನೋಡು, ನೋಡು !

ವನಿತೆಯವಳ್ ಭಯದಿಂದೊ |
ಯ್ಯನೆ ಬಂದೀಯೆನ್ನ ತೋಳ್ಗಳಂ ಪಿಡಿದೆತ್ತಲ್ ||
ಕನಸಿನೊಳವಳಂಗಸ್ಪ |
ರ್ಶನದಿಂದೆನಗೊಗೆದ ಪುಳಕಮಿನ್ನುಂ ತೋರ್ಕುಂ ||೩೬||

ವಿದೂ—ಮಹಾರಾಜನೆ! ಈಗ ಹೀಗೆ ಕೆಲಸಕ್ಕೆ ಬಾರದುದನ್ನೆಲ್ಲಾ ಚಿಂತಿಸಿ ಫಲವಿಲ್ಲ! ಬಾ! ಚತುಶ್ಶಾಲೆಯೊಳಕ್ಕೆ ಹೋಗುವೆವು.

[ಕಂಚುಕಿಯು ಪ್ರವೇಶಿಸಿ]

ಕಂಚುಕಿ—ಆರ್ಯಪುತ್ರನಿಗೆ ವಿಜಯವಾಗಲಿ! ನಮ್ಮ ದರ್ಶಕ ಮಹಾರಾಜನು ಹೀಗೆಂದು ಹೇಳಿಕಳುಹಿಸಿರುವನು. ನಮ್ಮ ಮಂತ್ರಿವರ್ಯನಾದ ರುಮಣ್ವಂತನು ದೊಡ್ಡ ಸೈನ್ಯವನ್ನು ಸೇರಿಸಿಕೊಂಡು, ಆರುಣಿಯನ್ನು ನಿಗ್ರಹಿಸುವುದಕ್ಕಾಗಿ ಇಲ್ಲಿಗೆ ಹೊರಟುಬಂದಿರುವನು. ಆದರಂತೆ ಇಲ್ಲಿಯೂ ಗಜಾಶ್ವರಥಪದಾತಿಗಳಿಂದ ತುಂಬಿದ ನಮ್ಮ ಸೈನ್ಯಗಳೂ ಸಿದ್ಧವಾಗಿವೆ. ಇನ್ನು ನೀನು ಬೇಗ ಏಳು! ಅಲ್ಲದೆ—

ಅರಿಸೈನ್ಯಂ ಭೇದಮೊಂದಿತ್ತಖಿಲಪುರಜನಂ ನಿನ್ನೊಳಿರ್ಪೊಲ್ಮೆಯಿಂದಾ |
ಪರಿತೋಷಂದಾಳ್ದುದೀ ನಿನ್ನಯ ಪಯಣಕೆ ಬೆಂಗಾವಲುಂ ಸಿದ್ಧಮಾಯ್ತಿ ||
ನ್ನರಿಯಂ ನಿರ್ಮೂಲಿಸಲ್ ಬೇಳ್ಪನಿತುಮನಣಿಗೆಯ್ದಿರ್ಪೆನಾಂ ಗಂಗೆಯಂ ನಿ |
ತ್ತರಿಸಿತ್ತಸ್ಮದ್ಬಲಂ, ನಿನ್ನಯ ಕರಗತಮಿನ್ನಾರಯಲ್ ವತ್ಸರಾಜ್ಯಂ ||೩೭||

ರಾಜಂ—(ಮೇಲೆದ್ದು) ನಿಜ! ಈಗಲೇ ನಾನು—

ಕರಿತುರಗತರಣಿಗಣದಿಂ |
ಶರೌಘಭಂಗದೆ ಮಹಾಬ್ಧಿಗೆಣೆಯಹ ಕಳದೊಳ್ ||
ದುರುಳನನಾರುಣಿಯಂ ಸಂ |
ಹರಿಸುತೆ ದಿಗ್ಬಲಿಯನೀಯಲಿದೊ ಪೋದಪೆನಾಂ ||೩೮||

(ಎಲ್ಲರೂ ಹೋಗುವರು)

ಇದು

ಪಂಚಮಾಂಕಂ

— ಷ ಷ್ಠಾ ೦ ಕ ೦ —

[ಕಂಚುಕಿಯು ಪ್ರವೇಶಿಸುವನು]

ಕಂಚುಕಿ—ಎಲ್ಲೈ ! ಯಾರಲ್ಲಿ ! ಈ ಚಿನ್ನದ ಬಾಗಿಲಲ್ಲಿ ಕಾವಲಿರುವರು ಯಾರು ?

(ಪ್ರತೀಹಾರಿ ಪ್ರವೇಶಿಸುವಳು)

ಪ್ರತೀ—ಆರ್ಯನೆ ! ನಾನು ವಿಜಯೆ ! ನನ್ನಿಂದೇನಾಗಬೇಕು !

ಕಂಚುಕಿ—ಭದ್ರೆ ! ವತ್ಸರಾಜ್ಯದ ಲಾಭದಿಂದ ಜಯಶೀಲನಾದ ಉದಯನ ಮಹಾರಾಜನಿಗೆ ನಾನು ಹೇಳುವ ಈ ಸಂಗತಿಯನ್ನು ಈಗಲೇ ತಿಳಿಸು ಹೋಗು. ಮಹಾಸೇನನ ಕಡೆಯಿಂದ ರೈಭ್ಯನೆಂಬ ಕಂಚುಕಿಯೂ, ಪೂಜ್ಯಳಾದ ಅಂಗಾರವತಿಯಿಂದ ಕಳುಹಿಸಲ್ಪಟ್ಟ ವಸುಂಧರೆಯೆಂಬ ವಾಸವದತ್ತಾದೇವಿಯ ದಾದಿಯೂ ಬಂದು ಬಾಗಿಲಲ್ಲಿ ನಿಂತಿರುವರೆಂದು ತಿಳಿಸಿ ಬಾ ಹೋಗು !

ಪ್ರತೀ—ಆರ್ಯನೆ ! ಪ್ರತೀಹಾರಿಗಳು ರಾಜನ ಬಳಿಗೆ ಹೋಗುವುದಕ್ಕೆ ಇದು ಸಮಯವಲ್ಲ ! ಅದು ನಾವು ಹೋಗತಕ್ಕ ಸ್ಥಳವೂ ಅಲ್ಲ.

ಕಂಚುಕಿ—ಭದ್ರೆ ! ಇದೇನು ! ರಾಜನ ಬಳಿಗೆ ಹೋಗಲು ಕಾಲದೇಶಗಳು ಸರಿಯಾಗಿಲ್ಲವೆ ? ಕಾರಣವೇನು ?

ಪ್ರತೀ—ಅಯ್ಯಾ ! ಕೇಳು ! ಮಹಾರಾಜನಿಗೆ ಈಗ ಹೊಸದಾಗಿ ವಿವಾಹಿತಳಾದ ರಾಣಿಯ ಅಂತಃಪುರದ ಉಪ್ಪರಿಗೆಯ ಮುಂಭಾಗದಲ್ಲಿ ಯಾರೋ ವೀಣೆಯನ್ನು ನುಡಿಸುತ್ತಿದ್ದರು. ಆ ಧ್ವನಿಯನ್ನು ಕೇಳಿ ರಾಜನು "ಇದೇನು ! ಘೋಷವತಿಯೆಂಬ ನನ್ನ ವೀಣೆಯ ಧ್ವನಿಯಂತಿರುವುದು !" ಎಂದು ಕೇಳಿದನು.

ಕಂಚುಕಿ—ಆಮೇಲಾಮೇಲೆ ?

ಪ್ರತೀ—ಆಮೇಲೆ ಅಲ್ಲಿಗೆ ಹೋಗಿ "ಆ ವೀಣೆಯು ಎಲ್ಲಿ ಸಿಕ್ಕಿತು ?" ಎಂದು ಕೇಳಲು, ಅಲ್ಲಿದ್ದವನೊಬ್ಬನು "ಈ ವೀಣೆಯು ನಮಗೆ ನರ್ಮದಾ

ನದಿಯ ತೀರದಲ್ಲಿ ಬೆಳೆದಿದ್ದ ನೊದೆ ಹುಲ್ಲಿನ ಪೊದೆಯಲ್ಲಿ ಸಿಕ್ಕಿತು, ಮಹಾರಾಜನಿಗೆ ಇದರಿಂದೇನಾದರೂ ಪ್ರಯೋಜನವಿದ್ದ ಪಕ್ಷದಲ್ಲಿ ತೆಗೆದುಕೊಳ್ಳಬಹುದು'' ಎಂದು ಹೇಳಿದನು. ಆಮೇಲೆ ಆ ವೀಣೆಯನ್ನು ತಂದು ಮಹಾರಾಜನಿಗೆ ತೋರಿಸಲು, ಅವನು ಅದನ್ನು ಆದರದಿಂದ ತೊಡೆಯಮೇಲಿಟ್ಟುಕೊಂಡು, ಹಾಗೆಯೇ ಮೂರ್ಛಿತನಾದನು. ಆಮೇಲೆ ಮೆಲ್ಲನೆ ಚೇತರಿಸಿಕೊಂಡು ಮೇಲೆದ್ದು, ಕಣ್ಣೀರು ತುಂಬಿದ ಮುಖದೊಡನೆ ಆ ವೀಣೆಯನ್ನು ನೋಡಿ ''ಹಾ! ಘೋಷವತಿ! ನಿನ್ನನ್ನೇನೋ ಕಂಡೆನು! ಅವಳನ್ನು ಮಾತ್ರ ಕಾಣಲಿಲ್ಲ!'' ಎಂದು ದುಃಖಿಸುತ್ತಿದ್ದನು ಆರ್ಯನೆ! ಇಂತಹ ಸ್ಥಿತಿಯಲ್ಲಿ ನಾನು ಹೋಗಿ ನಿನ್ನ ಸಮಾಚಾರವನ್ನು ಹೇಗೆ ತಿಳಿಸಲಿ? ಆದುದರಿಂದ ಇದು ಸಮಯವಲ್ಲವೆಂದನು.

ಕಂಚುಕಿ—ಭದ್ರೆ! ಇರಲಿ ಚಿಂತೆಯಿಲ್ಲ. ನೀನು ಹೋಗಿ ತಿಳಿಸು. ಈಗ ನಾವು ಬಂದಿರುವುದೂ ಆದಕ್ಕೆ ಸಂಬಂಧಿಸಿದ ವಿಷಯವೆ.

ಪ್ರತೀ—ಸರಿ. ಹಾಗಿದ್ದರೆ ಹೋಗಿ ತಿಳಿಸುವೆನು. (ತೆರೆಯಕಡೆ ನೋಡಿ)

ಕಂಚುಕಿ—ಹಾಗೆಯೇ ಮಾಡು. (ಇಬ್ಬರೂ ಹೋಗುವರು).

ಇದು

ಮಿಶ್ರವಿಷ್ಕಂಭವು.

[ರಾಜನೂ ವಿದೂಷಕನೂ ಪ್ರವೇಶಿಸುವರು]

ರಾಜ—(ವೀಣೆಯನ್ನು ನಿರ್ದೇಶಿಸಿ)

ಎಲೆ ಕಲರವೆ! ದೇವಿಯ ತುಂ।
ದಿಲಜಘನಸ್ತನತಟಾಗ್ರದೊಳ್ ಸುಖದಿಂದಂ ॥
ಮಲಗಿದ ನೀನೆಂತು ವನ।
ಸ್ಥಲಿಯೊಳ್ ಖಗಮಲವಿಲೇಪಿತಾಂಗಿ ಪೊರಳ್ದೈ? ॥ ೩೯ ॥

ಎಲೆ ಘೋಷವತಿ....? ನೀನು ಸ್ವಲ್ಪವಾದರೂ ಸ್ನೇಹಭಾವವನ್ನು ನೆನೆಸುವ ಹಾಗೆ ತೋರಲಿಲ್ಲ. ನಿನ್ನ ಸಖಿ ವಾಸವದತ್ತೆಯ ಶೋಚನೀಯಾವಸ್ಥೆಯನ್ನೂ ನೀನು ಸ್ಮರಿಸದಿರುವೆಯಲ್ಲಾ!

ನಿನ್ನಂಪೊತ್ತುದನಂಗಪೀಡನೆಗೆ ತಾಂ ಸೈತಿರ್ದುದಂ, ಶ್ರಾಂತಿ ತೀ |
ರ್ವನ್ನಂ ನಿನ್ನನೆ ತನ್ನ ಬಿಣ್ಮೊಲೆಯೊಳಿಟ್ಟಪ್ಪಿರ್ದುದಂ, ಕಾಂತೆ ಮ ||
ತ್ತಿನ್ನಂ ಕಾಣದಗಲ್ಕೆಯಿಂದಳಲ್ದುದಂ. ತ್ವನ್ನಾದದಿಂಪಿಂಗವಳ್ |
ತನ್ನೊಳ್ ಮೆಲ್ಲಗೆವೀರ್ದ್ದುದಂ ನೆನೆಯದಾದ್ಯೆ ನಿನ್ನ ನೈಘೃರ್ಣ್ಯಮೇಂ? ||೪೦||

ವಿದೂ—ಮಹಾರಾಜನೆ! ಸೈರಿಸು. ಇದಕ್ಕಾಗಿ ನೀನು ಇಷ್ಟೊಂದು ದುಃಖಿಸಬಾರದು.

ರಾಜಂ—ಮಿತ್ರನೆ! ಹಾಗಲ್ಲ.

ಚಿರಕಾಲದಿಂದಮೆನ್ನೊಳ್ |
ಮರೆತು ಮಲಂಗಿರ್ದ್ದ ಕಾಮಮುಂ ವೀಣೆಯಿದೆ ||
ಚ್ಚರಿಸಿತು! ಮತ್ತಾವಳ್ಗಿದು |
ಪರಮಪ್ರಿಯಮವಳನುಳಿದದೆಂತಿರ್ದ್ದಪೆನಾಂ? || ೪೧ ||

ವಸಂತಕ! ಶಿಥಿಲವಾದ ಈ ವೀಣೆಯನ್ನು ಶಿಲ್ಪಿಗಳ ಕೈಯಲ್ಲಿ ಕೊಟ್ಟು ತಿರುಗಿ ಹೊಸದಾಗಿ ಕಾಣುವಂತೆ ಸರಿಮಾಡಿಸಿಕೊಂಡು ಬಾ ಹೋಗು.

ವಿದೂ—ಅಪ್ಪಣೆ (ಎಂದು ವೀಣೆಯನ್ನು ತೆಗೆದುಕೊಂಡು ಹೊರಟುಹೋಗುವನು)

[ಪ್ರತೀಹಾರಿ ಪ್ರವೇಶಿಸುವಳು]

ಪ್ರತೀ—ಮಹಾರಾಜನಿಗೆ ಜಯವಾಗಲಿ! ಮಹಾಸೇನನು ಕಳುಹಿಸಿದ ರೈಭ್ಯನೆಂಬ ಕಂಚುಕಿಯೊಬ್ಬನೂ, ಅಂಗಾರವತೀ ಮಹಾರಾಣಿಯವರ ಕಡೆಯಿಂದ ವಾಸವದತ್ತಾದೇವಿಯ ದಾದಿಯೊಬ್ಬಳೂ ದರ್ಶನಾರ್ಥವಾಗಿ ಬಾಗಿಲಲ್ಲಿ ಕಾದಿರುವರು.

ರಾಜಂ—ಓಹೋ! ಹಾಗಿದ್ದರೆ ಈಗಲೇ ಪದ್ಮಾವತಿಯನ್ನು ಇಲ್ಲಿಗೆ ಕರೆದುಕೊಂಡು ಬಾ. ಹೋಗು.

ಪ್ರತೀ—ಅಪ್ಪಣೆ. (ಹೋಗುವಳು.)

ರಾಜಂ—ಈ ಸಂಗತಿ ಇಷ್ಟು ಬೇಗನೆ ಮಹಾಸೇನನಿಗೆ ಹೇಗೆ ತಿಳಿಯಿತು ?

(ಪ್ರತೀಹಾರಿಯೊಡನೆ ಪದ್ಮಾವತಿ ಬರುವಳು)

ಪ್ರತೀ—ಇತ್ತಬಾ ! ರಾಜಕುಮಾರಿ ! ಇತ್ತಬಾ !

ಪದ್ಮಾ—ಆರ್ಯಪುತ್ರನಿಗೆ ಜಯವಾಗಲಿ !

ರಾಜಂ—ಪದ್ಮಾವತಿ ! ಮಹಾಸೇನನ ಕಡೆಯಿಂದ ಕಂಚುಕಿಯೂ, ಅಂಗಾರವತೀದೇವಿಯ ಕಡೆಯಿಂದ ವಾಸವದತ್ತೆಯ ದಾದಿ ವಸುಂಧರೆಯೂ ಬಂದಿರುವ ಸಂಗತಿಯನ್ನು ನೀನು ಕೇಳಿದೆಯಲ್ಲವೇ ?

ಪದ್ಮಾ—ಆರ್ಯಪುತ್ರನೆ, ನಮ್ಮ ಬಂಧುಗಳ ಕುಶಲವೃತ್ತಾಂತವನ್ನು ಕೇಳಲು ನನಗೆಷ್ಟೋ ಪ್ರಿಯವಲ್ಲವೇ ?

ರಾಜಂ—ಭಲೆ ! ಪ್ರಿಯೆ ! ನಿನ್ನ ಗುಣಕ್ಕೆ ತಕ್ಕಂತೆಯೇ ಆಡಿದೆ. ವಾಸವದತ್ತೆಯ ಕಡೆಯವರನ್ನು ನೀನು ಸ್ವಜನದಂತೆಯೇ ಭಾವಿಸಿದೆಯಲ್ಲವೇ ? ಪ್ರಿಯೆ ! ಕುಳ್ಳಿರು.

ಪದ್ಮಾ—ಆರ್ಯಪುತ್ರನು ನನ್ನನ್ನೂ ಸಮೀಪದಲ್ಲಿಟ್ಟುಕೊಂಡೇ ಅವರಿಬ್ಬರನ್ನೂ ನೋಡಬೇಕೆಂಬ ಇಷ್ಟವೇನು ?

ರಾಜಂ—ಅದರಲ್ಲಿ ತಪ್ಪೇನು ?

ಪದ್ಮಾ—ಆರ್ಯಪುತ್ರನ ದ್ವಿತೀಯ ಭಾರ್ಯೆಯಾದ ನನ್ನನ್ನು ಕಂಡು ಅವರಿಗೆ ಔದಾಸೀನ್ಯವು ಹುಟ್ಟಬಹುದು.

ರಾಜಂ—ಪ್ರಿಯೆ, ಹಾಗಲ್ಲ. ಅಂತಃಪುರಸ್ತ್ರೀಯರನ್ನು ನೋಡಲು ಅರ್ಹತೆಯುಳ್ಳ ಬಂಧುಗಳ ಕಡೆಯವರಿಗೆ, ಅದಕ್ಕೆ ಅವಕಾಶಕೊಡದಿದ್ದರೆ ಅಪವಾದವು ಬರುವುದಲ್ಲವೇ ? ಆದುದರಿಂದ ನೀನು ಇಲ್ಲಿರು.

ಪದ್ಮಾ—ಪ್ರಿಯನ ಇಷ್ಟವಿದ್ದಂತಾಗಲಿ. (ಕುಳಿತು) ಆರ್ಯಪುತ್ರನೆ, ಮತ್ತೇನೂ ಇಲ್ಲ. ಆದರೆ ವಾಸವದತ್ತೆಯ ತಂದೆಯಾಗಲಿ, ತಾಯಾಗಲಿ ಏನು ಹೇಳುವರೋ ಎಂದು ನನ್ನ ಮನಸ್ಸು ಶಂಕಿಸುತ್ತಿದೆ.

ರಾಜಂ—ಪದ್ಮಾವತಿ ! ಹೌದು. ನ್ಯಾಯವೇ.

ತನಗೇನೆಂಬರೊ ತಂದೆತಾಯ್ಗಳೆನುತುಂ ಚಿಂತಾಕುಲಂ ಮನ್ಮನಂ |
ವನಿತಾರತ್ನಮನುಯ್ದು ತಂದುಮದನಾಂ ಸಂರಕ್ಷಿಸಲ್ಕಾರದಾ ||
ದೆನಲಾ ! ಚಂಚಲಭಾಗ್ಯದಾಸೆಯಿನಣಂ ಮರ್ಯಾದೆಯಂ ಮೀರಿ ಸ |
ಜ್ಜನರೊಳ್ ನಾಂ ಜನಕಂಗೆ ಕೇಡೆಸಗಿದಾ ದುರ್ಜಾತನಂತಂಜುವೆಂ || ೪೨ ||

ಪದ್ಮಾ—ನೀನು ಅವಳನ್ನು ಸಮಯದಲ್ಲಿ ರಕ್ಷಿಸಲಾರದೆ ಹೋದೆಯಾ ?

ಪ್ರತೀಹಾರಿ—ಮಹಾರಾಜನೆ ! ಕಂಚುಕಿಯೂ, ದಾದಿಯೂ ಬಾಗಿಲಲ್ಲಿ ಕಾದಿರುವರಲ್ಲವೇ !

ರಾಜಂ—ಹೋಗು ! ಹೋಗು ! ಬೇಗನೆ ಕರೆದುಕೊಂಡು ಬಾ.

ಪ್ರತೀ—ಅಪ್ಪಣೆ.

[ಹೋಗಿ ಇಬ್ಬರನ್ನೂ ಕರೆತರುವರು]

ಕಂಚುಕಿ—ಆಹಾ !

ಎನಗೀ ಬಾಂಧವರಾಜ್ಯಕೈದಿ ಹೃದಯಂ ಸಂತುಷ್ಟಿಯಾಂತಿರ್ದೊಡಂ |
ನೆನೆಯಲ್ ತನ್ನೃಪಕನ್ಯಕಾನಿಧನಮಂ ದುರ್ವಾರಸಂತಾಪಕೀ ||
ಡೆನಿಕುಂ, ದೈವಮದೆಮ್ಮ ರಾಜ್ಯಮನಿದಂ ತಂದಿತ್ತವೋಲ್ ರಾಜನಂ |
ದನೆಯಂ ಕ್ಷೇಮದೆ ತಂದೊಡಿನ್ನು ಪೆರತೇನುಂಟಸ್ಮದಾಕಾಂಕ್ಷಿತಂ || ೪೩ ||

ಪ್ರತೀ—ಇದೋ ಮಹಾರಾಜನು ! ಸಮೀಪಿಸು.

ಕಂಚುಕಿ—(ಸಮೀಪಿಸಿ) ಮಹಾರಾಜನಿಗೆ ಜಯವಾಗಲಿ !

ಧಾತ್ರಿ—ದೇವ ! ವಿಜಯಿಸು.

ರಾಜಂ—(ಗೌರವದಿಂದ) ಆರ್ಯನೆ !

ಇಳೆಯೊಳ್ ಸಮಸ್ತ ಪಾರ್ಥಿವ |
ಕುಲೋದಯಾಸ್ತಮಯಕಾರ್ಯದಕ್ಷಂ ಭೂಭೃತ್ ||
ತಿಲಕನದಾವಂ ಕೊಳ್ಕೊಡೆ |
ಗೆಳಸಿದನೆಮ್ಮೊಡನವಂಗೆ ಕುಶಲಮೆ ಪೇಳ್ಕೈ || ೪೪ ||

ಕಂಚುಕಿ—ಹೌದು ! ಮಹಾಸೇನನು ಕ್ಷೇಮದಿಂದಿರುವನು. ಇಲ್ಲಿ ನಿಮ್ಮೆಲ್ಲರ ಕ್ಷೇಮವನ್ನೂ ವಿಚಾರಿಸಿದನು.

ರಾಜಂ—(ಗೌರವದೊಡನೆ ಪೀಠದಿಂದೆದ್ದು) ಮಹಾಸೇನನು ಏನೆಂದು ಅಜ್ಞಾಪಿಸುವನು ?

ಕಂಚುಕಿ—ವೈದೇಹೀಕುಮಾರನಾದ ನಿನಗೆ ಈ ವಿನಯವು ಸಹಜವೇ. ಆದರೆ, ನೀನು ಆಸನದಲ್ಲಿ ಕುಳಿತುಕೊಂಡೇ ಸಂಗತಿಯನ್ನು ಕೇಳಬೇಕು. ಹಾಗಿದ್ದರೆ ಮಾತ್ರ ಅವನಿಗೆ ಪ್ರೀತಿ.

ರಾಜಂ—ಮಹಾಸೇನನ ಆಜ್ಞೆಯಂತಾಗಲಿ (ಕುಳ್ಳಿರುವನು.)

ಕಂಚುಕಿ—ಶತ್ರುಗಳಿಂದ ಅಪಹೃತವಾಗಿದ್ದ ರಾಜ್ಯವು ದೈವಯೋಗದಿಂದ ಪುನಃ ನಿನ್ನ ಕೈಸೇರಿತು. ಏಕೆಂದರೆ—

ಪರಿಕಿಸಲಬಲರೊಳಂ ಭೀ |
ತರೊಳಂ ತಲೆದೋರದಿನಿಸುಮುತ್ಸಾಹಗುಣಂ ||
ಧರೆಯೊಳದೆಂದುಂ ರಾಜ್ಯದ |
ಸಿರಿ ಕಾರ್ಯೋತ್ಸಾಹಯುತರ ಕೈವಶಮಲ್ತೇ ? || ೮೫ ||

ರಾಜಂ—ಆರ್ಯನೆ, ಇವೆಲ್ಲವೂ ಮಹಾಸೇನನ ಪ್ರಭಾವವೇ. ಏಕೆಂದರೆ—

ಸೆರೆಯೊಳ್ ಸಿಲ್ಕಿಸಿ ತನ್ನನಂದು ಸೆಳೆದುಯ್ದುಂ ಪುತ್ರವಾತ್ಸಲ್ಯದಿಂ |
ಪೊರೆದಂ, ಮತ್ತೆ ತದೀಯಪುತ್ರಿಯನೆ ನಾಂ ಕಳ್ದುಯ್ದುಮಾಕಾಂತೆಯಂ ||
ಪೊರೆಯಲ್ಕಾರದೆ ಪೋದೆನಾಕೆಯಳಿವಂ ಕೇಳ್ದುಂ ನೃಪಂ ತನ್ನನಾ |
ದರಿಪಂ ಮೇಣೆನಗಿಂದು ರಾಜ್ಯವಿಜಯಕ್ಕಂ ಕಾರಣಂ ತಾನವಂ || ೮೬ ||

ಕಂಚುಕಿ—ಇದೇ ಮಹಾಸೇನನ ಸಂದೇಶವು. ಅಂಗಾರವತೀದೇವಿಯು ಹೇಳಿ ಕಳುಹಿಸಿದ ಕೆಲವು ಮಾತುಗಳನ್ನು ಈ ದಾದಿ ತಿಳಿಸುವಳು.

ರಾಜಂ—ಅಮ್ಮಾ !

ಪದಿನಾರು ಮಂದಿ ಮೋಹದ |
ಸುದತಿಯರೊಳ್ ಜ್ಯೇಷ್ಠಮಹಿಷಿ ಪುರದೇವತೆಯಂ ||
ದದಿ ಪಾವನೆಯೆನ್ನ ವಿವಾ |
ಸದುಃಖದಿಂದಳಲ್ವ ಮಾತೆಗೇಂ ಕುಶಲಮೆ ಪೇಳ್ || ೮೭ ||

ಧಾತ್ರಿ—ಮಹಾರಾಣಿಯು ಆರೋಗ್ಯದಿಂದಿರುವಳು. ನಿನ್ನ ಮತ್ತು ನಿನಗೆ ಸಂಬಂಧಪಟ್ಟವರೆಲ್ಲರ ಕ್ಷೇಮವನ್ನೂ ಕೇಳುಪಂತೆ ಹೇಳಿರುವಳು.

ರಾಜಂ—(ದುಃಖದಿಂದ ನಿಟ್ಟುಸಿರುಬಿಟ್ಟು) ಏನು ? ನಮ್ಮೆಲ್ಲರ ಕ್ಷೇಮವೇ ? ಇದೋ ನನಗಿರತಕ್ಕ ಎಲ್ಲಾ ಕುಶಲವೂ ಇದೇ !

ಧಾತ್ರಿ—ಮಹಾರಾಜನು ಈಗ ಇಷ್ಟು ವ್ಯಸನಪಡುವುದುಂಟೇ !

ಕಂಚುಕಿ—ಆರ್ಯಪುತ್ರನೆ ! ಸಂತೈಸು ! ನೀನು ಇಷ್ಟೊಂದು ಮಮತೆಯನ್ನು ತೋರಿಸುವಾಗ, ಮಹಾಸೇನನ ಪುತ್ರಿಯು ಮೃತಳಾಗಿದ್ದರೂ ಜೀವಿಸಿರುವಂತೆಯೇ ಭಾವಿಸಬಹುದು. ಅಥವಾ,

ಮಡಿವಾಗಳಾರನಾರ್ ಕಾ |
ಪಿಡಿಲಾರ್ಪರ್ ? ಪಾಶಮುಡಿಯೆ ಬೀಳ್ವ ಘಟಮಂ ||
ಪಿಡಿಯಲ್ಕಕ್ಕುಮೆ ! ಕಾಲದೆ |
ಕಡಿವಡೆಗುಂ ಬೆಳಗುಮಡವಿಯಂತಿರೆ ಲೋಕಂ || ೪೮ ||

ರಾಜಂ—ಆರ್ಯನೆ ! ಹಾಗೆನ್ನಬೇಡ !

ಇನಿಯಳ್ ಮೇಣ್ ಪ್ರಿಯಶಿಷ್ಯೆಯು |
ಮೆನಿಸಿದಳೆನಗಾಕೆ ಯಾಪ್ತಮಿತ್ರಪುಹಾಸೇ ||
ನನ ಸುತೆಯಿಂತಿರಲವಳಂ |
ಜನನಾಂತರದೊಳಮದೆಂತು ನೆನೆಯದೆ ಪೋಪೆಂ || ೪೯ ||

ಧಾತ್ರಿ—ಮಹಾರಾಣಿಯು ಹೀಗೆಂದು ಹೇಳಿ ಕಳುಹಿಸಿರುವಳು :—ವಾಸವದತ್ತೆಯು ಮೃತಳಾದಳು. ನನಗಾಗಲಿ ಆರ್ಯ ಮಹಾಸೇನನಾಗಲಿ ನೀನು ನಮ್ಮ ಹೊಟ್ಟೆಯಲ್ಲಿ ಹುಟ್ಟಿದ ಗೋಪಾಲಕ ಪಾಲಕರೆಂಬ ಮಕ್ಕಳಂತೆಯೇ ಹೊರತು ಬೇರೆಯಲ್ಲ. ಮೊದಲೇ ನಾವು ನಿನ್ನನ್ನು ಅಳಿಯನನ್ನಾಗಿ ಮಾಡಿಕೊಂಡು, ಆ ಪ್ರೀತಿಯನ್ನೇ ತೋರಿಸುತ್ತ ಬಂದೆವು. ಆ ಉದ್ದೇಶದಿಂದಲೇ ನಿನ್ನನ್ನು ಉಜ್ಜಯಿನಿಗೂ ಕರೆತಂದೆವು. ಅಗ್ನಿಸಾಕ್ಷಿಕವಾಗಿ ವಿವಾಹವನ್ನು ನಡೆಸದಿದ್ದರೂ, ವೀಣೆಯನ್ನು ಅಭ್ಯಾಸಮಾಡಿಸುವ ನೆಪದಿಂದ ಅವಳನ್ನು ನಿನ್ನ ವಶಕ್ಕೆ

ಒಪ್ಪಿಸಿದ್ದೆವು. ನಿನ್ನ ಚಪಲ ಬುದ್ಧಿಯಿಂದ ನೀನು ಆತುರಪಟ್ಟು ವಿವಾಹಮಂಗಳಗಳೇನೂ ಇಲ್ಲದೆಯೇ ಅವಳನ್ನು ಕರೆದುಕೊಂಡು ಹೊರಟುಹೋದೆ ! ಆಮೇಲೆ ನಾವು ನಿನ್ನ ಮತ್ತು ವಾಸವದತ್ತೆಯ ಆಕೃತಿಗಳನ್ನು ಚಿತ್ರದಲ್ಲಿ ಬರೆಯಿಸಿ, ಆ ಚಿತ್ರಪಟಕ್ಕೇ ವಿವಾಹ ಮಂಗಳವನ್ನು ನಡೆಯಿಸಿಬಿಟ್ಟೆವು. ಇದೋ ನೋಡು ! ಅದೇ ಈ ಚಿತ್ರಪಟವು. ನಿನ್ನ ಮನಸ್ಸಮಾಧಾನಕ್ಕಾಗಿ ಇದನ್ನು ನಿನ್ನಲ್ಲಿಗೆ ಕಳುಹಿಸಿಕೊಟ್ಟಿರುವೆವು. ಇದನ್ನು ನೋಡಿಕೊಂಡು ಸಮಾಧಾನ ಹೊಂದು.

ರಾಜಂ—ಆರ್ಯೆಯ ಸ್ನೇಹಕ್ಕೂ, ಘನತೆಗೂ ತಕ್ಕ ಮಾತನ್ನು ಹೇಳಿಕಳುಹಿಸಿರುವಳು.

ಇನಿವಾತಿದೆ ತಾಂ ಪ್ರಿಯತಮ |
ಮೆನಗೀಗಳ್ ರಾಜ್ಯಲಾಭಶತದತ್ತಣಿನೆಂ ||
ತೆನಲಪರಾಧಿಯೊಳೆನ್ನೊಳ್ !
ಮುನಿಯದೆ ಮನದೊಲವನಿಂತು ಮೆರೆದಪಳಲ್ತೆ || ೫೦ ||

ಪದ್ಮಾವತಿ—ಆರ್ಯಪುತ್ರನೆ ! ನಾನೂ ಚಿತ್ರದಲ್ಲಿರುವ ಗುರುಜನವನ್ನು ನೋಡಿ ನಮಸ್ಕರಿಸಬೇಕೆಂದು ಬಯಸುವೆನು.

ಧಾತ್ರಿ—ನೋಡಮ್ಮ! ರಾಜಕುಮಾರಿ! ನೋಡು! (ಚಿತ್ರವನ್ನು ತೋರಿಸುವಳು)

ಪದ್ಮಾವತಿ—(ನೋಡಿ ತನ್ನಲ್ಲಿ ತಾನು) ಆಹಾ ! ಏನಿದು ? ಈ ಚಿತ್ರದಲ್ಲಿರುವ ಆಕೃತಿಯು ನನ್ನ ಸಖಿಯಾದ ಆವಂತಿಕೆಯ ರೂಪವನ್ನು ಹೋಲುತ್ತಿರುವುದು ! (ಪ್ರಕಾಶಂ) ಆರ್ಯಪುತ್ರನೆ. ಇದು ಪೂಜ್ಯಳಾದ ಆಕೆಯ ರೂಪವನ್ನು ಸರಿಯಾಗಿ ಹೋಲುತ್ತಿರಬಹುದಲ್ಲವೆ !

ರಾಜಂ—ಪ್ರಿಯೆ ! ಹೋಲಿಕೆ ಮಾತ್ರವಲ್ಲ ! ಅವಳೇ ಇಲ್ಲಿರುವಳೆಂದು ಭಾವಿಸುವೆನು. ಹಾ ! ಕಷ್ಟ ! ಕಷ್ಟ !

ನವಕುಸುಮಕೋಮಲಾಂಗ |
ಚ್ಛವಿಗೀದಾರುಣವಿಪತ್ತಿಯೆಂತೊದವಿತೊ ! ಮ ||

ತ್ರಿವಳಾನನಾಬ್ಜದಿಂಪಂ !
ತವಿಸಲ್ ಮನಮೆಂತು ಬಂದುದಗ್ನಿಗಮುಕಟಾ ‖ ೫೧ ‖

ಪದ್ಮಾವತಿ—ಆರ್ಯಪುತ್ರನ ಪ್ರತಿಕೃತಿಯನ್ನು ಹೋಲಿಸಿನೋಡಿ, ಅದರ ಮೇಲೆ ಇದೂ ಆರ್ಯೆಯನ್ನು ಹೋಲುವುದೇ ಇಲ್ಲವೇ ! ಎಂದು ಕಂಡುಕೊಳ್ಳಬೇಕಾಗಿದೆ.

ಧಾತ್ರಿ—ನೋಡು ರಾಜಪುತ್ರಿ ! ಚೆನ್ನಾಗಿ ನೋಡು !

ಪದ್ಮಾವತಿ—(ನೋಡಿ) ಈ ಚಿತ್ರದಲ್ಲಿ ಆರ್ಯಪುತ್ರನ ಹೋಲಿಕೆಯು ಸರಿಯಾಗಿರುವುದರಿಂದ, ಆರ್ಯೆಯ ರೂಪಕ್ಕೂ ಇದು ಸರಿಯಾಗಿರಬಹುದೆಂದು ಊಹಿಸುವೆನು.

ರಾಜಂ—ಪ್ರಿಯೆ ಇದೇನು ? ಈ ಚಿತ್ರವನ್ನು ನೋಡಿ ನಿನ್ನ ಮನಸ್ಸಿಗೆ ಏನೋ ಒಂದು ಉಲ್ಲಾಸವೂ, ವಿಚಾರವೂ ಹುಟ್ಟಿದ ಹಾಗೆ ತೋರುವುದು ! ಕಾರಣವೇನು ?

ಪದ್ಮಾವತಿ—ಆರ್ಯಪುತ್ರನೇ ! ಈ ಚಿತ್ರದಲ್ಲಿರುವ ಆಕೃತಿಯಂತೆಯೇ ನಮ್ಮ ಅರಮನೆಯಲ್ಲಿ ಒಬ್ಬ ಹೆಂಗುಸಿರುವಳು.

ರಾಜಂ—ಏನು ? ಈ ವಾಸವದತ್ತೆಯನ್ನೇ ಹೋಲುವಳೆ ?

ಪದ್ಮಾವತಿ—ಹೌದು !

ರಾಜಂ—ಎಲ್ಲಿ ! ಎಲ್ಲಿ ! ಅವಳನ್ನು ಇಲ್ಲಿಗೆ ಬರಮಾಡು ! ನೋಡುವೆವು.

ಪದ್ಮಾವತಿ—ಆರ್ಯಪುತ್ರನೆ, ನಾನು ಇನ್ನೂ ಕನ್ಯಾವಸ್ಥೆಯಲ್ಲಿದ್ದಾಗ ಒಬ್ಬ ಬ್ರಾಹ್ಮಣನು ಅವಳನ್ನು ಕರೆತಂದು ತನ್ನ ತಂಗಿಯೆಂದು ಹೇಳಿ ನನ್ನ ರಕ್ಷಣೆಯಲ್ಲಿ ಬಿಟ್ಟು ಹೋದನು. ಅವಳ ಪತಿಯು ಎಲ್ಲಿಯೋ ದೇಶಭ್ರಷ್ಟನಾಗಿ ಹೊರಟುಹೋಗಿರುವನಂತೆ ! ಆದುದರಿಂದ ಆಕೆಯು ಈ ಸ್ಥಿತಿಯಲ್ಲಿ ಪರಪುರುಷರ ಮುಂದೆ ಬಂದು ನಿಲ್ಲಲು ಇಷ್ಟಪಡುವ ಹಾಗಿಲ್ಲ. ಹಾಗಿದ್ದರೂ ನೀನು ಅವಳನ್ನು ನೋಡಬೇಕೆಂದಿದ್ದರೆ, ಅವಳು ನನ್ನ ಸಂಗಡ ಇರುವಾಗ ನೀನೂ ಬಂದು ನೋಡಿ, ಅವಳು ಯಾರೆಂಬುದನ್ನು ತಿಳಿಯಬಹುದು.

ರಾಜಂ—ತರುಣಿಯಿವಳ್ ವಿಪ್ರನ ಸೋ ।
ದರಿಯೆಂಬುದೆ ಸತ್ಯಮಾದೊಡವಳನ್ನಳೆ! ಕೇಳ್ ॥
ಧರಣಿಯೊಳೀಪರಿಯನ್ಯೋ ।
ನ್ಯರೂಪಸಾದೃಶ್ಯಮೆನಿತೊ ಕಾಣಲ್ಬರ್ಕ್ಕುಂ ॥ ೫೨ ॥

(ಪ್ರತೀಹಾರಿ ಪ್ರವೇಶಿಸುವಳು)

ಪ್ರತೀ—ಪ್ರಭುವಿಗೆ ಜಯವಾಗಲಿ! ಉಜ್ಜಯಿನಿಯ ಬ್ರಾಹ್ಮಣನೊಬ್ಬನು ಹಿಂದೆ ತನ್ನ ತಂಗಿಯೆಂದು ಹೇಳಿ ಈ ಮಹಾರಾಣಿಯವರ ವಶದಲ್ಲಿ ಬಿಟ್ಟುಹೋಗಿದ್ದ ಸ್ತ್ರೀಯನ್ನು ಹಿಂತಿರುಗಿ ಕರೆದುಕೊಂಡು ಹೋಗಲು ಬಂದು ಬಾಗಿಲಲ್ಲಿ ಕಾದಿರುವನು.

ರಾಜಂ—ಪ್ರಿಯೆ ! ನೀನು ಹೇಳಿದ ಬ್ರಾಹ್ಮಣನೇ ಆಗಿರಬಹುದೇನು ?

ಪದ್ಮಾವತಿ—ಇರಬಹುದು !

ರಾಜಂ—ಹಾಗಿದ್ದರೆ ಆ ಬ್ರಾಹ್ಮಣನನ್ನು ನನ್ನ ಅರಮನೆಯ ಪದ್ಧತಿಯಂತೆ ಯಥೋಚಿತವಾಗಿ ಸತ್ಕರಿಸಿ ಬೇಗನೆ ಕರೆದುಕೊಂಡು ಬಾ !

ಪ್ರತೀ—ಅಪ್ಪಣೆ ! (ಹೋಗುವಳು)

ರಾಜಂ—ಪದ್ಮಾವತೀ ! ಅಷ್ಟರಲ್ಲಿ ನೀನು ಹೋಗಿ ಅವಳನ್ನು ಕರೆದುಕೊಂಡು ಬರಬಹುದಲ್ಲವೆ ?

ಪದ್ಮಾವತಿ—ಆಜ್ಞೆ. (ಹೋಗುವಳು)

[ಪ್ರತೀಹಾರಿಯು ವಿಪ್ರವೇಷದ ಯೌಗಂಧರಾಯಣನನ್ನು ಕರೆತರುವಳು]

ಯೌಗಂಧ—(ತನ್ನಲ್ಲಿ ತಾನು) ಆಹಾ !
ನೃಪನ ಹಿತಾರ್ಥಮೆ ನಾಂ ತ ।
ನ್ನೃಪಸತಿಯಂ ಮರೆಸಿ ಕಾರ್ಯಮಂ ಗೆಲ್ದೊಡಮೆ ॥
ನ್ನಪರಾಧಕೇನನೆಂಬನೊ ।
ನೃಪಾಲನೆಂದೆನ್ನ ಮಾನಸಂ ತಳಮಳಿಕುಂ ॥ ೫೩ ॥

ಪ್ರತೀ—ಆರ್ಯನೆ ! ಇದೋ ! ಮಹಾರಾಜನು ಇಲ್ಲಿರುವನು. ಮುಂದೆ ಹೋಗಬಹುದು.

ಯೌಗಂಧ—(ಮುಂದೆ ಹೋಗಿ) ಪ್ರಭುವಿಗೆ ಜಯವಾಗಲಿ !

ರಾಜಂ—(ಸ್ವಗತಂ) ಏನಿದು ! ಈ ಕಂಠಸ್ವರವನ್ನು ಹಿಂದೆ ನಾನು ಅನೇಕಾವರ್ತಿ ಕೇಳಿದಂತಿದೆ. (ಪ್ರಕಾಶಂ) ಎಲೈ ಬ್ರಾಹ್ಮಣನೆ ! ನೀನೇಯೊ ಪದ್ಮಾವತಿಯಲ್ಲಿ ನಿನ್ನ ತಂಗಿಯನ್ನು ನ್ಯಾಸವಾಗಿ ಇಟ್ಟುಹೋಗಿದ್ದವನು ?

ಯೌಗಂಧ—ಹೌದು !

ರಾಜಂ—ಯಾರಲ್ಲಿ ! ಈತನ ತಂಗಿಯನ್ನು ಬೇಗನೆ ಕರೆತರುವಂತೆ ತ್ವರೆಪಡಿಸು ಹೋಗು.

ಪ್ರತೀ—ಅಪ್ಪಣೆ. (ಹೊರಡುವಳು)

[ಪದ್ಮಾವತಿ, ಆವಂತಿಕೆ ಇಬ್ಬರೂ ಪ್ರತೀಹಾರಿಯೊಡನೆ ಬರುವರು]

ಪದ್ಮಾವತಿ—ಆರ್ಯೆ! ನಡೆ! ನಡೆ! ನಿನಗೊಂದು ಪ್ರಿಯವನ್ನು ತಿಳಿಸುವೆನು.

ಆವಂತಿಕೆ—ಏನದು ?

ಪದ್ಮಾವತಿ—ನಿನ್ನಣ್ಣನು ನಿನ್ನನ್ನು ಕರೆದುಕೊಂಡು ಹೋಗುವುದಕ್ಕಾಗಿ ಬಂದಿರುವನು.

ಆವಂತಿಕೆ—ಅದೃಷ್ಟವಶದಿಂದ ಈಗಲೂ ಅವನು ನನ್ನನ್ನು ಸ್ಮರಿಸುತ್ತಿರುವನಲ್ಲವೆ ?

ಪದ್ಮಾವತಿ—(ರಾಜನಬಳಿಗೆ ಬಂದು) ಆರ್ಯಪುತ್ರನಿಗೆ ಜಯವಾಗಲಿ ! ಇದೋ ಈಕೆಯೇ ನನ್ನಲ್ಲಿ ನ್ಯಾಸರೂಪವಾಗಿರತಕ್ಕವಳು.

ರಾಜಂ—ಸರಿ ! ಹಾಗಿದ್ದರೆ ಈಗಲೇ ಆತನ ವಶಕ್ಕೆ ಹಿಂತಿರುಗಿ ಒಪ್ಪಿಸಿಬಿಡು. ಆದರೆ, ಮತ್ತೊಬ್ಬರ ಒಡವೆಯನ್ನು ಹಿಂತಿರುಗಿ ಅವರಿಗೆ ಒಪ್ಪಿಸಿಕೊಡುವಾಗ, ಸಾಕ್ಷಿಗಳ ಮುಂದೆಯೇ ಆ ಕಾರ್ಯವನ್ನು ನಡೆಸಬೇಕಾದುದು ಆವಶ್ಯವು. ಇದೋ ! ಪೂಜ್ಯನಾದ ಈ ರೈಭ್ಯನೂ ಮತ್ತು ಈ ಧಾತ್ರಿಯೂ ಇಲ್ಲಿರುವರಷ್ಟೆ? ಇವರಿಬ್ಬರನ್ನೂ ಪಂಚಾಯಿತರನ್ನಾಗಿ ಇಟ್ಟುಕೊಂಡು, ಆ ಬ್ರಾಹ್ಮಣನ ಒಡವೆಯನ್ನು ಅವನಿಗೆ ಒಪ್ಪಿಸಿಬಿಡು.

ಪದ್ಮಾವತಿ—ಆರ್ಯನೆ ! ಇನ್ನು ನೀನು ನಿನ್ನ ತಂಗಿಯನ್ನು ಕರೆದುಕೊಂಡು ಹೋಗಬಹುದು.

ಧಾತ್ರಿ—(ಅವಂತಿಕೆಯನ್ನು ಚೆನ್ನಾಗಿ ನೋಡಿ) ಆಹಾ ! ಏನಿದು ? ಇವಳು ನಮ್ಮ ಮಹಾರಾಜನ ಮಗಳು ! ವಾಸವದತ್ತೆ !

ರಾಜಂ—ಏನು ! ಏನು ! ಇವಳು ಮಹಾಸೇನನ ಪುತ್ರಿಯೆ ? ನನ್ನ ಕಾಂತೆಯಾದ ವಾಸವದತ್ತೆಯೆ ? (ನೋಡಿ) ನಿಜ ! ಇದೇನಿದು ! ಇವಳೇ ವಾಸವದತ್ತೆ ! ದೇವಿ ! ನೀನು ಈ ಪದ್ಮಾವತಿಯೊಡನೆ ಅಂತಃಪುರದೊಳಕ್ಕೇ ನಡೆ !

ಯೌಗಂಧ—ಕೂಡದು ! ಕೂಡದು ! ಇವಳು ನನ್ನ ತಂಗಿ ; ಇವಳನ್ನು ರಾಜನು ಅಂತಃಪುರಕ್ಕೆ ಕರೆದುಕೊಂಡು ಹೋಗುವುದೆಂದರೇನು ?

ರಾಜಂ—ಆರ್ಯನೆ ! ಇದೇನು ಹೀಗೆ ಹೇಳುವೆ ! ನಿಜವಾಗಿಯೂ ಈಕೆಯು ಮಹಾಸೇನನ ಪುತ್ರಿಯೆ ! ಅದರಲ್ಲಿ ಸಂದೇಹವಿಲ್ಲ.

ಯೌಗಂಧ—ರಾಜನೆ ! ಚೆನ್ನಾಯಿತು ! ಏನನ್ಯಾಯವಿದು ?

ಜನಿಸೆ ಭರತಾನ್ವಯದೆ |
ವಿನಯಾಢ್ಯಂ ಶುಚಿಯಭಿಜ್ಞನೆನೆಸಿಯುಮನ್ಯಾಂ ||
ಗನೆಯಂ ತನಗೆಂದುಯ್ವುದು |
ನಿನಗುಚಿತಮೆ ? ರಾಜಧರ್ಮಗುರು ನೀನಲ್ತೇ ? || ೫೪ ||

ರಾಜಂ—ಒಳ್ಳೆಯದಿರಲಿ ! ರೂಪಸಾದೃಶ್ಯವನ್ನು ಚೆನ್ನಾಗಿ ಪರೀಕ್ಷಿಸಿ ನೋಡುವೆವು. ತೆರೆಯನ್ನು ಒತ್ತರಿಸಿರಿ !

[ಯೌಗಂಧರಾಯಣನೂ, ಅವಂತಿಕೆಯೂ ತಮ್ಮ ತಮ್ಮ ವೇಷಗಳನ್ನು ತೆಗೆದು ಮುಂದೆ ನಿಂತು]

ಯೌಗಂಧ—ಆರ್ಯನಿಗೆ ಜಯವಾಗಲಿ !

ವಾಸವದತ್ತೆ—ಆರ್ಯಪುತ್ರನೆ, ಜಯಶೀಲನಾಗು !

ರಾಜಂ—ಆಹಾ ! ಇವನು ಯೌಗಂಧರಾಯಣನು. ಇವಳೇ ಮಹಾಸೇನನ ಪುತ್ರಿಯಾದ ವಾಸವದತ್ತೆ ! ಅಥವಾ,

ಇದುವೇಂ ಕನಸೋ ಸತ್ಯಮೊ |
ಸುದತಿಯುವಳ್ ಮಗುಳ್ದುಮಿಲ್ಲಿ ಕಾಣಿಸುತಿರ್ಪ್ಪಳ್ ||
ಮೊದಲೆನ್ನ ಕನಸಿನೊಳಮಾ |
ನಿದೆ ರೂಪಮನಲ್ತೆ ಕಂಡು ವಂಚಿತನಾದೆಂ || ೯೫ ||

ಯೌಗಂಧ—ಪ್ರಭೂ ! ಈ ದೇವಿಯನ್ನು ಇದುವರೆಗೂ ನಿನ್ನ ಕಣ್ಣಿಗೆ ಬೀಳ ದಂತೆ ಮರೆಸಿಟ್ಟಿದ್ದ ನಾನು ನಿನ್ನಲ್ಲಿ ಅಪರಾಧಿಯಾದೆನು. ಈ ನನ್ನ ಅಪರಾಧವನ್ನು ಸ್ವಾಮಿಯು ಮನ್ನಿಸಬೇಕು. (ನಮಸ್ಕರಿಸುವನು)

ರಾಜಂ—(ಕೈಹಿಡಿದು ಮೇಲಕ್ಕೆತ್ತಿ) ಸಚಿವೋತ್ತಮಾ ! ಯೌಗಂಧರಾಯಣಾ ! ನೀನಲ್ಲವೇ ?

ಪುಸಿಮರುಳಾಟದೆ, ಯುದ್ಧ |
ಪ್ರಸಕ್ತಿಯಿಂ, ಮಂತ್ರಬಲದಿನಾಗಾಗಳ್ ನೀ ||
ನೆಸಗಿದ ಸಮಯೋಚಿತಸಾ |
ಹಸದಿಂದುದ್ಧರಿಸಿ ಪೊರೆದೆ ! ಮುಳುಗಿರ್ದೆಮ್ಮಂ || ೫೬ ||

ಯೌಗಂಧ—ನಾವು ಪ್ರಭುವಿನ ಭಾಗ್ಯದ ಹಿಂದೆಯೇ ನಡೆಯತಕ್ಕವರಲ್ಲವೆ ?

ಪದ್ಮಾವತಿ—ಇವಳೇ ಪೂಜ್ಯಳಾದ ವಾಸವದತ್ತೆಯೆ ? ಆರ್ಯೆ ! ನಿಜಸ್ಥಿತಿ ಯನ್ನು ತಿಳಿಯದೆ ನಾನು ನಿನ್ನನ್ನು ಸಾಮಾನ್ಯ ಸಖಿಯಂತೆ ಭಾವಿಸಿ ನಡೆದುಕೊಳ್ಳುತ್ತಿದ್ದ ಅತ್ಯಾಚಾರವನ್ನು ಮನ್ನಿಸಬೇಕು, ತಲೆವಾಗಿ ಬೇಡುವೆನು. [ನಮಸ್ಕರಿಸುವಳು.]

ವಾಸವದತ್ತೆ—(ಪದ್ಮಾವತಿಯನ್ನು ಕೈಹಿಡಿದು ಮೇಲಕ್ಕೆತ್ತಿ) ಏಳು! ಏಳು! ದೀರ್ಘ ಸುಮಂಗಲೀ ! ಏಳು ! ವೇಷಾಂತರದಿಂದ ನಿನ್ನ ರಕ್ಷಣೆಯನ್ನಪೇಕ್ಷಿಸಿ ಬಂದ ಈ ಶರೀರವನ್ನಲ್ಲವೇ ಅಪರಾಧಿಯೆಂದು ಹೇಳಬೇಕು.

ಪದ್ಮಾವತಿ—ಅನುಗೃಹೀತಳಾದೆನು.

ರಾಜಂ—ಯೌಗಂಧರಾಯಣಾ! ಈ ದೇವಿಯನ್ನು ಕರೆದುಕೊಂಡು ಹೋಗಿ ಮರೆಮಾಡಿ ಇಡುವುದರಲ್ಲಿ ನಿನ್ನ ಉದ್ದೇಶವೇನು ?

ಯೌಗಂಧ—ಕೌಶಾಂಬೀರಾಜ್ಯವು ತಿರುಗಿ ನಮ್ಮ ಕೈವಶವಾಗುವುದಕ್ಕಾಗಿ ಮಾಡಿದ ಉಪಾಯವಿದು !

ರಾಜಂ—ಒಳ್ಳೆಯದು ! ದೇವಿಯನ್ನು ಈ ಪದ್ಮಾವತಿಯ ವಶದಲ್ಲಿ ನ್ಯಾಸ ರೂಪವಾಗಿ ಕೊಟ್ಟುಹೋದ ಕಾರಣವೇನು ?

ಯೌಗಂಧ—ಮಹಾರಾಜನೆ ? ಪುಷ್ಪಕ ಭದ್ರಕ ಮೊದಲಾದ ಆದೇಶಕರು ಈ ಪದ್ಮಾವತಿಯು ಮುಂದೆ ನಿಮ್ಮ ಪತ್ನಿಯಾಗುವಳೆಂದು ಹಿಂದೆಯೇ ಸೂಚಿಸಿದ್ದರು.

ರಾಜಂ—ಇದೆಲ್ಲಾ ರುಮಣ್ವಂತನಿಗೂ ತಿಳಿದೇ ನಡೆದಿರಬೇಕಲ್ಲವೆ ?

ಯೌಗಂಧ—ಪ್ರಭೂ ! ಎಲ್ಲರಿಗೂ ತಿಳಿದಿದ್ದಿತು.

ರಾಜಂ—ಆಹಾ ! ರುಮಣ್ವಂತನು ಮರ್ಮಿ !

ಯೌಗಂಧ—ಸ್ವಾಮಿ, ಈ ಪ್ರಿಯವೃತ್ತಾಂತವನ್ನು ದೇವಿಗೆ ತಿಳಿಸುವುದಕ್ಕಾಗಿ ಪೂಜ್ಯನಾದ ಈ ರೈಭ್ಯನೂ, ಧಾತ್ರಿಯೂ ಈಗಲೇ ಹೊರಡಲಿ.

ರಾಜಂ—ಹಾಗಲ್ಲ. ನಾವೆಲ್ಲರೂ ಒಟ್ಟಾಗಿ ಈ ಪದ್ಮಾವತಿಯನ್ನು ಮುಂದಿಟ್ಟುಕೊಂಡೇ ದೇವಿಯಬಳಿಗೆ ಹೋಗುವೆವು.

ಯೌಗಂಧ—ಪ್ರಭುವಿನ ಇಷ್ಟದಂತಾಗಲಿ !

(ಭರತವಾಕ್ಯಂ)

ಜಲನಿಧಿಮೇಖಲೆ, ವಿಂಧ್ಯಾ |
ಚಲಹಿಮಶೈಲೇಂದ್ರ ಕರ್ಣಕುಂಡಲೆಯೆನಿಸಿ ||
ರ್ದ್ದಿಳೆಯಿದನೇಕಚ್ಛತ್ರದ |
ನೆಳಲೊಳ್ ಪಾಲಿಸುಗೆ ! ರಾಜಸಿಂಹನರೇಂದ್ರಂ || ೫೭ ||

ಇಲ್ಲಿಗೆ ಸ್ವಪ್ನನಾಟಕವು ಮುಗಿದುದು.

ಮಂಗಳಂ.

PRINTED AT
THE SREEVATHSA PRESS,
MADRAS-14.